ಉಳ್ಳಾಲ ವಾಣಿ
ವಾರ್ಷಿಕ ಚಂದಾದಾರಾಗಿರಿ
ಒಂದು ವರ್ಷ ಪೂರ್ತಿ ಪತ್ರಿಕೆ ಮನೆಗೆ ತಲುಪಿಸಲು
₹250 ಪಾವತಿಸಿ



ಮಂಗಳೂರು ಫೆಬ್ರವರಿ 26–ಮಾರ್ಚ್ 16: 2026 ಸಂಪುಟ 2, ಸಂಚಿಕೆ 14, ಪುಟಗಳು–8 RNI:KNKAN/26/A0422 www.ullalavani.com ullalavani@gmail.com ₹10

# ಉಳ್ಳಾಲ ವಾಣಿ

ಕನ್ನಡ ಪತ್ರಿಕೆ · ಕಡಲ ಮಗಲ್



ಸುದ್ದಿ, ಪತ್ರಿಕೆ ಮತ್ತು ಜಾಹೀರಾತಿಗಾಗಿ ಸಂಪರ್ಕಿಸಿರಿ
ಉಳ್ಳಾಲ ವಾಣಿ
ಅಪ್ಪತ್ತಿ ಕಾಂಪ್ಲೆಕ್ಸ್, ಯೆನೆಪೋಯ ಆಸ್ಪತ್ರೆ ಹತ್ತಿರ, ಕುತ್ತಾರುಪದವು
9972528110



ಪುಟ 2 ಏಳನೇ ನಮೋ ಕುಟೀರಕ್ಕೆ ಶಿಲನ್ಯಾಸ
ಪುಟ 3 ಅಮಾಯಕ ರೈತರು ರಾಜಕೀಯದಾಟಕ್ಕೆ ದಾಳವಾಗುತ್ತಿದ್ದಾರೆಯೇ?
ಪುಟ 4 ಮಂಜನಾಡಿ ಪ್ರಕರಣ, ಮಾನವ ಹಕ್ಕು ಆಯೋಗದ ಎದುರು ಸಂತ್ರಸ್ತೆ ಬಾವುಕ
ಪುಟ 6 ಧ್ವನಿ ಮತ್ತು ಬೆಳಕು ಮಾಲಕರ ಸಂಘದಿಂದ ಫ್ಯಾನ್ ಕೊಡುಗೆ


## ಆಸ್ಪತ್ರೆ ಎದುರಿನ ಚರಂಡಿ ಸಮಸ್ಯೆಗೆ ಒಂದು ವರ್ಷ

### ಸ್ಥಳೀಯಾಡಳಿತದಿಂದ ಎ.ಸಿ ಕೋರ್ಟಿನವರೆಗೆ ಪ್ರಕರಣ





**ದೇರಳಕಟ್ಟೆ:** ಇಲ್ಲಿನ ಖಾಸಗಿ ಆಸ್ಪತ್ರೆ ಎದುರುಗಡೆಯ ಚರಂಡಿ ಸಮಸ್ಯೆಗೆ ವರ್ಷ ಕಳೆದರೂ ಪರಿಹಾರ ಇನ್ನೂ ದೊರೆತಿಲ್ಲ. ಆರೋಗ್ಯದಾಯಕವಾಗಿರಬೇಕಾದ ಆಸ್ಪತ್ರೆ ಸುತ್ತಲಿನ ವಾತಾವರಣದಲ್ಲಿ ಅನಾರೋಗ್ಯ ಎದ್ದು ಕಾಣುತ್ತಿದೆ. ಒಂದು ವರ್ಷದಿಂದ ಕೋಟೆಕಾರು ಪಟ್ಟಣ ಪಂಚಾಯತ್ ಹಾಗೂ ಬೆಳ್ಮ ಗ್ರಾಮ ಪಂಚಾಯತ್ ಹಾಗೂ ಲೋಕೋಪಯೋಗಿ ಇಲಾಖೆ ಅಧಿಕಾರಿಗಳ ಜುಗಲ್ ಬಂದಿಯಿಂದ ಸದ್ಯ ಪ್ರಕರಣ ಸಹಾಯಕ ಆಯುಕ್ತರ ನ್ಯಾಯಾಲಯದಲ್ಲಿ ಬಂದು ನಿಂತಿದೆ.

**ಏನದು ಸಮಸ್ಯೆ:** ಬೆಳ್ಮ ಗ್ರಾಮ ಪಂಚಾಯತ್ ಗೆ ಸೇರಿದ ವಾಣಿಜ್ಯ, ಹವಸತಿ ಕಟ್ಟಡಗಳಿಂದ ಶೌಚ, ತ್ಯಾಜ್ಯ ನೀರು ಎಲ್ಲವನ್ನು ಕನ್ನೀಲ್ಡ್ ಪೈಪ್ ಲೈನ್ ಮಾಡುವ ಮುಖೇನ ಮಳೆ ನೀರು ಹರಿಯುವ ಕೋಟೆಕಾರು ಪಟ್ಟಣ ಪಂಚಾಯತ್ ಸಂಪರ್ಕಿಸುವ ಬಗಂಬಿಲ ಪ್ರದೇಶಕ್ಕೆ ಬಿಡಲಾಗುತಿತ್ತು. ಮಳೆಗಾಲದಲ್ಲಿ ತ್ಯಾಜ್ಯ, ಶೌಚ ನೀರೆಲ್ಲವೂ ಹೆಚ್.ಎನ್ ಸಂಸ್ಥೆಗೆ ಸೇರಿದ ಖಾಸಗಿ ಜಾಗ, ಕಾನ್ವೆಂಟ್, ಹಾಸ್ಟೆಲ್, ಮನೆಗಳು, ನಿಟ್ಟೆ ಆಸ್ಪತ್ರೆಯ ರಸ್ತೆಗಳ ಮುಖೇನ ಹರಿಯುತಿತ್ತು. ಮಳೆ ಮುಗಿದ ತಕ್ಷಣ ದುರ್ವಾಸನೆಯುಕ್ತ ನೀರು ಖಾಸಗಿ ಜಮೀನಿನಲ್ಲಿ ಇಕ್ಕಟ್ಟಾಗಿ ಪ್ರದೇಶವಿಡೀ ದುರ್ನಾತ ಬೀರಲು ಆರಂಭವಾಗಿತ್ತು. ಈ ಬಗ್ಗೆ ಕೋಟೆಕಾರು ಪಟ್ಟಣ ಪಂಚಾಯತ್ ಪೌರಾಯುಕ್ತರು, ಬೆಳ್ಮ ಗ್ರಾಮ ಪಂಚಾಯತ್ ಮುಖ್ಯಾಧಿಕಾರಿಗಳಿಗೆ ದೂರುಗಳನ್ನು ಸಲ್ಲಿಸುತ್ತಾ, ಪರಿಹಾರ ಸಿಗದೇ ಇದ್ದಾಗ ತ್ಯಾಜ್ಯ ನೀರು ಬಿಡುವ ವಿರುದ್ಧ ಚರಂಡಿಯನ್ನೇ ಬಂದ್ ಮಾಡಿದ್ದಾರೆ. ನಂತರ ಸ್ಥಳೀಯಾಡಳಿತವೂ ವಾಣಿಜ್ಯ, ವಸತಿಗಳಿಂದ ಕೋಟೆಕಾರು ಗ್ರಾಮಕ್ಕೆ ಬರುವ ಪೈಪನ್ನೇ ಬಂದ್ ನಡೆಸಿದೆ. ಇದರ ಪರಿಣಾಮವಾಗಿ ಆಸ್ಪತ್ರೆ ಎದುರಿನ ರಿಕ್ಷಾ ಪಾರ್ಕ್ ಸಮೀಪವೇ ನೀರು ಶೇಖರಣೆಗೊಂಡು ಪ್ರದೇಶವಿಡೀ ದುರ್ನಾತ ಬೀರಲು ಆರಂಭವಾಯಿತು. ಕೋ–ಟೆಕಾರು ಮುಖ್ಯಾಧಿಕಾರಿಗಳು ಬೆಳ್ಮ ಗ್ರಾ.ಪಂ ಮುಖ್ಯಾಧಿಕಾರಿಗೆ ದೂರು ನೀಡಿದಾಗ, ಬೆಳ್ಮ ಮುಖ್ಯಾಧಿಕಾರಿಗಳು ಲೋಕೋಪಯೋಗಿ ಇಲಾಖೆಯತ್ತ ಕೈ ತೋರಿಸಿದರು. ಆದ–ರೆ ಲೋಕೋಪಯೋಗಿ ಇಲಾಖೆ ಮಳೆ ನೀರಿನ ಚರಂಡಿ ನಿರ್ಮಾಣವಷ್ಟೇ ಇಲಾಖೆಯ ಕೆಲಸ, ಮುಚ್ಚುವ ಕೆಲಸ ಅಸಾಧ್ಯ. ಸ್ಥಳೀಯಾಡಳಿತಗಳೇ ಸಮಸ್ಯೆಗೆ ಪರಿಹಾರ ಕಾಣಿಸಬೇಕು ಎಂದು ದೂರವೇ ಉಳಿದಿದ್ದರು. ಈ ಕುರಿತು ಕೋಟೆಕಾರು ಪಟ್ಟಣ ಪಂಚಾಯತ್ ನಲ್ಲಿ ಹಮ್ಮಿಕೊಂಡ ಸಾಮಾನ್ಯ ಸಭೆಯಲ್ಲಿ ಕಾನೂನು ಸಲಹೆಯನ್ನು ಪಡೆದುಕೊಂಡು ಸಹಾಯಕ ಆಯುಕ್ತರಲ್ಲಿ ಪ್ರಕರಣ ದಾಖಲಿಸಲಾಗಿದೆ. ಸಹಾಐಕ ಆಯುಕ್ತರ ನ್ಯಾಯಾಲಯದಲ್ಲಿ ಪ್ರಕರಣ ತುರ್ತಾಗಿ ಇತ್ಯರ್ಥವಾಗುವ ನಿರೀಕ್ಷೆಯಲ್ಲಿ ಸಾರ್ವಜನಿಕರು ಇದ್ದರೂ, ಈವರೆಗೆ ಬಗೆಹರಿಯಲಿಲ್ಲ. ಈ ನಿಟ್ಟಿನಲ್ಲಿ ರಿಕ್ಷಾ ಚಾಲಕರು ತುಳುನಾಡು ರಕ್ಷಣಾ ವೇದಿಕೆಯ ಜೊತೆಗೆ ಸೇರಿಕೊಂಡು ಚರಂಡಿ ಸಮಸ್ಯೆ ತುರ್ತಾಗಿ ಪರಿಹರಿಸುವಂತೆ ಒತ್ತಾಯಿಸಿ ಪ್ರತಿಭಟನೆ ನಡೆಸಿದ್ದಾರೆ.

ತುಲುನಾಡ ರಕ್ಷಣಾ ವೇದಿಕೆ ಸ್ಥಾಪಕಾಧ್ಯಕ್ಷರಾದ ಯೋಗಿಶ್ ಶೆಟ್ಟಿ ಜೆಪ್ಪು ಮಾತನಾಡಿ, ಕಟ್ಟಡಗಳು ತಲೆಎತ್ತಿದ ಕೂಡಲೇ ಅಭಿವೃದ್ಧಿ ಕೇಂದ್ರ ಹೇಳಲು ಸಾಧ್ಯವಿಲ್ಲ. ಮೂಲಸೌಕರ್ಯಗಳು ಉತ್ತಮ ಗುಣಮಟ್ಟದಲ್ಲಿ

↘ 2ನೇ ಪುಟಕ್ಕೆ

## ತೊಕ್ಕೊಟ್ಟುವಿನಲ್ಲಿ ಅಬ್ಬಕ್ಕ ಭವನ

## ಕೊಣಾಜೆಯಲ್ಲಿ ಬ್ಯಾರಿ ಭವನ, ಶೀಘ್ರವೇ ಕಾಮಗಾರಿ ಆರಂಭ





**ತೊಕ್ಕೊಟ್ಟು:** ತೊಕ್ಕೊಟ್ಟುವಿನಲ್ಲಿ ಅಬ್ಬಕ್ಕ ಭವನದ ಯೋಜನೆಗೆ ಮರುಜೀವ ದೊರೆತಿದೆ. ಸ್ಪೀಕರ್ ಖಾದರ್ ಅಧಿಕಾರಿಗಳೊಂದಿಗೆ ಸ್ಥಳ ಪರಿಶೀಲನೆ ನಡೆಸಿ ನೂತನ ಕಟ್ಟಡ ನಿರ್ಮಾಣಕ್ಕೆ ಗಡಿ ಗುರುತು ಪ್ರಕ್ರಿಯೆ ನಡೆಸಿದ್ದಾರೆ. ಜೊತೆಗೆ ಮುಂದಿನ ಎಪ್ರಿಲ್ ತಿಂಗಳಿನಲ್ಲಿ ಮತ್ತೊಂದು ಅಬ್ಬಕ್ಕ ಉತ್ಸವವನ್ನು ಉಳ್ಳಾಲ ಉತ್ಸವವಾಗಿ ನಡೆಸಲಿದ್ದೇವೆ ಎಂದಿದ್ದಾರೆ. ಜೊತೆಗೆ ಕೊಣಾಜೆ ಮಂಗಳೂರು ವಿ.ವಿ ಸಮೀಪ ಬ್ಯಾರಿ ಭವನಕ್ಕೂ ಜಾಗವನ್ನು ಗುರುತಿಸಿರುವುದನ್ನು ತಿಳಿಸಿದ್ದಾರೆ.

ಹನ್ನೆರಡು ವರುಷಗಳ ಹಿಂದೆ ಜಿಲ್ಲಾ ಉಸ್ತುವಾರಿ ಸಚಿವರಾಗಿದ್ದ ರಮಾನಾಥ ರೈ ಅವರು ತೊಕ್ಕೊಟ್ಟಿನ ಕೇಂದ್ರ ಬಸ್ ನಿಲ್ದಾಣ ಬಳಿಯ ಜಾಗದಲ್ಲಿ ಅಬ್ಬಕ್ಕ ಭವನ ನಿರ್ಮಾಣಕ್ಕೆ ಶಂಕುಸ್ಥಾಪನೆ ನೆರವೇರಿಸಿದ್ದರೂ ತಾಂತ್ರಿಕ ಸಮಸ್ಯೆಗಳಿಂದ ಕಟ್ಟಡ ನಿರ್ಮಾಣ ಕಾಮಗಾರಿ ನೆನೆಗುದಿಗೆ ಬಿದ್ದಿತ್ತು.

ಈ ವೇಳೆ ಮಾತನಾಡಿದ ಸ್ಪೀಕರ್ ಖಾದರ್, 2018 ರಲ್ಲಿ ನಾನು ಸಚಿವನಾಗಿದ್ದಾಗ ಅಂದಿನ ಮುಖ್ಯಮಂತ್ರಿ ಸಿದ್ಧರಾಮಯ್ಯ ಮತ್ತು ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಚಿವೆ ಉಮಾಶ್ರೀಯವರು ಉಳ್ಳಾಲ ತಾಲೂಕಿನ ತೊಕ್ಕೊಟ್ಟಿನಲ್ಲಿ ಅಬ್ಬಕ್ಕ ಭವನ ನಿರ್ಮಾಣಕ್ಕೆ ಎಂಟು ಕೋಟಿ ರೂ. ಅನುದಾನವನ್ನು ಬಿಡುಗಡೆ ಮಾಡಿದ್ದರು. ಆದರೆ ಕೆಲವೊಂದು ತಾಂತ್ರಿಕ ಕಾರಣಗಳಿಂದಾಗಿ ಅಂ–ದು ಬಿಡುಗಡೆಯಾದ ಅನುದಾನವು ಹಾಗೆಯೇ ಬಾಕಿ ಉಳಿದಿತ್ತು. ಇದೀಗ ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಕರ್ನಾಟಕ ಗೃಹ ಮಂಡಳಿ, ಜಿಲ್ಲಾಧಿಕಾರಿಗಳ ನಡುವೆ ಮಾತುಕತೆ ನಡೆದ ಬಳಿಕ ಸಮಸ್ಯೆ ಬಗೆಹರಿದಿದ್ದು, ಇಂದು ಅಬ್ಬಕ್ಕ ಭವನ ನಿರ್ಮಾಣಕ್ಕೆ ಗಡಿ ಗುರುತು ಮಾಡಿ ಸ್ಥಳ ಪರಿಶೀಲನೆ ನಡೆಸಲಾಗಿದೆ. ಶೀಘ್ರವೇ ಕಾಮಗಾರಿ ಆರಂಭಿಸಲಿದ್ದು, ಕೆಲವೇ ದಿನಗಳಲ್ಲಿ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಚಿವರಾದ ಶಿವರಾಜ್ ತಂಗಡಗಿ ಅವರು ಅಬ್ಬಕ್ಕ ಭವನ ಮತ್ತು ಕೊಣಾಜೆ ಮಂಗಳೂರು ವಿವಿ ಬಳಿಯ ವಿಶಾಲ ಪ್ರದೇಶದಲ್ಲಿ ನಿರ್ಮಾಣಗೊಳ್ಳಲಿರುವ ಬ್ಯಾರಿ ಭವನಕ್ಕೂ ಅಧಿಕೃತವಾಗಿ ಶಂಕು ಸ್ಥಾಪನೆ ನೆರವೇರಿಸಲಿರುವರೆಂದರು.

ಅಬ್ಬಕ್ಕ ಭವನ ನಿರ್ಮಾಣದಿಂದ ಭವಿಷ್ಯದ ಅಭಿವೃದ್ಧಿ ಕಾಮಗಾರಿಗಳಿಗೆ ತೊಂದರೆಯಾಗ ಬಾರದೆಂಬ ಮುಂಜಾಗೃತೆಯಿಂದ ಸ್ಥಳೀಯರ ಅಭಿಪ್ರಾಯಗಳನ್ನು ಸಂಗ್ರಹಿಸಲಾಗಿದೆ. ಅಬ್ಬಕ್ಕ ಭವನವನ್ನು ಸುಂದರವಾಗಿ ನಿರ್ಮಿಸುವ ದೃಷ್ಟಿಯಲ್ಲಿ ಪ್ರದೇಶವನ್ನ ಪರಿಶೀಲನೆ ನಡೆಸಲಾಗಿದೆ. ಉಳ್ಳಾಲವು ಪ್ರತ್ಯೇಕ ತಾಲೂಕಾಗಿ ಮಾರ್ಪಟ್ಟಾಗಲೂ ನಾವು ಮಂಗಳೂರಿನ

↘ 2ನೇ ಪುಟಕ್ಕೆ

**41 ಸೆಂಟ್ಸ್ ಜಾಗದಲ್ಲಿ 22,223 ಚದರ ಅಡಿಯ ಮೂರು ಮಹಡಿಯುಳ್ಳ ಭವನ ನಿರ್ಮಾಣಗೊಳ್ಳಲಿದ್ದು, ಅದರಲ್ಲಿ 410 ಆಸನಗಳುಳ್ಳ ಸುಸಜ್ಜಿತ ಸಭಾಂಗಣ, ಗ್ರೀನ್ ರೂಮ್, ಮೀಟಿಂಗ್ ಹಾಲ್, ಅಬ್ಬಕ್ಕಳ ಚರಿತ್ರೆ ಕುರಿತಾದ ಮ್ಯೂಸಿಯಮ್, ಕೆಳ ಅಂತಸ್ತಲ್ಲಿ ಸುಸಜ್ಜಿತ ಕಾರ್ ಪಾರ್ಕಿಂಗ್ ವ್ಯವಸ್ಥೆ ಕಲ್ಪಿಸಲಾಗಿದೆ.**




ನಿಮ್ಮ ಉಳ್ಳಾಲವಾಣಿ
1 ವರ್ಷ 8 ತಿಂಗಳುಗಳ ಪಯಣ

ಸಂಸ್ಥೆ ಆರಂಭವಾಗಿ ಇಂದು ಒಂದು ವರ್ಷ ಎಂಟು ತಿಂಗಳುಗಳು ಕಳೆದಿವೆ. ನಿರೀಕ್ಷಿತ ಸಂಖ್ಯೆಯ ಮುದ್ರಿತ ಓದುಗರನ್ನು ಇನ್ನೂ ಸಂಪೂರ್ಣವಾಗಿ ಸಾಧಿಸಲು ಸಾಧ್ಯವಾಗದೇ ಇದ್ದರೂ, ನಮ್ಮ ಡಿಜಿಟಲ್ ವೇದಿಕೆಯ ಮೂಲಕ ಈಗಾಗಲೇ ಲಕ್ಷಾಂತರ ಮಂದಿಯನ್ನು ತಲುಪಿರುವುದು ನಮ್ಮ ಹೆಮ್ಮೆ.
ಆದರೆ, ಪತ್ರಿಕೆಯೇ ನಮ್ಮ ಸಂಸ್ಥೆಯ ಉಸಿರು. ಆದ್ದರಿಂದ ಹೆಚ್ಚಿನ ಓದುಗರನ್ನು ನಾವು ಆತ್ಮೀಯವಾಗಿ ನಿರೀಕ್ಷಿಸುತ್ತಿದ್ದೇವೆ.
ಕಳೆದ ಜನವರಿ 30ಗಳವರೆಗೆ 15 ದಿನಗಳಿಗೊಮ್ಮೆ ಪ್ರಕಟವಾಗುತ್ತಿದ್ದ ಪತ್ರಿಕೆ, ಇದೀಗ ಪತ್ರಿಕಾ ನೋಂದಣಿ ಮುಖ್ಯ ಕಚೇರಿ, ನವದೆಹಲಿ (PRGI) ನೀಡಿದ ಅನುಮತಿಯಂತೆ 19 ದಿನಗಳಿಗೊಮ್ಮೆ ಪ್ರಕಟವಾಗುತ್ತಿದೆ.
ಕಳೆದ ಎರಡು ಸಂಚಿಕೆಗಳಿಂದ ಈ ಹೊಸ ವೇಳಾಪಟ್ಟಿಯಂತೆ ಮುದ್ರಣ ನಡೆಯುತ್ತಿದೆ.
ತಾಲೂಕಿನ ಪ್ರತಿಯೊಂದು ಮನೆಗೂ ಪತ್ರಿಕೆ ತಲುಪಿಸುವ ಉದ್ದೇಶದಿಂದ ಅಂಚೆ ಇಲಾಖೆಯ ಸಹಾಯವನ್ನು ಪಡೆದುಕೊಳ್ಳುತ್ತಿದ್ದು ಮನೆ ಮನೆಗೂ ತಲುಪಿಸುವ ಜವಾಬ್ದಾರಿಯನ್ನು ನಾವು ಹೊತ್ತಿದ್ದೇವೆ.

ನಮ್ಮ ವಿನಮ್ರ ವಿನಂತಿ
ತಾಲೂಕಿನ ಒಳಗಿನ ನಿಖರ ಮತ್ತು ನಂಬಲರ್ಹ ಸುದ್ದಿಗಳನ್ನು ಮನೆಮನೆಗೆ ತಲುಪಿಸಲು, ನೀವು ಎಲ್ಲರೂ ಚಂದಾದಾರರಾಗುವ ಮೂಲಕ ನಮ್ಮನ್ನು ಪ್ರೋತ್ಸಾಹಿಸಬೇಕಾಗಿ ವಿನಂತಿಸುತ್ತೇವೆ.

ಒಂದು ವರ್ಷದ ಚಂದಾ ದರ
₹250/- ಮಾತ್ರ
G Pay
ನಿಮ್ಮ ಸಹಕಾರವೇ ನಮ್ಮ ಶಕ್ತಿ.
ನಿಮ್ಮ ಉಳ್ಳಾಲವಾಣಿ
ನಿಮ್ಮದೇ ಪತ್ರಿಕೆ.

# ಸಂಪಾದಕೀಯ

## ವಿವಾಹ ನೋಂದಣಿ ಸ್ವಾತಂತ್ರ್ಯಕ್ಕೂ, ಪೋಷಕರ ಹಕ್ಕಿಗೂ ಸಮತೋಲನ ಬೇಕು

ಭಾರತದಲ್ಲಿ ಮದುವೆ ಎಂಬುದು ಕೇವಲ ಎರಡು ವ್ಯಕ್ತಿಗಳ ಸಂಬಂಧವಲ್ಲ, ಅದು ಎರಡು ಕುಟುಂಬಗಳ, ಎರಡು ಸಂಸ್ಕೃತಿಗಳ ಸಂಗಮ. ಆದರೆ ಇಂದಿನ ಕಾಲದಲ್ಲಿ ಪ್ರೀತಿ ವಿವಾಹಗಳು, ಅಂತರ್ಜಾತಿ, ಅಂತರಧರ್ಮ ವಿವಾಹಗಳು ಹೆಚ್ಚಾಗುತ್ತಿರುವ ಸಂದರ್ಭದಲ್ಲಿ "ವೈಯಕ್ತಿಕ ಸ್ವಾತಂತ್ರ್ಯ" ಮತ್ತು "ಪೋಷಕರ ಹಕ್ಕು"ಗಳ ನಡುವೆ ಸಂಘರ್ಷ ಉಂಟಾಗುತ್ತಿರುವುದು ವಾಸ್ತವ. ಖಣಿಡಿಜಟಜ ಅಠಣಡಿಣ ಠಜ ಖಣಜುಜಿ ನೀಡಿದ ಹಲವು ತೀರ್ಪುಗಳಲ್ಲಿ ವಿವಾಹ ನೋಂದಣಿ ಕಡ್ಡಾಯವಾಗಬೇಕು ಎಂದು ಸೂಚಿಸಲಾಗಿದೆ. ಇದರ ಉದ್ದೇಶ ಮಹಿಳೆಯರ ಹಕ್ಕು ರಕ್ಷಣೆ, ಆಸ್ತಿ ಹಕ್ಕು, ಮಕ್ಕಳ ಕಾನೂನು ಮಾನ್ಯತೆ ಮತ್ತು ದಾಂಪತ್ಯ ಭದ್ರತೆ. ಸಾಮಾನ್ಯವಾಗಿ ವಿವಾಹ ನೋಂದಣಿಗೆ ಮೂರು ಸಾಕ್ಷಿಗಳು ಅಗತ್ಯವಿರುತ್ತಾರೆ. ಆದರೆ ಸಾಮಾಜಿಕ ಸಮತೋಲನದ ದೃಷ್ಟಿಯಿಂದ, ಕಾಯ್ದೆಯಲ್ಲಿ ಕೆಲವು ತಿದ್ದುಪಡಿ ಅಗತ್ಯವಿದೆ ಎಂಬ ಚಿಂತನೆ ವ್ಯಕ್ತವಾಗುತ್ತಿದೆ. ವಿವಾಹವಾಗುವ ಯುವ ಜೋಡಿ ಮದುವೆ ನೋಂದಣಿ ಮಾಡುವ ಮೊದಲು ಪೋಷಕರಿಗೆ ಮಾಹಿತಿ ನೀಡುವುದು ಕಡ್ಡಾಯವಾಗಬೇಕು. ಜೊತೆಗೆ ಸಾಕ್ಷಿಗಳ ಸಂಖ್ಯೆಯನ್ನು ನಾಲ್ಕಕ್ಕೆ ಹೆಚ್ಚಿಸಿ, ಸಾಧ್ಯವಾದಲ್ಲಿ ಹೆಣ್ಣು ಮತ್ತು ಗಂಡಿನ ತಂದೆ ತಾಯಿ ಸಹಿಯನ್ನು ಕಾನೂನಾತ್ಮಕ ಸಾಕ್ಷಿಯಾಗಿ ಪರಿಗಣಿಸುವ ವ್ಯವಸ್ಥೆ ಬರಬೇಕು. ಇದರಿಂದ ಎರಡು ಪ್ರಯೋಜನಗಳು ಸಿಗುತ್ತವೆ: 1. ಗೌಪ್ಯತೆ ಮತ್ತು ಸ್ವಾತಂತ್ರ್ಯದ ಹೆಸರಿನಲ್ಲಿ ಪೋಷಕರ ಹಕ್ಕು ಸಂಪೂರ್ಣವಾಗಿ ನಿರ್ಲಕ್ಷ್ಯಗೊಳ್ಳುವುದಿಲ್ಲ. 2. ಮದುವೆ ನಂತರ ಉಂಟಾಗುವ ಕುಟುಂಬ ವೈಷಮ್ಯ, ಕಾನೂನು ವಿವಾದಗಳನ್ನು ಕಡಿಮೆ ಮಾಡಬಹುದು.



ಆದರೆ ಮತ್ತೊಂದು ಅಂಶವೂ ಅತಿ ಮುಖ್ಯ. ಕೆಲವೊಮ್ಮೆ ಪೋಷಕರು ಸಂಪ್ರದಾಯ, ಜಾತಿ, ಧರ್ಮದ ಹೆಸರಿನಲ್ಲಿ ಪ್ರೀತಿ ವಿವಾಹಗಳಿಗೆ ಅಡ್ಡಿಪಡಿಸುತ್ತಾರೆ. ಇಂತಹ ಸಂದರ್ಭಗಳಲ್ಲಿ ಕಾಯ್ದೆಯಲ್ಲಿ ಸ್ಪಷ್ಟ provision ಇರಬೇಕು . ಪೋಷಕರು ಅಡ್ಡಿಪಡಿಸಿದರೆ, ಅವರು ಕಾರಣವನ್ನು ಲಿಖಿತವಾಗಿ ನೀಡಬೇಕು. ಅದು ಕಾನೂನುಬದ್ಧ, ಮಾನವ ಹಕ್ಕುಗಳಿಗೆ ವಿರುದ್ಧವಲ್ಲದ ಕಾರಣವಾಗಿರಬೇಕು. Parliament of India ಮತ್ತು ರಾಜ್ಯಗಳ ಶಾಸನಸಭೆಗಳು ಈ ವಿಷಯದಲ್ಲಿ ಸಮತೋಲನ ಕಾಯ್ದೆಯನ್ನು ತರಬೇಕಾಗಿದೆ. ಯುವಕರ ವೈಯಕ್ತಿಕ ಸ್ವಾತಂತ್ರ್ಯವನ್ನು ರಕ್ಷಿಸುವುದರ ಜೊತೆಗೆ, ಪೋಷಕರ ಮಾನಸಿಕ ಹಕ್ಕು ಮತ್ತು ಕುಟುಂಬದ ಸೌಹಾರ್ದವನ್ನು ಉಳಿಸುವ ಕಾನೂನು ಅಗತ್ಯವಾಗಿದೆ. ಸಮಾಜದಲ್ಲಿ ಪ್ರೀತಿ-ಪ್ರೇಮವನ್ನು ಅಪರಾಧದಂತೆ ಕಾಣುವ ಮನೋಭಾವವೂ ಕಡಿಮೆಯಾಗಬೇಕು. ಪ್ರೀತಿ ಮಾಡಿದವರನ್ನು ಬೆದರಿಸುವುದು, ಹಲ್ಲೆ ಮಾಡುವುದು, ಸಮಾಜದಿಂದ ಬಹಿಷ್ಕರಿಸುವುದು ಇವುಗಳ ವಿರುದ್ಧ ಕಠಿಣ ಕಾನೂನು ಕ್ರಮಗಳಿರಬೇಕು. ಕೊನೆಯಲ್ಲಿ, ಮದುವೆ ಎಂಬುದು ಕೇವಲ ಕಾನೂನು ದಾಖಲೆ ಅಲ್ಲ. ಅದು ನಂಬಿಕೆ, ಜವಾಬ್ದಾರಿ ಮತ್ತು ಪರಸ್ಪರ ಗೌರವದ ಬಂಧ. ಕಾನೂನುಗಳು ಸ್ವಾತಂತ್ರ್ಯ ಮತ್ತು ಕುಟುಂಬ ಮೌಲ್ಯಗಳ ನಡುವೆ ಸಮತೋಲನ ಸಾಧಿಸಿದಾಗ ಮಾತ್ರ ಸಮಾಜದಲ್ಲಿ ಶಾಂತಿ ಮತ್ತು ನ್ಯಾಯ ಸ್ಥಾಪನೆ ಸಾಧ್ಯ.

ವಿವಾಹವು ಕೇವಲ ಇಬ್ಬರ ಸಂಬಂಧವಲ್ಲ. ಅದು ಎರಡು ಕುಟುಂಬಗಳ, ಸಮಾಜದ ಮತ್ತು ಕಾನೂನಿನ ದೃಷ್ಟಿಯಿಂದ ಮಹತ್ವವಾದ ಬಾಂಧವ್ಯ. ಇತ್ತೀಚಿನ ದಿನಗಳಲ್ಲಿ ಯುವಜನರ ವೈಯಕ್ತಿಕ ಸ್ವಾತಂತ್ರ್ಯ ಹೆಚ್ಚುತ್ತಿರುವಂತೆಯೇ, ಪೋಷಕರ ಆಶಯಗಳು ಮತ್ತು ಸಂಪ್ರದಾಯಗಳೂ ಸಮಾನವಾಗಿ ಪ್ರಸ್ತುತವಾಗಿವೆ. ಈ ಹಿನ್ನೆಲೆ ವಿವಾಹ ನೋಂದಣಿಯಲ್ಲಿ ಸ್ವಾತಂತ್ರ್ಯ ಮತ್ತು ಪೋಷಕರ ಹಕ್ಕುಗಳ ನಡುವೆ ಸಮತೋಲನ ಅಗತ್ಯವಾಗುತ್ತಿದೆ.

ಭಾರತದಲ್ಲಿ ವಿವಾಹ ನೋಂದಣಿ ಕಾನೂನುಬದ್ಧವಾಗಿ ಮಹತ್ವದ್ದಾಗಿದೆ. Hindu Marriage Act ಹಾಗೂ Special Marriage Act ಪ್ರಕಾರ ವಿವಾಹವನ್ನು ನೋಂದಾಯಿಸುವುದು ಕಾನೂನಾತ್ಮಕ ರಕ್ಷಣೆ ನೀಡುತ್ತದೆ. ವಿಶೇಷವಾಗಿ ಅಂತರ್ಜಾತಿ, ಅಂತರ್ಧರ್ಮ ವಿವಾಹಗಳಲ್ಲಿ ನೋಂದಣಿ ದಂಪತಿಗಳಿಗೆ ಭದ್ರತೆ ಒದಗಿಸುತ್ತದೆ. ಆದರೆ ಪ್ರಶ್ನೆ ಏನೆಂದರೆ ಪ್ರಾಪ್ತವಯಸ್ಕರಾದ ಇಬ್ಬರು ತಮ್ಮ ಇಚ್ಛೆಯಿಂದ ವಿವಾಹವಾಗಲು ನಿರ್ಧರಿಸಿದಾಗ ಪೋಷಕರ ಅನುಮತಿ ಕಡ್ಡಾಯವಾಗಬೇಕೇ? ಕಾನೂನು ಪ್ರಕಾರ, ಪ್ರಾಪ್ತವಯಸ್ಕರಿಗೆ ತಮ್ಮ ಜೀವನ ಸಂಗಾತಿಯನ್ನು ಆಯ್ಕೆಮಾಡುವ ಹಕ್ಕು ಇದೆ. ಇದು ಸಂವಿಧಾನಬದ್ಧ ಸ್ವಾತಂತ್ರ್ಯ. ಆದರೆ ಭಾರತೀಯ ಸಮಾಜದ ಸಾಂಸ್ಕೃತಿಕ ಹಿನ್ನೆಲೆಯನ್ನು ಗಮನಿಸಿದರೆ, ಪೋಷಕರ ಆಶಯ ಮತ್ತು ಅನುಭವವನ್ನು ಸಂಪೂರ್ಣವಾಗಿ ಕಡೆಗಣಿಸುವುದೂ ಸರಿಯಲ್ಲ.

**ಸಂಪಾದಕ**

### ಓದುಗರ ಪತ್ರ

ತೊಕ್ಕೊಟ್ಟು ಜಂಕ್ಷನ್ ಪ್ರದೇಶದಲ್ಲಿ ಬಾಯ್ತೆರೆದಿರುವ ಚರಂಡಿಗಳು ಸಾರ್ವಜನಿಕರಿಗೆ ಗಂಭೀರ ಅಪಾಯವಾಗಿವೆ. ದಿನನಿತ್ಯ ಸಾವಿರಾರು ವಾಹನಗಳು ಸಂಚರಿಸುವ ಈ ಪ್ರಮುಖ ತಿರುವಿನಲ್ಲಿ ಪಾದಚಾರಿಗಳು, ವಿದ್ಯಾರ್ಥಿಗಳು ಹಾಗೂ ವೃದ್ಧರು ಸಂಚರಿಸುವುದು ಕಷ್ಟಕರವಾಗಿದೆ.

ಚರಂಡಿಗಳ ಮೇಲಿನ ಸ್ಲ್ಯಾಬ್‌ಗಳು ಒಡೆದು ಬಿದ್ದಿರುವುದರಿಂದ ಅಥವಾ ಸಂಪೂರ್ಣವಾಗಿ ಇಲ್ಲದಿರುವುದರಿಂದ ಅಪಘಾತ ಸಂಭವಿಸುವ ಸಾಧ್ಯತೆ ಹೆಚ್ಚಾಗಿದೆ. ವಿಶೇಷವಾಗಿ ಮಳೆಗಾಲದಲ್ಲಿ ನೀರು ತುಂಬಿಕೊಂಡಾಗ ಚರಂಡಿ ಗೋಚರಿಸದೆ ಅಪಾಯ ಇನ್ನಷ್ಟು ಹೆಚ್ಚಾಗುತ್ತದೆ.

ಸ್ಥಳೀಯ ನಿವಾಸಿಗಳು ಮತ್ತು ವ್ಯಾಪಾರಸ್ಥರು ಹಲವು ಬಾರಿ ಸಂಬಂಧಿತ ಅಧಿಕಾರಿಗಳ ಗಮನಕ್ಕೆ ತಂದಿದ್ದರೂ ಇನ್ನೂ ಸಮರ್ಪಕ ದುರಸ್ತಿ ಕಾರ್ಯ ಆರಂಭವಾಗಿಲ್ಲ ಎಂಬ ಅಸಮಾಧಾನ ವ್ಯಕ್ತವಾಗುತ್ತಿದೆ. ತೆರೆದ ಚರಂಡಿಗಳಿಂದ ದುರ್ವಾಸನೆ ಹಾಗೂ ಅಸ್ವಚ್ಛತೆ ಕೂಡ ಹೆಚ್ಚಾಗುತ್ತಿದ್ದು, ಆರೋಗ್ಯ ಸಮಸ್ಯೆಗಳ ಭೀತಿ ಎದುರಾಗುತ್ತಿದೆ.

ಜನಸಂದಣಿ ಪ್ರದೇಶವಾದ ತೊಕ್ಕೊಟ್ಟು ಜಂಕ್ಷನ್‌ನಲ್ಲಿ ಯಾವುದೇ ಅನಾಹುತ ಸಂಭವಿಸುವ ಮೊದಲು ಸಂಬಂಧಿತ ಇಲಾಖೆ ತಕ್ಷಣ ಕ್ರಮ ಕೈಗೊಂಡು ಚರಂಡಿಗಳನ್ನು ಶಾಶ್ವತವಾಗಿ ದುರಸ್ತಿಗೊಳಿಸಬೇಕು ಎಂಬುದು ಸಾರ್ವಜನಿಕರ ಆಗ್ರಹವಾಗಿದೆ. ಸಾರ್ವಜನಿಕರ ಸುರಕ್ಷತೆ ಮತ್ತು ಆರೋಗ್ಯದ ದೃಷ್ಟಿಯಿಂದ ವಿಳಂಬವಿಲ್ಲದೆ ಕ್ರಮ ಕೈಗೊಳ್ಳುವುದು ಅವಶ್ಯಕವಾಗಿದೆ.

■ ರಾಬಿನ್ ತೊಕ್ಕೊಟ್ಟು

# ರಾಜಶ್ರೀ ಉಳ್ಳಾಲ್, ಡಾ.ಸಾಯಿಗೀತಾ ಹೆಗ್ಡೆ ಅವರಿಗೆ ವೀರರಾಣಿ ಅಬ್ಬಕ್ಕ ಪ್ರಶಸ್ತಿ ಪ್ರಧಾನ

**ಉಳ್ಳಾಲ:** ರಾಣಿ ಅಬ್ಬಕ್ಕ 1525 ರಿಂದ 1570 ರವರೆಗೆ ಪೋರ್ಚ್‌ಗೀಸರ ವಿರುದ್ಧ ಹೋರಾಟ ಮಾಡಿ ಹೆಗ್ಗಳಿಕೆ ಪಡೆದಿದ್ದರು. ಯುದ್ಧದ ಮೂಲಕ ಅವರನ್ನು ಸೆದೆ ಬಡಿದು ರಾಜ್ಯ ರಕ್ಷಣೆಗೆ ಪಣ ತೊಟ್ಟಿದ್ದ ರಾಣಿ. ಅಬ್ಬಕ್ಕ ಹೆಸರಿನಲ್ಲಿ ವಿವಿಧ ಕಡೆ ಅಬ್ಬಕ್ಕ ಉತ್ಸವ ಆಗುತ್ತಿರುವುದು ಶ್ಲಾಘನೀಯ ಎಂದು ಶ್ರೀಕ್ಷೇತ್ರ ಧರ್ಮಸ್ಥಳದ ರಾಣಿ ಅಬ್ಬಕ್ಕ ವಂಶಸ್ಥೆ ಅನಿತಾ ಸುರೇಂದ್ರ ಕುಮಾರ್ ಹೇಳಿದರು.



ಅವರು ತೊಕ್ಕೊಟ್ಟು ಒಳಪೇಟೆಯ ಅಂಬೇಡ್ಕರ್ ರಂಗಮಂದಿರದಲ್ಲಿ ನಡೆದ ವೀರರಾಣಿ ಅಬ್ಬಕ್ಕ ಉತ್ಸವ25–26 ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದರು.

ಕರಾವಳಿ ಅರಸರಿಂದ ಕಪ್ಪ ಸಂಗ್ರಹ ಮಾಡುವುದನ್ನು ವಿರೋಧ ವ್ಯಕ್ತಪಡಿಸಿದ ಅಬ್ಬಕ್ಕ ವ್ಯಕ್ತಿತ್ವಕ್ಕೆ ತಕ್ಕ ಮಾತಿತ್ತು. ಅಬ್ಬಕ್ಕ ಹೆಸರಿನಲ್ಲಿ ನಡೆಯುವ ಉತ್ಸವ ಶಾಶ್ವತವಾಗಿ ಉಳಿಸಬೇಕು ಎಂದು ಕರೆ ನೀಡಿದರು.

ಅಭಿನಂದನಾ ನುಡಿ ಸಲ್ಲಿಸಿದ ಹಾವೇರಿ ವಿಶ್ವವಿ ದ್ಯಾನಿಲಯದ ವಿಶ್ರಾಂತ ಉಪಕುಲಪತಿ ಡಾ. ಕೆ. ಚಿನ್ನಪ್ಪ ಗೌಡರವರು, "Brave Hearts of Bharath" ಎನ್ನುವ ಪುಸ್ತಕದಲ್ಲಿ Rani Abbakka Chowta ಅವರ ಕುರಿತು ವಿಶಿಷ್ಟ ಅಧ್ಯಾಯ ಪ್ರಕಟವಾಗಿದೆ. 13 ಮಂದಿ ಶೂರ ಯೋಧರ ಪೈಕಿ 5 ಮಂದಿ ಮಹಿಳೆಯರು ಇದ್ದಾರೆ. ಅವರಲ್ಲಿ ರಾಣಿ ಅಬ್ಬಕ್ಕಳ ಹೆಸರು ಮೊದಲಿಗರಾಗಿ ಉಲ್ಲೇಖವಾಗಿರುವುದು ನಮ್ಮೆಲ್ಲರಿಗೂ ಹೆಮ್ಮೆಯ ಸಂಗತಿ.

ಕೌಟುಂಬಿಕ, ಸಾಮಾಜಿಕ ಮತ್ತು ಆರ್ಥಿಕ ನೆಲೆಯಲ್ಲೂ ಅಬ್ಬಕ್ಕಳ ಜೀವನ ಅಪೂರ್ವವಾಗಿದೆ. ಕೆಚ್ಚೆದೆಯ ದಿಟ್ಟತನ, ಅಚಲ ಧೈರ್ಯ ಮತ್ತು ಸ್ವಾಭಿಮಾನದಿಂದ ಅವರು ಇತಿಹಾಸದಲ್ಲಿ ಅಮರರಾಗಿದ್ದಾರೆ. ಅಬ್ಬಕ್ಕಳಿಂದ ನಮಗೆ ಸಿಗುವುದೇ ತಾಯಿತನದ ಪ್ರೀತಿ ಹಾಗೂ ದೇಶಭಕ್ತಿಯ ಸಂದೇಶ ಎಂದರು.

ಮಾಜಿ ಮುಖ್ಯಮಂತ್ರಿ ಸದಾನಂದ ಗೌಡ ಮಾತನಾಡಿ, ಇಂದು ನಾವು ಸ್ವತಂತ್ರರು ಆಗಿದ್ದು ಇದಕ್ಕೆಲ್ಲ ಕಾರಣ ಅಬ್ಬಕಳಂತಹ ಹೋರಾಟಗಾರರು ಆಗಿದ್ದಾರೆ.ನಾವು ಗುಲಾಮರಾಗಿ ಇರಬಾರದು ಎಂಬ ಉದ್ದೇಶ ಅಬ್ಬಕ್ಕಳದ್ದಾಗಿತ್ತು ಪ್ರತಿ ವ್ಯಕ್ತಿಗೂ ತನ್ನದೇ ಆದ ಜವಾಬ್ದಾರಿಗಳಿರುತ್ತವೆ. ಭಾರತವು ಅದ್ಭುತ ರಾಷ್ಟ್ರವಾಗಿ ಹೊರಹೊಮ್ಮಬೇಕಾದರೆ, ನಾವು ನಮ್ಮ ಕರ್ತವ್ಯಗಳನ್ನು ನಿಷ್ಠೆಯಿಂದ ನೆರವೇರಿಸಬೇಕು. ಸ್ವಾಭಿಮಾನದ ಕಿಚ್ಚು ನಮ್ಮ ಆಚಾರ–ವಿಚಾರಗಳು, ಸಂಸ್ಕೃತಿ ಮತ್ತು ಪರಂಪರೆಗಳು ನಮ್ಮ ದೇಶದ ಅಮೂಲ್ಯ ಕೊಡುಗೆಗಳಾಗಿವೆ. ಇಂತಹ ಅನೇಕ ಸೂತ್ರಗಳು ಭವಿಷ್ಯ ನಿರ್ಮಾಣಕ್ಕೆ ದಾರಿದೀಪವಾಗಬೇಕು ಎಂದರು.

ಆಶಾ ಚಾರಿಟೆಬಲ್ ಟ್ರಸ್ಟ್‌ನ ಅಧ್ಯಕ್ಷ ಡಾ. ಆಶಾಜ್ಯೋತಿ ರೈ ಸಾಹಿತ್ಯ–ಸಾಂಸ್ಕೃತಿಕ ಕಾರ್ಯಕ್ರಮವನ್ನು ಉದ್ಘಾಟಿಸಿದರು.

ಇದೇ ವೇಳೆ ಸಾಹಿತ್ಯ ಕ್ಷೇತ್ರದ ಸಾಧನೆಗಾಗಿ ದೇರಳಕಟ್ಟೆಯ ನಿಟ್ಟೆ ವಿಶ್ವವಿದ್ಯಾನಿಲಯದ ಮಾನವಿಕ ವಿಭಾಗದಲ್ಲಿ ಅಸೋಸಿಯೇಟ್ ಪ್ರೊಫೆಸರ್ ಆಗಿರುವ ಡಾ. ಸಾಯಿಗೀತಾ ಹೆಗ್ಡೆ, ಭರತನಾಟ್ಯ ಕ್ಷೇತ್ರದ ಸಾಧನೆಗಾಗಿ ನಾಟ್ಯನಿಕೇತನ ನೃತ್ಯ ಸಂಸ್ಥೆಯ ಪ್ರಾಂಶುಪಾಲೆ ರಾಜಶ್ರೀ ಉಳ್ಳಾಲ್ ವೀರರಾಣಿ ಅಬ್ಬಕ್ಕ ಪ್ರಶಸ್ತಿಯನ್ನು ಪ್ರದಾನ,ಮಾಡಿ ಗೌರವಿಸಲಾಯಿತು.

ಈ ಕಾರ್ಯಕ್ರಮ ಪ್ರಯುಕ್ತ ಯಶಸ್ವಿನಿ ಉಳ್ಳಾಲ್ ನೇತೃತ್ವದ ಸ್ವರಮಾಧುರ್ಯ ತಂಡದಿಂದ ನಾಡುನುಡಿಯ ಗೀತೋತ್ಸವ, ಕರ್ನಾಟಕ ಬ್ಯಾರಿ ಸಾಹಿತ್ಯ ಅಕಾಡೆಮಿಯ ಸಹಯೋಗದಲ್ಲಿ ಅಲ್ ಅಝೂರಿಯಾ ದಫ್ ತಂಡದಿಂದ ದಫ್ ಕಾರ್ಯಕ್ರಮ, ಯುವವಾಹಿನಿ ಕೊಲ್ಯ ಘಟಕದಿಂದ ಸಾಂಸ್ಕೃತಿಕ ವೈವಿಧ್ಯ ಕರ್ನಾಟಕ ಕೊಂಕಣಿ ಸಾಹಿತ್ಯ ಅಕಾಡೆಮಿಯ ಸಹಯೋಗದಲ್ಲಿ ಕುಡುಂಬಿ ನೃತ್ಯ ಬಲೇ ತೆಲಿಪಾಲೆ ಖ್ಯಾತಿಯ ಪ್ರಶಂಸಾ ಕಾಪು ತಂಡದಿಂದ ಹಾಸ್ಯ ವೈವಿಧ್ಯ ಬಲೆ ತೆಲಿಪಾಲೆ ಹಾಗೂ ಪಜೀರು ನೃತ್ಯಲಹರಿ ನಾಟ್ಯಾಲಯದ ವಿದುಷಿ ರೇಷ್ಮಾ ನಿರ್ಮಲ್ ಭಟ್ ತಂಡದಿಂದ ಸ್ವಾಗತ ನೃತ್ಯ ನಡೆಯಿತು.

ಈ ಕಾರ್ಯಕ್ರಮದಲ್ಲಿ ನಗರಸಭೆ ಪೌರಾಯುಕ್ತ ಸಂತೋಷ್, ರೈತ ಮುಖಂಡ ಕೃಷ್ಣಪ್ಪ ಸಾಲಿಯಾನ್, ಮಾಜಿ ಮೇಯರ್ ಪ್ರೇಮಾನಂದ ಶೆಟ್ಟಿ, ಕೋಟೆಕಾರ್ ಪಟ್ಟಣ ಪಂಚಾಯತ್ ಅಧ್ಯಕ್ಷ ದಿವ್ಯ ಶೆಟ್ಟಿ, ಬಿಜೆಪಿ ಜಿಲ್ಲಾಧ್ಯಕ್ಷ ಸತೀಶ್ ಕುಂಪಲ, ಸೋಮೇಶ್ವರ ಪುರಸಭೆ ಉಪಾಧ್ಯಕ್ಷ ರವಿಶಂಕರ್, ತುಳು ಸಾಹಿತ್ಯ ಅಕಾಡೆಮಿ ಅಧ್ಯಕ್ಷ ತಾರಾನಾಥ್ ಗಟ್ಟಿ ಕಾಪಿಕಾಡ್, ಬ್ಯಾರಿ ಸಾಹಿತ್ಯ ಅಕಾಡೆಮಿ ಅಧ್ಯಕ್ಷ ಉಮರ್ ಯು. ಹೆಚ್, ಚೀರುಂಬ ಭಗವತಿ ಕ್ಷೇತ್ರದ ಆಡಳಿತ ಮೊಕೇಸರ ಸುರೇಶ್ ಭಟ್ನಗರ,ಗೇರು ಅಭಿವೃದ್ಧಿ' ನಿಗಮದ ಅಧ್ಯಕ್ಷ ಮಮತಾ ಡಿ.ಎಸ್. ಗಟ್ಟಿ, ಯಶವಂತ ಅಮೀನ್, ಪೆರ್ಮನ್ನೂರು ಚರ್ಚ್ ಧರ್ಮಗುರು ಸಿಪ್ರಿಯನ್ ಪಿಂಟೋ ವೀರ ರಾಣಿ ಅಬ್ಬಕ್ಕ ಉತ್ಸವ ಸಮಿತಿಯ ಉಪಾಧ್ಯಕ್ಷ ದೇವಕಿ ಆರ್ ಉಳ್ಳಾಲ, ಗೌರವ ಉಪಾಧ್ಯಕ್ಷ ಸದಾನಂದ ಬಂಗೇರ ಮತ್ತಿತರರು ಉಪಸ್ಥಿತರಿದ್ದರು.

ಸ್ವಾಗತಾಧ್ಯಕ್ಷ ಜಯರಾಮ್ ಶೆಟ್ಟಿ ಪ್ರಾಸ್ತಾವಿಕ ಮಾತನಾಡಿದರು. ಅಧ್ಯಕ್ಷ ದಿನಕರ್ ಉಳ್ಳಾಲ್ ಸ್ವಾಗತಿಸಿದರು ಧನಲಕ್ಷ್ಮಿಗಟ್ಟಿ ಕೆಎಮ್ ಕೆ ಮಂಜನಾಡಿ ಕಾರ್ಯಕ್ರಮ ನಿರೂಪಿಸಿದರು. ಕೋಶಾಧಿಕಾರಿ ಆನಂದ ಕೆ ಅಸೈಗೋಳಿ ವಂದಿಸಿದರು.

# ತೊಕ್ಕೊಟ್ಟುವಿನಲ್ಲಿ ಅಬ್ಬಕ್ಕ ಭವನ

↗ 1ನೇ ಪುಟದಿಂದ

ಟೌನ್ ಹಾಲನ್ನೇ ನೆಚ್ಚಿಕೊಂಡಿದ್ದೆವು. ನಮ್ಮ ತಾಲೂಕಲ್ಲಿ ಟೌನ್ ಹಾಲ್ ಇಲ್ಲದಕ್ಕಾಗಿ ಅಬ್ಬಕ್ಕ ಭವನವನ್ನು ಕೇಳಿದ್ದೆವು. ಇದೀಗ ನಿರ್ಮಾಣಗೊಳ್ಳಲಿರುವ ಅಬ್ಬಕ್ಕ ಭವನವು ಉಳ್ಳಾಲ ತಾಲೂಕಿನ ಮಿನಿ ಟೌನ್ ಹಾಲ್ ಆಗಿ ರಾರಾಜಿಸಲಿದೆ.

ತೊಕ್ಕೊಟ್ಟಿನ ಉದ್ದೇಶಿತ ಅಬ್ಬಕ್ಕ ಭವನದ ಪಕ್ಕದಲ್ಲೇ ಬ್ಯಾರಿ ಭವನ ನಿರ್ಮಾಣಕ್ಕೂ ಭೂಮಿ ಮಂಜೂರಾಗಿತ್ತು. ಆದರೆ ಅಬ್ಬಕ್ಕ ಭವನದ ಪಕ್ಕದಲ್ಲೇ ಬ್ಯಾರಿ ಭವನ ನಿರ್ಮಾಣಕ್ಕೆ ವಿರೋದ ವ್ಯಕ್ತವಾಗಿತ್ತು. ಹಾಗಾಗಿ ಈ ವಿಚಾರದಲ್ಲಿ ವಿವಾದವೇ ಬೇಡವೆಂದು ಮಂಗಳೂರು ವಿಶ್ವವಿದ್ಯಾಲಯದ ಬಳಿಯ ವಿಶಾಲ ಜಾಗದಲ್ಲಿ ಬ್ಯಾರಿ ಭವನ ನಿರ್ಮಾಣಕ್ಕೆ ಯೋಜನೆ ನಿರ್ಮಿಸಲಾಗಿದ್ದು ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಚಿವರು ಶೀಘ್ರದಲ್ಲೇ ಶಂಕುಸ್ಥಾಪನೆ ನೆರವೇರಿಸಲಿದ್ದಾರೆಂದು ಖಾದರ್ ತಿಳಿಸಿದರು.

ಉಳ್ಳಾಲ ರಾಣಿ ಅಬ್ಬಕ್ಕ ಉತ್ಸವ ಸಮಿತಿಯು ಕಳೆದ ಕೆಲ ವರುಷಗಳಿಂದ ಸೀಮಿತ ಚೌಕಟ್ಟಿನಲ್ಲಿ ಅಬ್ಬಕ್ಕ ಉತ್ಸವವನ್ನು ನಡೆಸುತ್ತ ಬಂದಿದೆ. ಮುಂದಿನ ಎಪ್ರಿಲ್ ತಿಂಗಳಿನಲ್ಲಿ ಸರಕಾರದ ಮಟ್ಟದಲ್ಲಿ ಉಳ್ಳಾಲದ ಎಲ್ಲಾ ಸಂಘ ಸಂಸ್ಥೆಗಳನ್ನು ಒಗ್ಗೂಡಿಸಿ,ರಾಜಕೀಯ ರಹಿತವಾಗಿ,ಯಾವುದೇ ಸ್ವಪೇಕ್ಷೆ ಇಲ್ಲದೆ ಅಬ್ಬಕ್ಕ ಉತ್ಸವವನ್ನು ನಡೆಸಲಿದ್ದು, ಇದನ್ನ ಉಳ್ಳಾಲ ಉತ್ಸವವಾಗಿ ಪರಿವರ್ತಿಸಲಿದ್ದೇವೆ. ಸರಕಾರದ ಮಟ್ಟದಲ್ಲಿ ನಡೆಯುವ ಈ ಅಬ್ಬಕ್ಕ ಉತ್ಸವದ ಮೇಲುಸ್ತುವಾರಿಯನ್ನು ಮಹಿಳಾ ಸಮಿತಿಯೇ ವಹಿಸಬೇಕೆಂಬ ಅಭಿಪ್ರಾಯವೂ ಕೇಳಿ ಬಂದಿದೆಯೆಂದರು.

ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಜಿಲ್ಲಾ ಸಹಾಯಕ ನಿರ್ದೇಶಕರಾದ ರಾಜೇಶ್ ಜಿ, ಕರ್ನಾಟಕ ಗೃಹ ಮಂಡಳಿಯ ಸಹಾಯಕ ಕಾರ್ಯ ನಿರ್ವಾಹಕ ಅಭಿಯಂತರರಾದ ಸಹನಾ, ಜಿಲ್ಲಾ ಧಾರ್ಮಿಕ ಪರಿಷತ್ ಸದಸ್ಯರಾದ ಸುರೇಶ್ ಭಟ್ನಗರ, ತಾ.ಪಂ ಮಾಜಿ ಸದಸ್ಯೆ ಸುರೇಖ ಚಂದ್ರಹಾಸ್ ,ಉಳ್ಳಾಲ ಬ್ಲಾಕ್ ಮಹಿಳಾ ಕಾಂಗ್ರೆಸ್ ಅಧ್ಯಕ್ಷೆ ಚಂದ್ರಿಕಾ ರೈ ಮೊದಲಾದವರು ಉಪಸ್ಥಿತರಿದ್ದರು.

# ಆಸ್ಪತ್ರೆ ಎದುರಿನ ಚರಂಡಿ ಸಮಸ್ಯೆಗೆ ಒಂದು ವರ್ಷ

↗ 1ನೇ ಪುಟದಿಂದ

ಇದ್ದರೆ ಮಾತ್ರ ಅಭಿವೃದ್ಧಿ ಸಾದ- ಸರಕಾರ ಸಾರ್ವಜನಿಕರಿಂದ ತೆರಿಗೆ ವಸೂಲಾತಿ ಮಾಡುತ್ತಾರೆ. ಆದರೆ ಸಮಸ್ಯೆಗಳಿಗೆ ಸ್ಪಂದನೆಯಿಲ್ಲ. ಇಲ್ಲಿನ ರಿಕ್ಷಾ ಚಾಲಕರು ಮೂಗು ಮುಚ್ಚಿಕೊಂಡೆ ಇರಬೇಕಾದ ಪರಿಸ್ಥಿತಿ ಈ ಕಟ್ಟಡಗಳಿಂದ ಹೊರಬರುತ್ತಿರುವ ತ್ಯಾಜ್ಯಗಳು ಚರಂಡಿಯಲ್ಲಿ ಶೇಖರಣೆಯಿಂದ ನಿರ್ಮಾಣಗೊಂಡಿದೆ. ಕಟ್ಟಡ ನಿರ್ಮಿಸುವಾಗ ಮಾಲೀಕರಿಗೆ ಮಾನದಂಡಗಳನ್ನು ತಿಳಿಸಬೇಕಾದದ್ದು, ಬೆಳ್ಮ ಗ್ರಾಮ ಪಂಚಾಯತ್ ಹಾಗು ಕೋಟೆಕಾರ್ ಪಟ್ಟಣ ಪಂಚಾಯತ್ ಜವಬ್ದಾರಿ. ಆದರೆ ಇಲ್ಲಿ ಸಮನ್ವಯದ ಕೊರತೆ ಎದ್ದು ಕಾಣುತ್ತಿದೆ. ಈ ಸಮಸ್ಯೆಗೆ ತಕ್ಷಣವೇ ಪರಿಹಾರ ಸೂಚಿಸಬೇಕೆಂದು ಆಗ್ರಹಿಸಿದರು.

ಪ್ರತಿಭಟನೆಯಲ್ಲಿ ರಿಕ್ಷಾ ಚಾಲಕ ಸತೀಶ್ ತುಲುನಾಡ ರಕ್ಷಣಾ ವೇದಿಕೆ ಕೇಂದ್ರಿಯ ಸಂಘಟನಾ ಕಾರ್ಯದರ್ಶಿ ಪ್ರಶಾಂತ್ ಭಟ್ ಕಡಬ, ರಿಕ್ಷಾ ಚಾಲಕ ಪುರುಷೋತ್ತಮ್ ಬಗಂಬಿಲ, ಆಟೋ ಚಾಲಕ ಕಾರ್ತಿಕ್ ಪಂಡಿತ್‌ಹೌಸ್, ಕೇಂದ್ರೀಯ ಜೊತೆ ಕಾರ್ಯದರ್ಶಿ ಜ್ಯೋತಿಕಾ ಜೈನ್, ನಗರಕಾರ್ಯಾದ್ಯಕ್ಷರಾದ ಕ್ಲೀಟಸ್ ಲೋಬೋ, ನಗರ ಕಾರ್ಯದರ್ಶಿ ರಕ್ಷಿತ್ ಕುಡುಪು, ಮಹಿಳಾ ಉಪಾಧ್ಯಕ್ಷರಾದ ಶಾರದಾ ಶೆಟ್ಟಿ, ಸುಭಾಷ್, ತೌಫಿಕ್, ಸುನೀಲ್, ದಿನೇಶ್, ಪುರುಷೋತ್ತಮ್, ಎಸ್ ರಾಜ, ಶಶಿಧರ್, ಪ್ರವೀಣ್, ರಾಜೇಶ್, ಮೋಹನ್, ಪ್ರಸನ್ನ, ಮುಸ್ತಾಫ, ಕಿಶೋರ್, ನಿಸಾರ್, ಸಿರಿಲ್ ಡಿ'ಸೋಜ,ಸುರೇಶ್ ಶೆಟ್ಟಿ, ಕಿರಣ್ ಗಟ್ಟಿ ಕುತ್ತಾರ್, ರಿಕ್ಷಾಚಾಲಕರು ಸೇರಿದಂತೆ ಮತ್ತಿತರರು ಉಪಸ್ಥಿತರಿದ್ದರು.

# ಏಳನೇ "ನಮೋ ಕುಟೀರ" ನಿರ್ಮಾಣಕ್ಕೆ ಶಿಲಾನ್ಯಾಸ



**ಉಳ್ಳಾಲ:** ದೇಶದ ಹೆಮ್ಮೆಯ ಪ್ರಧಾನಿ ನರೇಂದ್ರ ಮೋದಿಯವರ ಹೆಸರಲ್ಲಿ ಅರ್ಹ ಅಶಕ್ತ ಕುಟುಂಬಗಳಿಗೆ ಈಗಾಗಲೇ ವೈಯಕ್ತಿಕ ನೆಲೆಯಲ್ಲಿ ಆರು ಮನೆಗಳನ್ನ ನಿರ್ಮಿಸಿ ಕೊಡಲಾಗಿದೆ. ಇದೀಗ ಅಡ್ಕ ಶ್ರೀ ಭಗವತಿ ಕ್ಷೇತ್ರದ ದರ್ಶನ ಪಾತ್ರಿ ಶ್ರವಣ್ ಬೆಳ್ಚಪ್ಪಾಡ ಅವರ ಕುಟುಂಬಕ್ಕೆ ಏಳನೇ "ನಮೋ ಕುಟೀರ" ನಿರ್ಮಾಣಕ್ಕೆ ಶಿಲಾನ್ಯಾಸ ನಡೆಸಲಾಗಿದ್ದು ಫಲಾನುಭವಿ ದಂಪತಿಯ ಮುಖದಲ್ಲಿ ಮೂಡಿದ ಮಂದಹಾಸವೇ ನನ್ನ ಕುಟುಂಬಕ್ಕೆ ಶ್ರೀರಕ್ಷೆಯಾಗಿದೆಯೆಂದು ಬಿಜೆಪಿ ಮುಖಂಡರು ಹಾಗೂ ದಿ.ಮೈಸೂರು ಇಲೆಕ್ಟ್ರಿಕಲ್ಸ್ (ಲಿ)ನ ನಿಕಟಪೂರ್ವ ಅಧ್ಯಕ್ಷರಾದ ಸಂತೋಷ್ ಕುಮಾರ್ ರೈ ಬೋಳಿಯಾರ್ ಹೇಳಿದರು.

ಕೋಟೆಕಾರು ಪಟ್ಟಣ ಪಂಚಾಯತ್ ವ್ಯಾಪ್ತಿಯ ಅಡ್ಕದಲ್ಲಿರುವ ದೊಡ್ಡಮನೆ ತರವಾಡು ಫಲಾನುಭವಿಗಳ ನಿವೇಶನದಲ್ಲಿ ಅಡ್ಕ ಭಗವತಿ ಕ್ಷೇತ್ರದ ಸ್ಥಾನಿಕರು ಹಾಗೂ ದರ್ಶನ ಪಾತ್ರಿಗಳಾದ ಶ್ರವಣ್ ಬೆಳ್ಚಪ್ಪಾಡ ಅವರ ಕುಟುಂಬಕ್ಕೆ ಪ್ರಧಾನ ಮಂತ್ರಿ ನರೇಂದ್ರ ಮೋದಿಯವರ ಹೆಸರಲ್ಲಿ ನಿರ್ಮಿಸಿ ಕೊಡುತ್ತಿರುವ ಏಳನೇ(ನಮೋ ಕುಟೀರ) ಮನೆಗೆ ಗುರುವಾರದಂದು ಶಿಲಾನ್ಯಾಸ ನೆರವೇರಿಸಿ ಅವರು ಮಾತನಾಡಿದರು.ದಾನ ಕೊಡಲು ಮತ್ತು ಪಡೆಯಲು ನಮಗೆ ಯೋಗವಿರಬೇಕಷ್ಟೆ. ಇಲ್ಲಿ ಅತಿ ಶೀಘ್ರದಲ್ಲೇ ಸುಂದರವಾದ ಮನೆಯನ್ನು ನಿರ್ಮಿಸಿ,ವಾಸ್ತು ಪೂಜೆ,ಗಣ ಹೋಮ,ಊಟೋಪಚಾರವುಳ್ಳ ಸಂಭ್ರಮದ ಗೃಹಪ್ರವೇಶ ಸಮಾರಂಭವನ್ನು ನಡೆಸಲಾಗುವುದು. ಮನೆಯ ಶಿಲಾನ್ಯಾಸದಿಂದ ಹಿಡಿದು ಗೃಹ ಪ್ರವೇಶದ ಸಂಪೂರ್ಣ ಖರ್ಚನ್ನು ವೈಯಕ್ತಿಕ ನೆಲೆಯಲ್ಲಿ ಭರಿಸಲಾಗುವುದು.ನೂತನ ನಿರ್ಮಾಣಗೊಳ್ಳುವ ಮನೆಯಲ್ಲಿ ಶ್ರವಣ್ ಗುರಿಕಾರರ ಕುಟುಂಬವು ಸಂತೋಷ,ನೆಮ್ಮದಿಯಿಂದ ಬಾಳುವಂತಾಗಲಿ ಎಂದು ಹಾರೈಸಿದರು.

ಕೋಟೆಕಾರು ನೆಲ್ಲಿಸ್ಥಳ ಶ್ರೀ ಕಾಳಿಕಾಂಬ ಕ್ಷೇತ್ರದ ಅಧ್ಯಕ್ಷರಾದ ಸುಂದರ್ ಆಚಾರ್ಯ ಅವರ ಪೌರೋಹಿತ್ಯದಲ್ಲಿ ನೂತನ ಮನೆ ನಿರ್ಮಾಣ ಕಾಮಗಾರಿಗೆ ಶಿಲಾನ್ಯಾಸ ನೆರವೇರಿತು.

ಅಡ್ಕ ಶ್ರೀ ಭಗವತಿ ಕ್ಷೇತ್ರದ ಮೂಲ ಅರ್ಚಕರಾದ ವಸಂತ ಪೂಜಾರಿ,ದರ್ಶನ ಪಾತ್ರಿ ನವೀನ್ ಬೆಳ್ಚಪ್ಪಾಡ,ಅಶೋಕ್ ಕಾರ್ನವರ್,ರಾಜ ಕಾರ್ನವರ್,ರಾಷ್ಟ್ರೀಯ ಸ್ವಯಂ ಸೇವಕ ಸಂಘದ ಜಿಲ್ಲಾಕಾರ್ಯವಾಹನಾಗೇಶ್ ಕುಂಪಲ,ಕೋಟೆಕಾರು ಪ.ಪಂ ಅಧ್ಯಕ್ಷರಾದ ದಿವ್ಯ ಶೆಟ್ಟಿ,ಉಪಾಧ್ಯಕ್ಷರಾದ ಪ್ರವೀಣ್ ಐ.ಬಗಂಬಿಲ,ಪ.ಪಂ ಸದಸ್ಯರಾದ ಸುಜಿತ್ ಮಾಡೂರು,ರಾಘವ ಗಟ್ಟಿ,ಸೋಮೇಶ್ವರ ಪುರಸಭೆ ಉಪಾಧ್ಯಕ್ಷರಾದ ರವಿಶಂಕರ್ ಸೋಮೇಶ್ವರ,ಸ್ಥಾಯಿ ಸಮಿತಿ ಅಧ್ಯಕ್ಷರಾದ ಪುರುಷೋತ್ತಮ ಗಟ್ಟಿ ಪರ್ಯತ್ತೂರು,ಸದಸ್ಯರಾದ ಜಯಶ್ರೀ ಉಚ್ಚಿಲ್,ಪ್ರಮುಖರಾದ ನಾರಾಯಣ ಕುಂಪಲ,ಸಮ್ಯಕ್ತ್ ರೈ ಬೋಳಿಯಾರ್,ರಾಜೇಶ್ ಮಡಿವಾಳ ಮೊದಲಾದವರು ಉಪಸ್ಥಿತರಿದ್ದರು.

> ಕುರ್ನಾಡು ಗ್ರಾಮದ ಅಬೆಮಾರ್ ಎಂಬಲ್ಲಿ ರುಕ್ಮಯ ಮತ್ತು ವಿಜಯ ಎಂಬ ಮಕ್ಕಳಿಲ್ಲದ ವೃದ್ಧ ದಂಪತಿಗೆ ನಿರ್ಮಿಸಲಾದ ಮನೆಯು ಕೇವಲ ಎರಡೂವರೆ ತಿಂಗಳಲ್ಲೇ ಸಂಪೂರ್ಣಗೊಂಡಿದೆ.ನೂತನ ಮನೆಯ ಗೃಹ ಪ್ರವೇಶವು ಇದೇ ಫೆ.25 ನೇ ತಾರೀಕಿನಂದು ನಡೆಯಲಿದೆ.ಅರ್ಹ ಹತ್ತು ಅಶಕ್ತ ಕುಟುಂಬಗಳಿಗೆ ನಮೋ ಕುಟೀರಗಳ ನಿರ್ಮಾಣ ಯೋಜನೆಯನ್ನು ಹಮ್ಮಿಕೊಂಡಿದ್ದು ಅತಿ ಶೀಘ್ರನೆ ಮತ್ತೆ ಮೂರು ಮನೆಗಳ ನಿರ್ಮಾಣ ಕಾಮಗಾರಿಗೆ ಶಿಲಾನ್ಯಾಸ ನೆರವೇರಿಸಲಾಗುವುದು.ಮತ್ತಷ್ಟು ಸಮಾಜಮುಖಿ ಕಾರ್ಯಗಳನ್ನ ಮುಂದುವರೆಸಲು ನನಗೆ ದೇವರು ಶಕ್ತಿಕೊಡಲಿ.
>
> ■ ಸಂತೋಷ್ ಕುಮಾರ್ ರೈ ಬೋಳಿಯಾರು. ಬಿಜೆಪಿ ಮುಖಂಡರು

ದ.ಕ.ಜಿಲ್ಲಾ ಪಂಚಾಯತ್, ತಾಲೂಕು ಪಂಚಾಯತ್ ಉಳ್ಳಾಲ, ಬಾಳೆಪುಣಿ ಗ್ರಾಮ ಪಂಚಾಯತ್ ಇದರ ವತಿಯಿಂದ ಬಾಳೆಪುಣಿಯಲ್ಲಿ ಸ್ವಚ್ಛೋತ್ಸವ ಹಾಗೂ ನರೇಗಾ ಗ್ರಾಮೋತ್ಸವ

# ಯೋಜನೆಗಳ ಸಮರ್ಪಕ ಸದ್ಬಳಕೆಯಿಂದ ಸ್ವಾವಲಂಬಿ ಬದುಕು: ಮಮತಾ ಡಿ.ಎಸ್ ಗಟ್ಟಿ

**ಕೊಣಾಜೆ:** ಮಹಾತ್ಮಾ ಗಾಂಧಿ ಉದ್ಯೋಗ ಖಾತ್ರಿ ಯೋಜನೆ ಸೇರಿದಂತೆ ಸರ್ಕಾರದ ಅನೇಕ ಮಹತ್ವಪೂರ್ಣವಾದ ಯೋಜನೆಗಳ ಸಮರ್ಪಕ ಸದ್ಬಳಕೆಯನ್ನು ಮಾಡುವ ಮೂಲಕ ಎಷ್ಟೋ ಜನರು ಸ್ವಾವಲಂಬಿ ಬದುಕನ್ನು ಕಂಡುಕೊಂಡಿದ್ದಾರೆ ಎಂದು ಕರ್ನಾಟಕ ಸರ್ಕಾರದ ಗೇರು ಅಭಿವೃದ್ಧಿ ನಿಗಮದ ಅದ್ಯಕ್ಷರಾದ ಮಮತಾ ಡಿ ಎಸ್ ಗಟ್ಟಿ ಹೇಳಿದರು.




ಅವರು ಗುರುವಾರ ದ.ಕ.ಜಿಲ್ಲಾ ಪಂಚಾಯತ್, ತಾಲೂಕು ಪಂಚಾಯತ್ ಉಳ್ಳಾಲ, ಬಾಳೆಪುಣಿ ಗ್ರಾಮ ಪಂಚಾಯತ್ ಇದರ ವತಿಯಿಂದ ಸ್ವಚ್ಛೋತ್ಸವ, ನರೇಗಾ ಗ್ರಾಮೋತ್ಸವ,ಸಮಗ್ರ ಶಿಶು ಅಭಿವೃದ್ಧಿ ಯೋಜನೆ –50 ವರ್ಷ ಸಂಭ್ರಮ ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದರು.

ಸ್ವಚ್ಛ ಗ್ರಾಮವಾಗಿ ಬಾಳೆಪುಣಿ ಗ್ರಾಮ ಪಂಚಾಯತ್ ಮಾದರಿಯಾಗಿದೆ. ಅನೇಕ ಯೋಜನೆಗಳನ್ನು ಸಮರ್ಪಕವಾಗಿ ಬಳಸಿಕೊಳ್ಳುವ ಮೂಲಕ ಗಾಂಧಿ ಗ್ರಾಮ ಪುರಸ್ಕಾರ ಪಡೆದುಕೊಂಡಿದೆ. ಗ್ರಾಮ ಅಭಿವೃದ್ಧಿಯಾದರೆ ದೇಶದ ಅಭಿವೃದ್ಧಿಯೂ ಸಾಧ್ಯ ಎಂದರು.

ಉಳ್ಳಾಲ ತಾಲೂಕು ಪಂಚಾಯತ್ ಕಾರ್ಯ ನಿರ್ವಹಣಾಧಿಕಾರಿ ಗುರುದತ್ ಅವರು ಮಾತನಾಡಿ, ಕಾರ್ಯಯೋಜನೆಗಳನ್ನು ಎಸಿ ರೂಮುನೊಳಗೆ ಕೂತು ನಿರ್ಧರಿಸಿದರೆ ಯಶಸ್ಸು ಆಗಲು ಸಾಧ್ಯವಿಲ್ಲ. ಅಧಿಕಾರಿಗಳೊಂದಿಗೆ ಜನರು ಸಂಪೂರ್ಣವಾಗಿ ಯೋಜನೆಯಲ್ಲಿ ಭಾಗವಹಿಸಿ ತೊಡಗಿಸಿಕೊಂಡರೆ ಮಾತ್ರ ಇದು ಯಶಸ್ವಿಯಾಗಲು ಸಾಧ್ಯ. ಶಾಲಾ ವಿದ್ಯಾರ್ಥಿಗಳನ್ನು ಪ್ರವಾಸ ಸ್ಥಳಗಳಿಗೆ ಕರೆದುಕೊಂಡು ಹೋಗುವಂತೆಯೇ ಅವರಿಗೆ ಸ್ವಚ್ಛ ಘಟಕಗಳನ್ನೂ ತೋರಿಸಿ ಸ್ವಚ್ಛತೆಯ ಬಗ್ಗೆ ಅರಿವು ಮೂಡಿಸಬೇಕಿದೆ ಎಂದರು.

ನರೇಗಾ ಯೋಜನಾಧಿಕಾರಿ ಜಯರಾಮ್ ಸ್ವಚ್ಛ ಮನೆ ಘೋಷಣಾ ಪತ್ರವನ್ನು ಬಿಡುಗಡೆಗೊಳಿಸಿ ಮಾತನಾಡಿ, ದೂರದೃಷ್ಟಿಕೋನ ಇಟ್ಟುಕೊಂಡು ನಾವು ಕಾರ್ಯಪ್ರವೃತ್ತರಾದರೆ ಯಶಸ್ಸು ಸಾದ- ಸರ್ಕಾರದ ಯೋಜನೆಗಳನ್ನು, ಅವಕಾಶಗಳನ್ನು ಸದುಪಯೋಗಪಡಿಸಿಕೊಳ್ಳಿ ಎಂದರು.

ಲೆಕ್ಕಸಹಾಯಕರಾಗಿ ಕಾರ್ಯನಿರ್ವಹಿಸಿ ಇದೀಗ ವರ್ಗಾವಣೆಗೊಂಡ ರುಕ್ಮನ್ ದಾಸ್, ಆರೋಗ್ಯ ಸಹಾಯಕಿಯಾಗಿ ವರ್ಗಾವಣೆಗೊಂಡ ನಳಿನಾಕ್ಷಿ ಲಿಂಗಪ್ಪ, ನಿವೃತ್ತ ಅಂಗನವಾಡಿ ಕಾರ್ಯಕರ್ತೆ ಪುಷ್ಪ ಅವರನ್ನು ಸನ್ಮಾನಿಸಿ ಅಭಿನಂದಿಸಲಾಯಿತು.

ಶೈಕ್ಷಣಿಕ ಹಾಗೂ ಇತರ ಕ್ಷೇತ್ರದಲ್ಲಿ ಸಾಧನೆ ಮಾಡಿದ ವಿದ್ಯಾರ್ಥಿಗಳು ಹಾಗೂ ಸಾಧಕರನ್ನು ಗೌರವಿಸಲಾಯಿತು.ಇದೇ ಸಂದರ್ಭದಲ್ಲಿ ಪರಿಶಿಷ್ಟ ಜಾತಿ ಮತ್ತು ಪಂಗಡದ ಫಲಾನುಭವಿಗಳಿಗೆ ಕಪಾಟು ವಿತರಿಸಲಾಯಿತು.

ಕಾರ್ಯಕ್ರಮದಲ್ಲಿ ಬಾಳೆಪುಣಿ ಗ್ರಾಮ ಪಂಚಾಯತ್ ಅಧ್ಯಕ್ಷರಾದರ ಗೀತಾ ಭಂಡಾರಿ,ಉಪಾಧ್ಯಕ್ಷರಾದ ಸಿ.ಎಂ. ಶರೀಫ್ ಚೆಂಬೆತೋಟ, ಉದ್ಯಮಿ ನಾಸೀರ್ ಎನ್ ಎಸ್ ನಡುಪದವು, ಮಾಜಿ ತಾಲೂಕು ಪಂಚಾಯತ್ ಸದಸ್ಯ ಹೈದರ್ ಕೈರಂಗಳ, ಮಾಜಿ ಅಧ್ಯಕ್ಷ ಬಶೀರ್ , ಹಿರಿಯ ಸದಸ್ಯ ಬಾಸ್ಕರ ಕೋಟ್ಯಾನ್, ದ.ಕ.ಜಿಲ್ಲಾ ಸ್ವಚ್ಛತಾ ರಾಯಭಾರಿ ಶೀನ ಶೆಟ್ಟಿ, ಸದಸ್ಯರಾದ ಅಬ್ದುಲ್ ರಹಿಮಾನ್, ಅಬ್ಬಾಸ್, ಸುಜಾತ, ದೊಂಬಯ್ಯ , ಸುನೀಲ್, ಸಾವಿತ್ರಿ, ಅಂಜಲಿ, ಸುಮನಾ ಕ್ರಾಸ್ತಾ, ಅಬ್ದುಲ್ ರಹಿಮಾನ್, ಗುರುರಾಜ್ ಭಟ್, ಶಶಿಧರ್, ಮಾಜಿ ಅಧ್ಯಕ್ಷರಾದ ಸುಕನ್ಯಾ ರೈ, ಜೊಹರಾ, ಯಾಕೂಬ್ ಮೊದಲಾದವರು ಉಪಸ್ಥಿತರಿದ್ದರು ಕಾರ್ಯದರ್ಶಿ ಆಯಿಷಾ ಬಾನು ಪ್ರಾಸ್ತಾವಿಕವಾಗಿ ಮಾತನಾಡಿದರು.

ಪಂಚಾಯತ್ ಅಭಿವೃದ್ಧಿ ಅಧಿಕಾರಿ ವೆಂಕಟೇಶ್ ಅವರು ಸ್ವಾಗತಿಸಿದರು. ಉಪಾಧ್ಯಕ್ಷರಾದ ಸಿ.ಎಂ.ಶೆರೀಫ್ ವಂದಿಸಿದರು. ಸದಾನಂದ ಹಾಗೂ ಮಂಜಪ್ಪ ಅವರು ಕಾರ್ಯಕ್ರಮ ನಿರೂಪಿಸಿದರು.

### ಸಾವಯವ ಬಾಟಲಿ, ಕೈಚೀಲ ಬಿಡುಗಡೆ

ಬಾಳೆಪುಣಿಯಲ್ಲಿ ನಡೆದ ಗ್ರಾಮೋತ್ಸವ ಕಾರ್ಯಕ್ರಮದಲ್ಲಿ ಪ್ಲಾಸ್ಟಿಕ್ ಗೆ ಪರ್ಯಾಯವಾಗಿ ಮೆಲ್ವಿನ್ ಅರುಣ್ , ಕವಿತಾ ದಂಪತಿಗಳು ಕಬ್ಬು, ಜೋಳ ಮೊದಲಾದ ಸಾವಯವ ಪದಾರ್ಥಗಳನ್ನು ಬಳಸಿ ತಯಾರಿಸಿದ ಸಾವಯವ ನೀರಿನ ಬಾಟ್ಲಿ ಹಾಗೂ ಸಾವಯವ ಪ್ಲಾಸ್ಟಿಕ್ ಚೀಲ, ಸಾವಯವ ನರ್ಸರಿ ಚೀಲವನ್ನು ಇದೇ ಸಂದರ್ಭದಲ್ಲಿ ಬಿಡುಗಡೆಗೊಳಿಸಿ ಸಾರ್ವಜನಿಕರಿಗೆ ಮಾಹಿತಿ ನೀಡಿದರು.

# ವಿದ್ಯುತ್ ಟವರ್‌ಗಳು, ಅಮಾಯಕ ರೈತರು: ದೊಡ್ಡ ರಾಜಕೀಯ ಆಟಕ್ಕೆ ರೈತರು ದಾಳವಾಗುತ್ತಿದ್ದಾರೆಯೇ?

ಮಂಗಳೂರಿನ ಕೃಷಿ ಭೂಮಿಗಳಲ್ಲಿ ಬೃಹತ್ ಸ್ಟೀಲ್ ವಿದ್ಯುತ್ ಪ್ರಸರಣ ಗೋಪುರಗಳು (ಟವರ್) ನಿಧಾನವಾಗಿ ತಲೆಯೆತ್ತುತ್ತಿರುವಂತೆ, ಈ ಯೋಜನೆಯ ಸುತ್ತ ತೀವ್ರ ಹಾಗೂ ಸಂಘರ್ಷಮಯ ಚರ್ಚೆಗಳು ಆರಂಭವಾಗಿವೆ. ಪರಿಹಾರದ ಕುರಿತಾದ ತಾಂತ್ರಿಕ ಸಂವಾದವಾಗಿ ಶುರುವಾಗಿದ್ದ ಈ ವಿಚಾರ, ಕೆಲವು ಪ್ರದೇಶಗಳಲ್ಲಿ ಸಂಘಟಿತ ಪ್ರತಿಭಟನೆಯ ರೂಪ ಪಡೆದುಕೊಂಡಿದೆ. ಈಗ ಆಡಳಿತ ವರ್ಗ ಮತ್ತು ನಾಗರಿಕರ ಮುಂದಿರುವ ಬಹುಮುಖ್ಯ ಪ್ರಶ್ನೆಯೆಂದರೆ, ರೈತರು ನಿಜಕ್ಕೂ ತಮ್ಮ ಹಕ್ಕುಗಳ ರಕ್ಷಣೆಗಾಗಿ ಹೋರಾಡುತ್ತಿದ್ದಾರೆಯೇ ಅಥವಾ ಯಾವುದೋ ದೊಡ್ಡ ರಾಜಕೀಯ ನಾಟಕದ ಭಾಗವಾಗಿ ಅವರನ್ನು ಬಳಸಿಕೊಳ್ಳಲಾಗುತ್ತಿದೆಯೇ? ಬಾಹ್ಯ ಪ್ರಭಾವ ಮತ್ತು ಸಂಘಟನೆಗಳ ಪಾತ್ರ ರೈತರಿಗೆ ತಮ್ಮ ಭೂಮಿಯ ಬಗ್ಗೆ ಸ್ಪಷ್ಟ ಮಾಹಿತಿ ಪಡೆಯುವ ಸಂಪೂರ್ಣ ಹಕ್ಕಿದೆ ಎಂಬುದರಲ್ಲಿ ಎರಡು ಮಾತಿಲ್ಲ. ಪರಿಹಾರದ ವಿವರವಾದ ಲೆಕ್ಕಾಚಾರ, ಜಂಟಿ ಸಮೀಕ್ಷೆಗಳು ಮತ್ತು ಮುಂಗಡ ಪಾವತಿಯ ದಾಖಲೆಗಳು ಅತ್ಯಂತ ಅವಶ್ಯಕ. ಇಂತಹ ಪಾರದರ್ಶಕತೆ ಕೊರತೆಯಾದಾಗ ಮಾತ್ರ ಅನುಮಾನಗಳು ಹುಟ್ಟಿಕೊಳ್ಳುತ್ತವೆ. ಆದರೆ, ಈ ಪ್ರಕ್ರಿಯೆ ವಿಳಂಬವಾಗುವುದರಿಂದ ಆಗುವ ಆರ್ಥಿಕ ನಷ್ಟ ಕೇವಲ ಒಂದು ಹಳ್ಳಿಗೆ ಮಾತ್ರ ಸೀಮಿತವಾಗಿರುವುದಿಲ್ಲ.

ನವೀಕರಿಸಬಹುದಾದ ಇಂಧನ ಕೇಂದ್ರಗಳನ್ನು ಒಳಗೊಂಡಂತೆ ಉತ್ಪಾದನಾ ಕೇಂದ್ರಗಳಿಂದ ವಿದ್ಯುತ್ ಅನ್ನು ಬಳಕೆದಾರರ ವಲಯಗಳಿಗೆ ರವಾನಿಸಲು ಈ ಪ್ರಸರಣ ಮಾರ್ಗಗಳನ್ನು ವಿನ್ಯಾಸಗೊಳಿಸಲಾಗಿದೆ. ಈ ಪ್ರಕ್ರಿಯೆ ವಿಳಂಬವಾದರೆ ಅದು ಗ್ರಿಡ್ ಬ್ಯಾಲೆನ್ಸಿಂಗ್, ಕೈಗಾರಿಕಾ ಪೂರೈಕೆ ಸರಪಳಿಗಳು ಮತ್ತು ಅಂತಿಮವಾಗಿ ಗ್ರಾಹಕರ ಮೇಲೂ ಗಂಭೀರ ಪರಿಣಾಮ ಬೀರುತ್ತದೆ. ಪ್ರಸ್ತುತ ಚರ್ಚೆಯಲ್ಲಿರುವ ಜಿಲ್ಲೆಯು, ಬೃಹತ್ ಅಂತರರಾಜ್ಯ ಯೋಜನೆಯ ಒಂದು ಭಾಗವಾಗಿದೆ. ರಾಷ್ಟ್ರೀಯ ಲೋಡ್ ರವಾನೆ ಯೋಜನೆಗೆ (ಓಚಿ–ಣುಟಚಿಟ ಟಠಚಿಜ ಜ್ಷಿಠಿಚಿಣಛಿ ಠಿಟಚಿಟ–ಟಿಟಿರ) ಅನುಗುಣವಾಗಿ ಇದರ ಕಾಲಮಿತಿಯನ್ನು ನಿಗದಿಪಡಿಸಲಾಗಿದೆ. ಗುತ್ತಿಗೆದಾರರು ನಿಯಂತ್ರಿತ ವ್ಯವಸ್ಥೆಯೊಳಗೆ ಒಳಗೆ ಕಾರ್ಯನಿರ್ವಹಿಸುತ್ತಾರೆ. ಅಲ್ಲದೆ, ಟವರ್ ಹಾಕಲು ಜಾಗ ನೀಡುವ ರೈತರಿಗೆ ನೀಡಲಾಗುವ ಪರಿಹಾರದ ಸೂತ್ರಗಳನ್ನು ಸ್ಥಳೀಯ ಮಟ್ಟದಲ್ಲಿ ಬೇಕಾಬಿಟ್ಟಿ ಸೃಷ್ಟಿಸಲಾಗುವುದಿಲ್ಲ, ಬದಲಾಗಿ ಅವುಗಳನ್ನು ಸರ್ಕಾರಿ ಅಧಿಸೂಚಿತ ಮಾರ್ಗಸೂಚಿಗಳ ಪ್ರಕಾರವೇ ನಿರ್ಧರಿಸಲಾಗುತ್ತದೆ. ಆದರೂ, ಪರಿಹಾರದ ಕುರಿತಾದ ಹೋಲಿಕೆಗಳು ಮತ್ತು ತಾರತಮ್ಯದ ಮಾತುಗಳು ದಿನದಿಂದ ದಿನಕ್ಕೆ ಹೆಚ್ಚು ಹೆಚ್ಚು ಹರಿದಾಡುತ್ತಲೇ ಇವೆ. ನೀರಾವರಿ ಸೌಲಭ್ಯವಿರುವ ತೋಟದ ಭೂಮಿಯ ರೈತನಿಗೆ, ಒಣ ಭೂಮಿಯ ರೈತನಿಗಿಂತ ಗಮನಾರ್ಹವಾಗಿ ಹೆಚ್ಚಿನ ಮೊತ್ತದ ಪರಿಹಾರ ಲಭಿಸುತ್ತದೆ. ಇದೇ ಅಂಕಿ–ಅಂಶಗಳನ್ನು ಸಂದರ್ಭ ಮತ್ತು ಹಿನ್ನೆಲೆ ತಿಳಿಸದೆ ಹಂಚಿಕೊಂಡಾಗ, ಅಸಮಾಧಾನ ಸ್ಫೋಟಗೊಳ್ಳುತ್ತದೆ. ಮೇಲ್ನೋಟಕ್ಕೆ ಇದು ತಾರತಮ್ಯದಂತೆ ಕಂಡರೂ, ವಾಸ್ತವದಲ್ಲಿ ಅದು ಬೆಳೆಯ ಇಳುವರಿ, ಮರಗಳ ಸಾಂದ್ರತೆ ಮತ್ತು ಭೂಮಿಯ ವರ್ಗೀಕರಣವನ್ನು ಆಧರಿಸಿದ ತಾಂತ್ರಿಕ ಲೆಕ್ಕಾಚಾರವಾಗಿರುತ್ತದೆ.

ರೈತರಿಗೆ ನ್ಯಾಯಯುತ ಪರಿಹಾರ ಸಿಗಬೇಕು ಎಂಬುದರಲ್ಲಿ ಎರಡು ಮಾತಿಲ್ಲ; ಖಂಡಿತವಾಗಿಯೂ ಅವರಿಗೆ ನ್ಯಾಯ ದಕ್ಕಲೇಬೇಕು. ಆದರೆ ಇಲ್ಲಿ ಕಾಡುತ್ತಿರುವ ಮೂಲ ಪ್ರಶ್ನೆಯೆಂದರೆ, ನಿಯಂತ್ರಣ ಚೌಕಟ್ಟುಗಳನ್ನು ಮೀರಿ ರೈತರ ನಿರೀಕ್ಷೆಗಳನ್ನು ಹೆಚ್ಚಿಸಲು ಹಾಗೂ ಅವರನ್ನು ಪ್ರಚೋದಿಸಲು ಕೇವಲ ಆಯ್ದ ಮಾಹಿತಿಗಳನ್ನು ಮಾತ್ರ ಉದ್ದೇಶಪೂರ್ವಕವಾಗಿ ಬಳಸಲಾಗುತ್ತಿದೆಯೇ ಎಂಬುದು. ಇಲ್ಲಿ ಗಮನಿಸಬೇಕಾದ ಪ್ರಮುಖ ಸಂಗತಿಯೆಂದರೆ, ಈಗಾಗಲೇ ಪರಿಹಾರ ಪಡೆದ ಅನೇಕ ರೈತರು ತಮ್ಮ ಕೃಷಿ ಚಟುವಟಿಕೆಗಳನ್ನು ಸುಲಲಿತವಾಗಿ ಮುಂದುವರಿಸುತ್ತಿದ್ದಾರೆ. ವಿದ್ಯುತ್ ಮಾರ್ಗಗಳ ಕೆಳಗೆ ಕಾಲೋಚಿತ ಬೆಳೆಗಳನ್ನು ಬೆಳೆಯಲು ಹಾಗೂ ಓಡಾಟದ ಹಾದಿಗಳನ್ನು ಬಳಸಲು ಯಾವುದೇ ಅಡೆತಡೆಗಳಿಲ್ಲ. ಸುರಕ್ಷತೆಯ ಹಿತದೃಷ್ಟಿಯಿಂದ ಕೇವಲ ಶಾಶ್ವತ ಕಟ್ಟಡಗಳ ನಿರ್ಮಾಣ ಮತ್ತು ಎತ್ತರವಾಗಿ ಬೆಳೆಯುವ ಮರಗಳಿಗೆ ಮಾತ್ರ ನಿರ್ಬಂಧ ಹೇರಲಾಗಿದೆ ಎಂಬುದು ಗಮನಾರ್ಹ.

ದುರದೃಷ್ಟವಶಾತ್, ಇಂತಹ ಸಕಾರಾತ್ಮಕ ಉದಾಹರಣೆಗಳು ಮತ್ತು ವಾಸ್ತವಾಂಶಗಳು ಪ್ರತಿಭಟನಾ ವೇದಿಕೆಗಳಲ್ಲಿ ಚರ್ಚೆಗೆ ಬರುವುದು ತೀರಾ ವಿರಳ. ಯಾವುದೇ ಮೂಲಸೌಕರ್ಯ ಯೋಜನೆಯಲ್ಲಿ ಭೌತಿಕ ರಚನೆಗಳು ಎಷ್ಟು ಸ್ಪಷ್ಟವಾಗಿ ಕಾಣುತ್ತವೆಯೋ, ಅದರ ಹಿಂದಿನ ಆರ್ಥಿಕ ಮತ್ತು ತಾಂತ್ರಿಕ ತರ್ಕಗಳು ಅಷ್ಟೇ ಅಸ್ಪಷ್ಟವಾಗಿರುತ್ತವೆ. ಇದನ್ನೇ ಸಮಾಜಶಾಸ್ತ್ರಜ್ಞರು 'ಗೋಚರತೆಯ ಅಸಮತೋಲನ' ಎನ್ನುತ್ತಾರೆ. ಗ್ರಿಡ್ ಸ್ಥಿರತೆಯಂತಹ ಅದೃಶ್ಯ ತಾಂತ್ರಿಕ ಅಗತ್ಯಗಳಿಗಿಂತ, ಕಣ್ಣಿಗೆ ಕಾಣುವ ವಿದ್ಯುತ್ ಗೋಪುರಗಳನ್ನು ಮುಂದಿಟ್ಟುಕೊಂಡು ಜನರ ಭಾವನೆಗಳೊಂದಿಗೆ ಆಟವಾಡುವುದು ಇಲ್ಲಿ ಸುಲಭವಾಗಿಬಿಡುತ್ತದೆ." ಒಂದು ವೇಳೆ ರೈತರಲ್ಲಿ ನಿಜವಾದ ಕುಂದುಕೊರತೆಗಳಿದ್ದರೆ, ಅವುಗಳು ಇರುವುದು ಸಹಜ. ಅವುಗಳನ್ನು ಸಂಘರ್ಷ ಅಥವಾ ಉದ್ವಿಗ್ನತೆಯ ಮೂಲಕವಲ್ಲದೆ, ರಚನಾತ್ಮಕ ಸಂವಾದದ ಮೂಲಕವೇ ಬಗೆಹರಿಸಬಹುದು. ಜಿಲ್ಲಾ ಮಟ್ಟದ ಕುಂದುಕೊರತೆ ನಿವಾರಣಾ ಕೋಶಗಳು, ಪಂಚಾಯತ್ ಕಚೇರಿಗಳಲ್ಲಿ ಪರಿಹಾರದ ಮೊತ್ತದ ಪಾರದರ್ಶಕ ಪ್ರದರ್ಶನ ಮತ್ತು ಜಿಲ್ಲಾಧಿಕಾರಿಗಳ ನೇರ ಉಸ್ತುವಾರಿಯು ಸರ್ಕಾರದ ಮೇಲೆ ಕಳೆದುಕೊಂಡ



ನಂಬಿಕೆ ಮರುಸ್ಥಾಪಿಸಲು ಸಹಕಾರಿಯಾಗಬಲ್ಲದು. ದುರದೃಷ್ಟವಶಾತ್, ರಾಜಕೀಯ ನಾಯಕರು ಈ ವಿದ್ಯುತ್ ಪ್ರಸರಣ ಮಾರ್ಗಗಳ ವಿಷಯವನ್ನು ತಮ್ಮ ವೈಯಕ್ತಿಕ ಪ್ರತಿಷ್ಠೆಯ ಅಥವಾ ರಾಜಕೀಯ ಲಾಭದ ವೇದಿಕೆಯನ್ನಾಗಿ ಬಳಸಿಕೊಂಡಾಗ, ಅದರ ನೇರ ಹೊಡೆತ ಬೀಳುವುದು ರೈತರ ಮೇಲೆ. ಹೋರಾಟದ ನೆಪದಲ್ಲಿ ಯೋಜನೆಗಳು ಸ್ಥಗಿತಗೊಂಡರೆ, ರೈತರಿಗೆ ಸಿಗಬೇಕಾದ ಪರಿಹಾರದ ಪಾವತಿ ಅನಿವಾರ್ಯವಾಗಿ ವಿಳಂಬವಾಗುತ್ತದೆ.

ಕಾನೂನು ಸಮರಗಳು ಪರಸ್ಪರ ಮಾತುಕತೆಯ ಬಾಗಿಲುಗಳನ್ನು ಮುಚ್ಚಿಹಾಕುತ್ತವೆ, ಪರಿಣಾಮವಾಗಿ ಸಂಘರ್ಷಗಳು ತೀವ್ರಗೊಂಡು ಪ್ರಾಯೋಗಿಕ ಪರಿಹಾರದ ಹಾದಿಗಳೇ ಕಿರಿದಾಗುತ್ತವೆ. ಇಲ್ಲಿನ ವಿಶಾಲ ವ್ಯಾಪ್ತಿಯ ಕಾಳಜಿಯು ಕೇವಲ ಸ್ಥಳೀಯ ಮಟ್ಟದ್ದಲ್ಲ. ಅದು ರಾಷ್ಟ್ರೀಯ ಕಾರ್ಯತಂತ್ರಕ್ಕೆ ಸಂಬಂಧಿಸಿದ್ದು. ಭಾರತವು ನವೀಕರಿಸಬಹುದಾದ ಇಂಧನ ಸಾಮರ್ಥ್ಯ ಮತ್ತು ಬೃಹತ್ ಕೈಗಾರಿಕಾ ಕಾರಿಡಾರ್‌ಗಳನ್ನು ವಿಸ್ತರಿಸುತ್ತಿರುವ ಈ ಹಂತದಲ್ಲಿ, ಪ್ರಸರಣ ಮೂಲಸೌಕರ್ಯವು ದೇಶದ ಆರ್ಥಿಕ ಪ್ರಗತಿಯ ಬೆನ್ನೆಲುಬಾಗಿದೆ. ಇಂತಹ ಮಹತ್ವದ ವಿದ್ಯುತ್ ಕಾರಿಡಾರ್‌ಗಳನ್ನು ರಾಜಕೀಯ ರಣರಂಗಗಳನ್ನಾಗಿ ಪರಿವರ್ತಿಸುವುದು ಕೇವಲ ತಾತ್ಕಾಲಿಕ ಅಡೆತಡೆಯಲ್ಲ, ಅದು ದೀರ್ಘಾವಧಿಯಲ್ಲಿ ರಾಷ್ಟ್ರದ ಆರ್ಥಿಕತೆಗೆ ತುಂಬಲಾರದ ನಷ್ಟವನ್ನುಂಟು ಮಾಡುತ್ತದೆ. ಹಸಿರು ಗದ್ದೆಗಳ ಎದೆಯ ಮೇಲೆ ಎದ್ದು ನಿಂತಿರುವ ಈ ಉಕ್ಕಿನ ಗೋಪುರಗಳು ಬರಿ ಲೋಹದ ಪಂಜರಗಳಲ್ಲ ಅಥವಾ ಕೇಬಲ್‌ಗಳ ಜಾಲವಲ್ಲ; ಅವು ಆಧುನಿಕ ಭಾರತದ ನಾಡಿಮಿಡಿತಗಳು. ರಾಜ್ಯ ರಾಜ್ಯಗಳ ನಡುವೆ, ಉತ್ಪಾದಿಸುವ ಕೈಗಳು ಮತ್ತು ಬಳಸುವ ಮನೆಗಳ ನಡುವೆ ಹಾಗೂ ಇಂಧನದ ಹೆಚ್ಚುವರಿ ಮತ್ತು ಕೊರತೆ ನಡುವೆ ಬೆಸೆದಿರುವ ಅದೃಶ್ಯ ಶಕ್ತಿಯ ಸಂಕೇತಗಳಿವು. ಈ ಬೃಹತ್ ಗೋಪುರಗಳ ನೆರಳಿನಲ್ಲಿ ಬೆವರು ಹರಿಸುವ ರೈತರು ಕೇವಲ ನ್ಯಾಯಯುತ ಪರಿಹಾರ ಮತ್ತು ಸ್ಪಷ್ಟ ಮಾಹಿತಿಗಷ್ಟೇ ಅರ್ಹರಲ್ಲ; ತಮ್ಮ ಗದ್ದೆಗಳಿಗಿಂತಲೂ ವಿಸ್ತಾರವಾದ ರಾಜಕೀಯ ಮೇಲಾಟಗಳಲ್ಲಿ ತಾವು ಕೇವಲ 'ದಾಳಗಳಾಗಬಾರದು' ಎಂದು ಬಯಸುವ ಹಕ್ಕೂ ಅವರಿಗಿದೆ. ಅಭಿವೃದ್ಧಿಯ ಹೆಸರಿನಲ್ಲಿ ನಡೆಯುವ ರಾಜಕೀಯ ಕದನಗಳಿಗೆ ರೈತರ ಹಿತಾಸಕ್ತಿ ಬಲಿಯಾಗಬಾರದು. ಈ ಇಡೀ ಪ್ರಕ್ರಿಯೆಯು ಫಲಪ್ರದ ಸಂವಾದವಾಗಿ ಮಾರ್ಪಡುತ್ತದೆಯೋ ಅಥವಾ ವಿನಾಶಕಾರಿ ಸಂಘರ್ಷವಾಗಿ ರೂಪಾಂತರಗೊಳ್ಳುತ್ತದೆಯೋ ಎಂಬುದು ಕೇವಲ ವಾಕ್ಚಾತುರ್ಯವನ್ನಲ್ಲ, ಬದಲಾಗಿ ಆಡಳಿತದ ಪಾರದರ್ಶಕತೆಯನ್ನು ಅವಲಂಬಿಸಿದೆ.

ಭೂಮಿ ರೈತನ ವಶದಲ್ಲೇ ಇರಬಹುದು. ಆದರೆ ಈ ವಿಷಯದ ನಿರೂಪಣೆಯು ಸತ್ಯದ ಪರವಾಗಿ ನಿಲ್ಲುತ್ತದೆ–ಯೋ ಅಥವಾ ರಾಜಕೀಯ ನಾಟಕದ ಸುಳಿಗೆ ಸಿಲುಕಿ ಹಳಿ ತಪ್ಪುತ್ತದೆಯೋ ಎಂಬುದೇ ನಮ್ಮ ಮುಂದಿರುವ ಅತಿ ದೊಡ್ಡ ಸವಾಲು." ಮಾಲೀಕತ್ವ ಮತ್ತು ಕೃಷಿಯ ನೈಜ ವಾಸ್ತವ ಈ ಇಡೀ ಸಮಸ್ಯೆಯ ತಿರುಳಿನಲ್ಲಿ ಒಂದು ಸರಳ ತಾಂತ್ರಿಕ ಸತ್ಯವಿದೆ: ಪ್ರಸರಣ ಗೋಪುರಗಳ ನಿರ್ಮಾಣಕ್ಕೆ ಬೃಹತ್ ಪ್ರಮಾಣದ ಭೂಸ್ವಾಧೀನದ ಅಗತ್ಯವೇ ಇಲ್ಲ. ಪ್ರತಿಯೊಂದು ಗೋಪುರವು ಕೇವಲ ನಾಲ್ಕು ಸಣ್ಣ ತಳಪಾಯಗಳ ಮೇಲೆ ನಿಲ್ಲುತ್ತದೆ ಮತ್ತು ಆ ಭೂಮಿಯ ಸಂಪೂರ್ಣ ಮಾಲೀಕತ್ವ ರೈತನ ಬಳಿಯೇ ಉಳಿಯುತ್ತದೆ. ಹೆದ್ದಾರಿ ಅಥವಾ ಕೈಗಾರಿಕಾ ಕಾರಿಡಾರ್‌ಗಳಂತೆ ಇಲ್ಲಿ ಜಮೀನನ್ನು ಕಳೆದುಕೊಳ್ಳುವ ಪ್ರಮೇಯವೇ ಬರುವುದಿಲ್ಲ; ಪ್ರಸರಣ ಮಾರ್ಗಗಳಲ್ಲಿ ಭೂಮಿಯ ಹಕ್ಕುಗಳು ಬದಲಾಗುವುದಿಲ್ಲ ಎಂಬ ಅಂಶವನ್ನು ಕಂದಾಯ ದಾಖಲೆಗಳೂ ಸ್ಪಷ್ಟಪಡಿಸುತ್ತವೆ. ಭೂಬಳಕೆಯ ಕುರಿತಾದ ಆತಂಕಗಳನ್ನು ದೂರ ಮಾಡಿರುವ ಕರ್ನಾಟಕದ ಖ್ಯಾತ ತೋಟಗಾರಿಕಾ ತಜ್ಞರಾದ ಎಸ್.ವಿ. ಹಿತ್ತಲಮನಿ ಅವರು ಮಹತ್ವದ ಅಂಶವೊಂದನ್ನು ಬಿಚ್ಚಿಡುತ್ತಾರೆ. "ವಿದ್ಯುತ್ ಗೋಪುರಗಳು ರೈತರ ಭೂಮಿಯ ಮೇಲೆ ನಿರ್ಮಾಣವಾದರೂ, ಅದರ ಮೂಲ ಮಾಲೀಕತ್ವ ರೈತನ ಬಳಿಯೇ ಇರುತ್ತದೆ.

ಇಡೀ ಜಮೀನು ಸರ್ಕಾರದ ಪಾಲಾಗುತ್ತದೆ ಎಂಬುದು ತಪ್ಪು ಕಲ್ಪನೆ; ಕೇವಲ ಒಂದು ಪುಟ್ಟ ಭಾಗವನ್ನಷ್ಟೇ ನಿರ್ಮಾಣಕ್ಕೆ ಬಳಸಿಕೊಳ್ಳಲಾಗುತ್ತದೆ. ಈ ಜಾಗವನ್ನು ಪಾಳು ಬಿಡಬೇಕಿಲ್ಲ. ಬದಲಿಗೆ ರಾಗಿ, ಜೋಳ, ತರಕಾರಿಗಳಂತಹ ಕಾಲೋಚಿತ ಬೆಳೆಗಳನ್ನು ಅಲ್ಲಿ ಯಶಸ್ವಿಯಾಗಿ ಬೆಳೆಯಬಹುದು. ರಾಜ್ಯದ ಅನೇಕ ಭಾಗಗಳಲ್ಲಿ ರೈತರು ಈಗಾಗಲೇ ಇಂತಹ ಗೋಪುರಗಳ ಕೆಳಗೆ ಸಮೃದ್ಧ ಬೆಳೆ ತೆಗೆಯುತ್ತಿದ್ದಾರೆ." ಎಂದು ಹೇಳಿದ್ದಾರೆ. ಸುರಕ್ಷತಾ ನಿರ್ಬಂಧಗಳು ಮತ್ತು ಪರಿಹಾರ ಕೃಷಿ ಚಟುವಟಿಕೆಗಳಿಗೆ ಪೂರ್ಣ ಅವಕಾಶವಿದ್ದರೂ, ಸುರಕ್ಷತೆಯ ಹಿತದೃಷ್ಟಿಯಿಂದ ಕೆಲವು ಅನಿವಾರ್ಯ ನಿರ್ಬಂಧಗಳನ್ನು ಪಾಲಿಸುವುದು ಕಡ್ಡಾಯವಾಗಿದೆ. ವಿದ್ಯುತ್ ವಾಹಕ ತಂತಿಗಳ ನೇರ ಅಡಿಯಲ್ಲಿ ಶಾಶ್ವತ ಕಟ್ಟಡಗಳ ನಿರ್ಮಾಣ ಮತ್ತು ತಂತಿಗಳಿಗೆ ತಗುಲುವಷ್ಟು ಎತ್ತರಕ್ಕೆ ಬೆಳೆಯುವ ಮರಗಳನ್ನು ನೆಡುವುದನ್ನು ನಿಷೇಧಿಸಲಾಗಿದೆ. ಇದು ಕೇವಲ ತಾಂತ್ರಿಕ ನಿಯಮವಲ್ಲ, ಬದಲಿಗೆ ರೈತರ ಜಮೀನು ಮತ್ತು ಪ್ರಾಣಹಾನಿಯನ್ನು ತಡೆಯುವ ಮುನ್ನೆಚ್ಚರಿಕೆಯ ಕ್ರಮವಾಗಿದೆ. ಆದಾಗ್ಯೂ, ಸುರಕ್ಷತೆಯ ದೃಷ್ಟಿಯಿಂದ ಕೆಲವು ಮಿತಿಗಳಿರುವುದನ್ನು ಎಸ್.ವಿ. ಹಿತ್ತಲಮನಿ ಅವರು ಸ್ಪಷ್ಟಪಡಿಸುತ್ತಾರೆ: 'ತೆ–ಂಗು, ಅಡಿಕೆ, ಮಾವಿನಂತಹ ಎತ್ತರಕ್ಕೆ ಬೆಳೆಯುವ ಬಹುವಾರ್ಷಿಕ ಮರಗಳನ್ನು ವಿದ್ಯುತ್ ಮಾರ್ಗಗಳ ಕೆಳಗೆ ಬೆಳೆಯುವಂತಿಲ್ಲ. ಇವು ವಿದ್ಯುತ್ ತಂತಿಗಳನ್ನು ಸ್ಪರ್ಶಿಸಿ ಅನಾಹುತ ಸಂಭವಿಸುವ ಅಪಾಯವಿರುವುದರಿಂದ ಈ ನಿಷೇಧ ಅನಿವಾರ್ಯವಾಗಿದೆ. ಹಾಗೆಯೇ, ಈ ಜಾಗದಲ್ಲಿ ಯಾವುದೇ ಶಾಶ್ವತ ಕಟ್ಟಡ ನಿರ್ಮಾಣಕ್ಕೆ ಅವಕಾಶವಿಲ್ಲ. ಆದರೆ, ಈ ಎತ್ತರದ ಮರಗಳನ್ನು ಹೊರತುಪಡಿಸಿ, ಉಳಿದಂತೆ ರೈತರು ತಮ್ಮ ಭೂಮಿಯಲ್ಲಿ ಎಂದಿನಂತೆ ಕೃಷಿ ಚಟುವಟಿಕೆಗಳನ್ನು ಮುಂದುವರಿಸಲು ಯಾವುದೇ ಅಡ್ಡಿಯಿಲ್ಲ' ಎಂದು ಅವರು ವಿವರಿಸುತ್ತಾರೆ. ಯೋಜನೆಯ ಕಂಪನಿಯ ಅಧಿಕಾರಿಗಳು ನೀಡುವ ಮಾಹಿತಿ ಪ್ರಕಾರ , ಗೋಪುರದ ತಳಪಾಯದ ವಿಸ್ತೀರ್ಣ, ರೈಟ್–ಆಫ್–ವೇ ವ್ಯಾಪ್ತಿಯ ಪ್ರಭಾವ ಹಾಗೂ ತೆರವುಗೊಳಿಸಲಾದ ಮರಗಳ ಮೌಲ್ಯವನ್ನು ಆಧರಿಸಿ ಪರಿಹಾರವನ್ನು ಮುಂಗಡವಾಗಿಯೇ ಪಾವತಿಸಲಾಗುತ್ತದೆ. ವಿಶೇಷವಾಗಿ ತೋಟಗಾರಿಕಾ ಜಮೀನುಗಳಲ್ಲಿ ಬೆಳೆಯ ಪ್ರಕಾರ ಮತ್ತು ಸಾಂದ್ರತೆಗೆ ಅನುಗುಣವಾಗಿ ಈ ಪರಿಹಾರದ ಮೊತ್ತವು ದೊಡ್ಡ ಮಟ್ಟದಲ್ಲಿರುತ್ತದೆ. ಆದರೆ, ಮಣ್ಣಿನ ಗುಣಮಟ್ಟ, ಮರದ ವಯಸ್ಸು ಅಥವಾ ವಿದ್ಯುತ್ ಮಾರ್ಗದ ವೋಲ್ಟೇಜ್ ಮಟ್ಟಗಳಂತಹ ವ್ಯತ್ಯಾಸಗಳನ್ನು ಪರಿಗಣಿಸದೆ, ಕೇವಲ ಅಂಕಿ–ಅಂಶಗಳನ್ನು ಪರಸ್ಪರ ಹೋಲಿಕೆ ಮಾಡಿಕೊಂಡಾಗ ಅಸಮಾಧಾನ ಮತ್ತು ಗೊಂದಲಗಳು ಉಂಟಾಗುತ್ತವೆ," ಎಂದು ಹೇಳುತ್ತಾರೆ. ಉಪಸಂಹಾರ ಅಂತಿಮವಾಗಿ, ಈ ಪ್ರಸರಣ ಗೋಪುರಗಳು ಕೇವಲ ಲೋಹದ ಕಂಬಗಳಲ್ಲ, ಅವು ರಾಜ್ಯಗಳು, ಉತ್ಪಾದಕರು ಮತ್ತು ಗ್ರಾಹಕರನ್ನು ಬೆಸೆಯುವ ಅಭಿವೃದ್ಧಿಯ ನಾಡಿಮಿಡಿತಗಳು. ಈ ಪ್ರಕ್ರಿಯೆಯಲ್ಲಿ ಸಕ್ರಿಯವಾಗಿರುವ ರೈತರಿಗೆ ಕೇವಲ ನ್ಯಾಯಯುತ ಪರಿಹಾರವಷ್ಟೇ ಅಲ್ಲ, ವಿಷಯದ ಬಗ್ಗೆ ಸ್ಪಷ್ಟತೆ ಮತ್ತು ಪಾರದರ್ಶಕತೆಯನ್ನು ಪಡೆಯುವ ಹಕ್ಕಿದೆ. ಎಲ್ಲಕ್ಕಿಂತ ಮಿಗಿಲಾಗಿ, ತಮ್ಮ ಶ್ರಮದ ಭೂಮಿಯಲ್ಲಿ ನಡೆಯುವ ರಾಜಕೀಯ ನಾಟಕಗಳಿಗೆ ತಾವು ಕೇವಲ 'ದಾಳ'ಗಳಾಗಬಾರದೆಂದು ಬಯಸುವ ಘನತೆಯ ಹಕ್ಕು ಅವರಿಗಿದೆ.

# ಕೊಲ್ಯ ಮಠ ಶ್ರೀ ಮೂಕಾಂಬಿಕಾ ಕ್ಷೇತ್ರದಲ್ಲಿ 38ನೇ ವಾರ್ಷಿಕ ಪ್ರತಿಷ್ಠಾ ಮಹೋತ್ಸವ

## ಕೊಲ್ಯ ಕ್ಷೇತ್ರ ಪುನರುಜ್ಜೀವನದ ಹೊಳಪು



**ಕೊಲ್ಯ:** ಕೊಲ್ಯ ಶ್ರೀ ದೇವಿ ಮೂಕಾಂಬಿಕಾ ಕ್ಷೇತ್ರದಲ್ಲಿ ನಡೆದ 38ನೇ ವಾರ್ಷಿಕ ಪ್ರತಿಷ್ಠಾ ಮಹೋತ್ಸವವು ಭಕ್ತಿಭಾವದಿಂದ ಮತ್ತು ಅದ್ದೂರಿಯಾಗಿ ನೆರವೇರಿದ್ದು, ಕ್ಷೇತ್ರದ ಇತಿಹಾಸದಲ್ಲಿ ಮತ್ತೊಂದು ಸುವರ್ಣ ಅಧ್ಯಾಯವಾಗಿ ಉಳಿದಿದೆ. ಐದು ದಿನಗಳ ಕಾಲ ನಡೆದ ಮಹೋತ್ಸವದಲ್ಲಿ ಮಹಾಪೂಜೆ, ಲಲಿತಾ ಸಹಸ್ರನಾಮ ಪಠಣ, ಅನ್ನಸಂತರ್ಪಣೆ ಸೇರಿದಂತೆ ವಿವಿಧ ಧಾರ್ಮಿಕ ಕಾರ್ಯಕ್ರಮಗಳು ಭಕ್ತರ ಮನಸ್ಸಿಗೆ ಆಧ್ಯಾತ್ಮಿಕ ಸ್ಪರ್ಶ ನೀಡಿದವು.

ಜಗದ್ಗುರು ಶ್ರೀ ರಮಾನಂದ ಸ್ವಾಮೀಜಿಗಳ ಅಸ್ತಂಗತಿಯಾದ ನಂತರ ಕೆಲಕಾಲ ಕ್ಷೇತ್ರದ ಚಟುವಟಿಕೆಗಳು ಮಂಕಾಗಿದ್ದವು. ಸ್ವಾಮೀಜಿಗಳ ಸಾನ್ನಿಧ್ಯವಿಲ್ಲದೆ ಕ್ಷೇತ್ರದಲ್ಲಿ ಒಂದು ಶೂನ್ಯತೆಯ ಭಾವ ಮೂಡಿತ್ತು. ಆದರೆ ಆ ಮೌನಾವಸ್ಥೆಯನ್ನು ಮುರಿದು ಕ್ಷೇತ್ರಕ್ಕೆ ಹೊಸ ಚೈತನ್ಯ ತುಂಬಿದ ನಾಯಕತ್ವವೆಂದರೆ ಟ್ರಸ್ಟ್ ಅಧ್ಯಕ್ಷರಾದ ಚಂದ್ರಹಾಸ್ ಪಂಡಿತ್ ಹೌಸ್ ಅವರದು. ಅವರ ಸಂಘಟನಾ ಸಾಮರ್ಥ್ಯ, ಸೇವಾಭಾವ ಮತ್ತು ದೃಢಸಂಕಲ್ಪದಿಂದ ಕೊಲ್ಯ ಕ್ಷೇತ್ರವು ಮತ್ತೆ ಜೀವಂತವಾಗಿದೆ.

ಈ ಮಹೋತ್ಸವವು ಕೇವಲ ವಾರ್ಷಿಕ ಆಚರಣೆ ಮಾತ್ರವಲ್ಲ, ಕ್ಷೇತ್ರದ ಪುನರುಜ್ಜೀವನದ ಸಂಕೇತವಾಗಿದೆ. ಸಮಾಜದ ವಿವಿಧ ವರ್ಗಗಳನ್ನು ಒಂದೇ ವೇದಿಕೆಯಲ್ಲಿ ಒಂದಾಗಿಸಿ, ಭಕ್ತರಲ್ಲಿ ನಂಬಿಕೆ ಮತ್ತು ಉತ್ಸಾಹವನ್ನು ತುಂಬುವ ಕಾರ್ಯದಲ್ಲಿ ಚಂದ್ರಹಾಸ್ ಪಂಡಿತ್ ಹೌಸ್ ಅವರು ಮುಂಚೂಣಿಯಲ್ಲಿದ್ದಾರೆ. ಅವರ ನೇತೃತ್ವದಲ್ಲಿ ಕ್ಷೇತ್ರದ ಜೀರ್ಣೋದ್ಧಾರ ಕಾರ್ಯಗಳು ಗತಿ ಪಡೆದುಕೊಂಡಿದ್ದು, ಭಕ್ತ ಸಮುದಾಯದಲ್ಲಿ ವಿಶ್ವಾಸ ಮತ್ತೊಮ್ಮೆ ಬಲಗೊಂಡಿದೆ.

ಉತ್ಸವದ ಸಂದರ್ಭ ಗಣ್ಯರ ಉಪಸ್ಥಿತಿ, ಭಕ್ತರ ಅಪಾರ ಸಹಭಾಗಿತ್ವ ಮತ್ತು ಸಂಘಟಿತ ಕಾರ್ಯಕ್ರಮಗಳ ಯಶಸ್ಸು ಸೇರಿ ಕೊಲ್ಯ ಕ್ಷೇತ್ರವು ಮತ್ತೆ ಆಧ್ಯಾತ್ಮಿಕ ಕೇಂದ್ರವಾಗಿ ಬೆಳಗುತ್ತಿರುವುದು ಸ್ಪಷ್ಟವಾಗಿದೆ. ಸ್ವಾಮೀಜಿಗಳ ಆದರ್ಶಗಳನ್ನು ಹೃದಯದಲ್ಲಿ ಹೊತ್ತು, ಕ್ಷೇತ್ರದ ಅಭಿವೃದ್ಧಿಗೆ ಸಮರ್ಪಿತರಾಗಿ ದುಡಿಯುತ್ತಿರುವ ಚಂದ್ರಹಾಸ್ ಪಂಡಿತ್ ಹೌಸ್ ಅವರ ಸೇವೆ ಪ್ರಶಂಸನೀಯವಾಗಿದೆ.

ಕೊಲ್ಯ ಶ್ರೀ ಮೂಕಾಂಬಿಕಾ ಕ್ಷೇತ್ರದ ಅಭಿವೃದ್ಧಿ ಎಂದರೆ ಕೇವಲ ಕಟ್ಟಡಗಳ ವೃದ್ಧಿ ಅಲ್ಲ; ಅದು ಭಕ್ತರ ಮನಸ್ಸಿನಲ್ಲಿ ಧರ್ಮನಿಷ್ಠೆ ಮತ್ತು ಏಕತೆಯನ್ನು ಬೆಳೆಸುವ ಪವಿತ್ರ ಕಾರ್ಯ. ಆ ದಾರಿಯಲ್ಲಿ ಕ್ಷೇತ್ರವನ್ನು ಹೊಸ ಉನ್ನತಿಗೆ ಕೊಂಡೊಯ್ಯುತ್ತಿರುವ ಚಂದ್ರಹಾಸ್ ಪಂಡಿತ್ ಹೌಸ್ ಅವರಿಗೆ ಹಾರ್ದಿಕ ಅಭಿನಂದನೆಗಳು ಮತ್ತು ಶುಭಾಶಯಗಳು.



> **"ಉಳ್ಳಾಲದಲ್ಲಿ ಪ್ರಪ್ರಥಮ ಬಾರಿಗೆ ಹಿಂದೂ ಸಮಾಜೋತ್ಸವ ಮಾಡಿಸಿದ ಕೀರ್ತಿ ರಮಾನಂದ ಸ್ವಾಮೀಜಿಯವರಿಗೆ ಸಲ್ಲ ತಕ್ಕದ್ದು.ಹಿಂದೂ ಸಮಾಜದ ಬಗ್ಗೆ ಅವರಲ್ಲಿದ್ದ ಪ್ರೀತಿ,ಅಭಿಮಾನಗಳು ನಮಗೆಲ್ಲರಿಗೂ ಸ್ಫೂರ್ತಿಯಾಗಿದೆ. ಅವರು ಇಂದು ಬದುಕಿದ್ದರೆ ಎಲ್ಲರನ್ನ ಒಟ್ಟುಗೂಡಿಸಿ ಕೊಲ್ಯ ಕ್ಷೇತ್ರವನ್ನು ಅಭಿವೃದ್ಧಿಗೊಳಿಸುತ್ತಿದ್ದರು. ಇದೀಗ ಸ್ವಾಮೀಜಿಯವರ ದಿವ್ಯ ಪ್ರೇರಣೆಯಿಂದಲೇ ಕ್ಷೇತ್ರದ ಆಡಳಿತಕ್ಕೆ ಉತ್ತಮ ನಾಯಕತ್ವ ದೊರೆತಿದ್ದು,ಮೂಕಾಂಬಿಕ ಕ್ಷೇತ್ರವು ಉತ್ತರೋತ್ತರ ಅಭಿವೃದ್ಧಿ ಹೊಂದುವುದರಲ್ಲಿ ಯಾವುದೇ ಸಂಶಯವಿಲ್ಲ. ಕ್ಷೇತ್ರ ಜೀರ್ಣೋದ್ಧಾರಕ್ಕೆ ಎಲ್ಲಾ ರೀತಿಯ ಸಹಕಾರ ನೀಡಲು ಬದ್ಧನಾಗಿದ್ದೇನೆ.**
>
> ■ **ಸುರೇಶ್ ಭಟ್ನಗರ,**
> **ಜಿಲ್ಲಾ ಧಾರ್ಮಿಕ ಪರಿಷತ್ ಸದಸ್ಯರು.**

**ಜೀರ್ಣೋದ್ಧಾರ ಕಾರ್ಯದಲ್ಲಿ ಸಕ್ರಿಯವಾಗಿ ತೊಡಗಿಸಿಕೊಳ್ಳಬೇಕು: ಕಿಶೋರ್ ಕುಮಾರ್ ಬೊಟ್ಯಾಡಿ**

ನಾವೆಲ್ಲರೂ ಉದಾಸೀನ ಮನೋಭಾವವನ್ನು ಬಿಟ್ಟು ಜಗದ್ಗುರು ಶ್ರೀ ರಮಾನಂದ ಸ್ವಾಮೀಜಿಯವರು ಸ್ಥಾಪಿಸಿದ ಕೊಲ್ಯ ಮೂಕಾಂಬಿಕಾ ಕ್ಷೇತ್ರದ ಜೀರ್ಣೋದ್ಧಾರ ಕಾರ್ಯದಲ್ಲಿ ಸಕ್ರಿಯವಾಗಿ ತೊಡಗಿಸಿಕೊಳ್ಳಬೇಕು.ವಿದಾನಪರಿಷತ್ತಿನ ಪ್ರದೇಶಾಭಿವೃದ್ಧಿ ನಿಧಿಯಿಂದ ಕ್ಷೇತ್ರದ ಜೀರ್ಣೋದ್ಧಾರ ಕಾರ್ಯಕ್ಕೆ ಅನುದಾನ ನೀಡುವುದಾಗಿ ವಿದಾನಪರಿಷತ್ ಸದಸ್ಯರಾದ ಕಿಶೋರ್ ಕುಮಾರ್ ಬೊಟ್ಯಾಡಿ ಹೇಳಿದರು.

ಬಿಜೆಪಿ ಜಿಲ್ಲಾಧ್ಯಕ್ಷರಾದ ಸತೀಶ್ ಕುಂಪಲ ಮಾತನಾಡಿ ರಮಾನಂದ ಸ್ವಾಮೀಜಿಯವರ ಅನುಯಾಯಿಗಳಾದ ನಾವೆಲ್ಲರೂ ಕೊಲ್ಯ ಕ್ಷೇತ್ರವು ಅಭಿವೃದ್ಧಿ ಹೊಂದುವ ವಿಚಾರದಲ್ಲಿ ಅತ್ಯಂತ ಸಂತೋಷಪಡುತ್ತೇವೆ. ದಕ್ಷಿಣ ಕನ್ನಡ,ಕಾಸರಗೋಡು,ಉಡುಪಿ ಜಿಲ್ಲೆಗಳ ಬಡ,ಶೋಷಿತ ವರ್ಗದವರ ಕಷ್ಟ,ಕಾರ್ಪಣ್ಯಗಳಿಗೆ ಸ್ಪಂದಿಸುವಲ್ಲಿ ರಮಾನಂದ ಸ್ವಾಮೀಜಿಗಳು ಮುಂಚೂಣಿಯಲ್ಲಿದ್ದರು.ಉಳ್ಳಾಲದಲ್ಲಿ ಕಡಲ್ಕೊರೆತ ಉಂಟಾದ ಸಂದರ್ಭದಲ್ಲಿ ಸ್ವಾಮೀಜಿಯವರು ನೆರೆ ಸಂತ್ರಸ್ತರಿಗೆ ಬರ್ಖಾರ್ ನಿಂದ ದಿನಸಿ ಕಿಟ್ ಗಳನ್ನ ಸಾಲ ತಂದು ಹಂಚಿದನ್ನು ಎಂದಿಗೂ ಮರೆಯಲು ಅಸಾಧ್ಯ.ಇದೀಗ ಕೊಲ್ಯ ಕ್ಷೇತ್ರವು ಅಭಿವೃದ್ಧಿಗೊಳ್ಳುವ ಪರ್ವ ಕಾಲ ಸಮೀಪಿಸಿದೆ.ಕ್ಷೇತ್ರ ಅಭಿವೃದ್ಧಿಗೊಳ್ಳುವಾಗ ನಮ್ಮ ಮನಸ್ಸುಗಳು ಕೂಡ ಪರಿಶುದ್ಧಗೊಳ್ಳಬೇಕು.ಆ ಮೂಲಕ ನಮ್ಮನ್ನ ಅಗಲಿರುವ ಸ್ವಾಮೀಜಿಯವರ ಆದರ್ಶಗಳಿಗೆ ಮನ್ನಣೆ ಸಿಗುವ ರೀತಿಯಲ್ಲಿ ಕೆಲಸ ಮಾಡಬೇಕು.ಹಿಂದುತ್ವದ ಚಟುವಟಿಕೆಗಳಿಗೆ ಕೇಂದ್ರವಾಗಿರುವ ಕೊಲ್ಯ ಕ್ಷೇತ್ರವು ಉತ್ತರೋತ್ತರ ಅಭಿವೃದ್ಧಿಯಾಗಲೆಂದು ಅವರು ಆಶಿಸಿದರು. ಶ್ರೀ ಜಗದ್ಗುರು ರಮಾನಂದ ಸ್ವಾಮೀಜಿ ಮಹಾಸಂಸ್ಥಾನಮ್ ಚಾರಿಟೇಬಲ್ ಟ್ರಸ್ಟ್ ನ ಅಧ್ಯಕ್ಷರಾದ ಚಂದ್ರಹಾಸ್ ಪಂಡಿತ್ ಹೌಸ್ ಅಧ್ಯಕ್ಷತೆ ವಹಿಸಿದ್ದರು.ಟ್ರಸ್ಟಿಗಳಾದ ಮಹಾಬಲ ಶೆಟ್ಟಿ ಕೂಡ್ಲು,ಉಳ್ಳಾಲ ಚೀರುಂಭ ಭಗವತಿ ಕ್ಷೇತ್ರದ ಆಡಳಿತ ಮೊಕ್ತೇಸರರು,ಜಿಲ್ಲಾ ಧಾರ್ಮಿಕ ಪರಿಷತ್ ಸದಸ್ಯರಾದ ಸುರೇಶ್ ಭಟ್ನಗರ,ಕಲ್ಲಾಪು ಬುರ್ದುಗೋಳಿ ಗುಳಿಗ–ಕೊರಗಜ್ಜ ಕ್ಷೇತ್ರದ ಅಧ್ಯಕ್ಷರಾದ ವಿಶ್ವನಾಥ ನಾಯ್ಕ್,ಸೋಮೇಶ್ವರ ಪುರಸಭೆಯ ಉಪಾಧ್ಯಕ್ಷರಾದ ರವಿಶಂಕರ್ ಸೋಮೇಶ್ವರ,ಯಾದವ ಸಭಾ ಕರ್ನಾಟಕ ಕೇಂದ್ರ ಸಮಿತಿಯ ಜಿಲ್ಲಾಧ್ಯಕ್ಷರಾದ ಎ.ಕೆ.ಮಣಿಯಾಣಿ,ಮಾವಿನ ಕಟ್ಟೆ ಪರಿವಾರ ಸಮೇತ ಶ್ರೀ ಅಯ್ಯಪ್ಪ ಸ್ವಾಮಿ ಭಜನಾ ಮಂದಿರದ ಅಧ್ಯಕ್ಷರಾದ ವಿಶ್ವನಾಥ ಬಳ್ಳಪದವು ಮೊದಲಾದವರು ಉಪಸ್ಥಿತರಿದ್ದರು. ಕ್ಷೇತ್ರದ ಪ್ರ.ಕಾ ರವಿಚಂದ್ರ ಪಿ.ಎಮ್ ಮಂಗಳೂರು ಸ್ವಾಗತಿಸಿದರು. ಕೋಶಾಧಿಕಾರಿ ಸದಾನಂದ ಕಾವೂರು ವಂದಿಸಿದರು.ಪ್ರವೀಣ್.ಎಸ್.ಕುಂಪಲ ನಿರೂಪಿಸಿದರು.




# ಕೋಟೆಕಾರು ಮಾಡೂರು ಶ್ರೀ ಅರಸು ಮಂಜಿಷ್ಣಾರ್ ದೈವಸ್ಥಾನ ರಸ್ತೆ ಅಭಿವೃದ್ಧಿಗೆ ಶಿಲಾನ್ಯಾಸ



**ಉಳ್ಳಾಲ:** ಕೋಟೆಕಾರ್ ಮಾಡೂರಿನ ಶ್ರೀ ಅರಸು ಮಂಜಿಷ್ಣಾರ್ ದೈವಸ್ಥಾನ ಹಾಗೂ ಬಲ್ಯ ಬಾಳಿಕೆ ಧರ್ಮ ಚಾವಡಿ ಪ್ರದೇಶದ ಧಾರ್ಮಿಕ ಹಾಗೂ ಸಾಮಾಜಿಕ ಬದುಕಿನ ಪ್ರಮುಖ ಕೇಂದ್ರವಾಗಿದೆ. ಇಲ್ಲಿಗೆ ಆಗಮಿಸುವ ಭಕ್ತಾದಿಗಳು ಮತ್ತು ಸಾರ್ವಜನಿಕರ ಅನುಕೂಲಕ್ಕಾಗಿ ಸಂಪರ್ಕ ರಸ್ತೆ ಅಭಿವೃದ್ಧಿ ಬಹು ಅವಶ್ಯಕವಾಗಿತ್ತು. ಈ ಹಿನ್ನೆಲೆ ಕೋಟೆಕಾರ್ ಪಟ್ಟಣ ಪಂಚಾಯತ್ ನಿಧಿಯಿಂದ ರಸ್ತೆ ಅಭಿವೃದ್ಧಿ ಕಾರ್ಯಕ್ಕೆ ಶಿಲಾನ್ಯಾಸ ನೆರವೇರಿಸಿರುವುದು ಸಂತೋಷದ ಸಂಗತಿ ಎಂದು ಕೋ–ಟೆಕಾರು ಪಟ್ಟಣ ಪಂಚಾಯತ್ ಸದಸ್ಯರಾದ ಸುಜಿತ್ ಮಾಡೂರು ಹೇಳಿದರು.

ಕೋಟೆಕಾರು ಮಾಡೂರಿನ ಮೂರನೇ ವಾರ್ಡಿನಲ್ಲಿರುವ ಶ್ರೀ ಅರಸು ಮಂಜಿಷ್ಣಾರ್ ದೈವಸ್ಥಾನ ಹಾಗೂ ಬಲ್ಯ ಬಾಳಿಕೆ ಧರ್ಮ ಚಾವಡಿಯ ರಸ್ತೆ ಅಭಿವೃದ್ಧಿಗೆ ನಡೆದ ಶಿಲಾನ್ಯಾಸ ಕಾರ್ಯಕ್ರಮದಲ್ಲಿ ಭಾಗವಹಿಸಿ ಮಾತನಾಡಿದರು.

ಏಪ್ರಿಲ್ 05ರಿಂದ ದೈವಗಳ ಪುನರ್ ಪ್ರತಿಷ್ಠೆ ಹಾಗೂ ಧರ್ಮ ಚಾವಡಿಯ ಗೃಹ ಪ್ರವೇಶ ಕಾರ್ಯಕ್ರಮಗಳು ನಡೆಯಲಿರುವುದು ಹೆಮ್ಮೆಯ ವಿಷಯ. ಈ ಮಹತ್ವದ ಕಾರ್ಯಕ್ರಮಕ್ಕೆ ಸಾವಿರಾರು ಭಕ್ತರು ಭಾಗವಹಿಸುವ ನಿರೀಕ್ಷೆಯಿದ್ದು, ಉತ್ತಮ ರಸ್ತೆ ವ್ಯವಸ್ಥೆ ಅಗತ್ಯವಾಗಿತ್ತು. ಪಟ್ಟಣ ಪಂಚಾಯತ್ ವತಿಯಿಂದ ಈ ಕೆಲಸಕ್ಕೆ ಆದ್ಯತೆ ನೀಡಲಾಗಿದೆ. ಧಾರ್ಮಿಕ ಕೇಂದ್ರಗಳ ಅಭಿವೃದ್ಧಿಗೆ ಸ್ಥಳೀಯ ಆಡಳಿತ ಸದಾ ಸಹಕಾರ ನೀಡುತ್ತದೆ. ದೈವಸ್ಥಾನದ ಅಭಿವೃದ್ಧಿ ಕಾರ್ಯಗಳು ಗ್ರಾಮೀಣ ಭಾಗದ ಆರ್ಥಿಕ ಹಾಗೂ ಸಾಮಾಜಿಕ ಬೆಳವಣಿಗೆಯಲ್ಲಿಯೂ ಸಹಕಾರಿಯಾಗುತ್ತದೆ. ಮುಂದಿನ ದಿನಗಳಲ್ಲಿಯೂ ಈ ಭಾಗದ ಮೂಲಭೂತ ಸೌಕರ್ಯಗಳ ಅಭಿವೃದ್ಧಿಗೆ ನಮ್ಮ ಬೆಂಬಲ ನಿರಂತರವಾಗಿರುತ್ತದೆ ಎಂದು ಅವರು ಭರವಸೆ ನೀಡಿದರು.

ಈ ಸಂದರ್ಭದಲ್ಲಿ ದೈವಸ್ಥಾನದ ಆಡಳಿತ ಮಂಡಳಿ ಹಾಗೂ ಸ್ಥಳೀಯ ಹಿರಿಯರಿಗೆ ಅಭಿನಂದನೆ ಸಲ್ಲಿಸಿದ ಅವರು, ಸಾರ್ವಜನಿಕರ ಸಹಕಾರದಿಂದ ಕಾರ್ಯಕ್ರಮವನ್ನು ಯಶಸ್ವಿಗೊಳಿಸಬೇಕೆಂದು ಮನವಿ ಮಾಡಿದರು.

ಕಾರ್ಯಕ್ರಮದಲ್ಲಿ ಬಿಜೆಪಿ ಬೂತ್ ಅಧ್ಯಕ್ಷ ಪುರುಷೋತ್ತಮ ಗಟ್ಟಿ ಕಾಚಾರ್, ಬಿಜೆಪಿ ಬೂತ್ ಕಾರ್ಯದರ್ಶಿ ರಾಹುಲ್, ನವೀನ್ ಶೆಟ್ಟಿ ಬಲ್ಯ, ವಿಶ್ವನಾಥ ಶೆಟ್ಟಿ, ಪವನ್ ಶೆಟ್ಟಿ, ರಾಜೇಶ್ ಶೆಟ್ಟಿ, ಗಂಗಾಧರ್ ಅಜಿಲ, ರೋಹಿತ್ ಕಾಜವ, ನವೀನ್ ಪೂಜಾರಿ ಮಾಡೂರು, ಪುರುಷೋತ್ತಮ್ ಗಟ್ಟಿ ಕಾಚರ್, ರಾಹುಲ್ ಪೂಜಾರಿ, ಸುಜಿತ್ ಮಾಡೂರು, ಪ್ರೇಮ ಶೆಟ್ಟಿ, ಗೀತಾ ಶೆಟ್ಟಿ ಮುಂತಾದವರು ಉಪಸ್ಥಿತರಿದ್ದರು.

### ಉಳ್ಳಾಲ ನಗರ ಸಭೆ 2026-27 ಸಾಲಿನ ಬಜೆಟ್ ಮಂಡನೆಯ ಪೂರ್ವಭಾವಿ ಸಭೆಯಲ್ಲಿ ಜಿಲ್ಲಾಧಿಕಾರಿ

# ಸಮಸ್ಯೆಗಳಿಗೆ ಶೀಘ್ರ ಪರಿಹಾರ, ನಾಯಿಗಳಿಗೆ ಶೆಡ್ ನಿರ್ಮಾಣ



**ಉಳ್ಳಾಲ;** ಪೂರ್ವಭಾವಿ ಸಭೆಯಲ್ಲಿ ಅಭಿವೃದ್ಧಿ ಕುರಿತು ಚರ್ಚೆ ನಡೆಯಬೇಕು. ಸಮಸ್ಯೆಗಳಿಗೆ ಪರಿಹಾರ ಒದಗಿಸುವ ಯೋಜನೆ ರೂಪಿಸಬೇಕು. ಸಭೆಯಲ್ಲಿ ಮಹಿಳಾ ಸದಸ್ಯರು ಹೆಚ್ಚಿನ ಸಂಖ್ಯೆಯಲ್ಲಿ ಇದ್ದಾರೆ.

ನಿಮ್ಮ ವಾರ್ಡ್‌ನ ಪ್ರಮುಖ ಸಮಸ್ಯೆಗಳ ಬಗ್ಗೆ ಮಾಹಿತಿ ನೀಡಿದರೆ ಅವುಗಳಿಗೆ ಶೀಘ್ರ ಪರಿಹಾರ ಒದಗಿಸಲಾಗುವುದು ಎಂದು ಉಳ್ಳಾಲ ನಗರ ಸಭೆ 2026–27 ಸಾಲಿನ ಬಜೆಟ್ ಮಂಡನೆಯ ಪೂರ್ವಭಾವಿ ಸಭೆಯ ಅಧ್ಯಕ್ಷತೆ ವಹಿಸಿದ್ದ ಉಳ್ಳಾಲ ನಗರಸಭೆ ಆಡಳಿತಾಧಿಕಾರಿಯಾದ ಜಿಲ್ಲಾಧಿಕಾರಿ ದರ್ಶನ್ ಎಚ್ ವಿ ಸಲಹೆ ನೀಡಿದರು.

ಸಭೆಯಲ್ಲಿ ಉಳ್ಳಾಲಬೈಲ್, ಸುಭಾಷ್ ನಗರ, ಚೆಂಬುಗುಡ್ಡೆ, ಕೃಷ್ಣ ನಗರ ಮುಂತಾದ ಪ್ರದೇಶಗಳಲ್ಲಿ ಚರಂಡಿ ಸಮಸ್ಯೆಯಿಂದ ಉಂಟಾಗುತ್ತಿರುವ ತೊಂದರೆಗಳ ಬಗ್ಗೆ ಸ್ಥಳೀಯರು ಜಿಲ್ಲಾಧಿಕಾರಿಯ ಗಮನ ಸೆಳೆದರು.

ಇತ್ತೀಚೆಗೆ ನಿರ್ಮಾಣಗೊಂಡ ಸ್ಮಶಾನದಲ್ಲಿ ಮೂರು ಲಕ್ಷ ಮೌಲ್ಯದ ಕಬ್ಬಿಣ ಕಳುವಾಗಿದೆ. ಇದಕ್ಕೆ ಹೊಣೆ ಯಾರು..? ಜನನ ಮರಣ ಪ್ರಮಾಣ ಪತ್ರಗಳನ್ನು ಇಂಟರ್‌ನೆಟ್‌ನಲ್ಲಿ ಪಡೆಯುವ ವ್ಯವಸ್ಥೆ ರಾಜ್ಯದಲ್ಲೂ ಜಾರಿಯಾಗಬೇಕು ಎಂಬ ಆಗ್ರಹ ವ್ಯಕ್ತವಾಗಿದೆ.

ನಾಡದೋಣಿ ಮೀನುಗಾರರ ಸಂಘದ ಅಧ್ಯಕ್ಷ ಹನೀಫ್ ಮಾತನಾಡಿ, ಮೀನುಗಾರಿಕೆ ನಡೆಯುವ ಸ್ಥಳಗಳಲ್ಲಿಬೀದಿ ನಾಯಿಗಳ ಕಾಟ ಹೆಚ್ಚಾಗಿದೆ. ಇದಕ್ಕೆ ಪರಿಹಾರ ಯಾಕಿಲ್ಲ ಎಂದು ಪ್ರಶ್ನಿಸಿದರು. ಇದಕ್ಕೆ ಉತ್ತರಿಸಿದ ಡಿಸಿ ಅವರು, ನಾಯಿಗಳಿಗೆ ಶೆಡ್ ನಿರ್ಮಾಣ ಮಾಡಲು ಸರ್ಕಾರದ ಆದೇಶ ಇದೆ. ನಾಯಿಗಳಿಂದ ತುಂಬಾ ತೊಂದರೆ–ಯಾಗುತ್ತಿದೆ. ಈ ಕಾರಣಕ್ಕಾಗಿ ಶೆಡ್ ನಿರ್ಮಾಣ ಮಾಡಲಾಗುವುದು. ದಾರಿಯಲ್ಲಿ ಯಾರೂ ಕೂಡ ನಾಯಿಗಳಿಗೆ ಆಹಾರ ಹಾಕಬಾರದು ಎಂದು ಸೂಚನೆ ನೀಡಿದರು.

ಅಕ್ಕರೆ ಕೆರೆಯಲ್ಲಿ ಮಳೆ ನೀರು ಮನೆಗೆ ಬರುತ್ತದೆ.ಇದಕ್ಕೆ ಪರಿಹಾರ ಸಿಗುತ್ತಿಲ್ಲ. ಚರಂಡಿ ವ್ಯವಸ್ಥೆ ಕಲ್ಪಿಸಿ ಪರಿಹಾರ ಒದಗಿಸಬೇಕು ಎಮದು ಮಹಿಳೆಯೊಬ್ಬರು ಮನವಿ ಮಾಡಿದರು.

ಸುಭಾಷ್ ನಗರ ವಾರ್ಡ್‌ನಲ್ಲಿ ಚರಂಡಿ ವ್ಯವಸ್ಥೆ ಇಲ್ಲದೆ ಹಲವು ಮನೆಗಳಿಗೆ ಹಾನಿಯಾಗುತ್ತಿದೆ. ಕೈ–ಕೋ ಪ್ರದೇಶದಲ್ಲಿ ಅಂಗನವಾಡಿ ನಿರ್ಮಾಣಕ್ಕಾಗಿ ಅರ್ಜಿ ಸಲ್ಲಿಸಿ ಮೂರು ವರ್ಷವಾದರೂ ಕಾಮಗಾರಿ ಆರಂಭವಾಗಿಲ್ಲ. ಈ ಬಗ್ಗೆ ಶೀಘ್ರ ಕ್ರಮ ಕೈಗೊಳ್ಳಬೇಕು ಎಂದು ಮಾಜಿ ಕೌನ್ಸಿಲರ್ ಬಶೀರ್ ಮನವಿ ಮಾಡಿದರು.

ಉಳಿಯದಲ್ಲಿ ಜಲಸಿಇ ಯೋಜನೆಯಡಿ ಪೈಪ್ ಲೈನ್ ಕಾಮಗಾರಿ ಕೆಲವು ಮನೆಗಳಿಗೆ ಆಗಿಲ್ಲ. ಇದರಿಂದ ಅನೇಕ ಕುಟುಂಬಗಳಿಗೆ ತೊಂದರೆ ಉಂಟಾಗಿದೆ. ಈ ಸಮಸ್ಯೆ ಇತ್ಯರ್ಥಪಡಿಸಬೇಕು ಎಂದು ಮಾಜಿ ಕೌನ್ಸಿಲರ್ ವೀಣಾ ಜಿಲ್ಲಾಧಿಕಾರಿಯ ಗಮನ ಸೆಳೆದರು.

ಜಲಸಿರಿ ಯೋಜನೆಯಡಿ ಕುಡಿಯುವ ನೀರಿನ ಕಾಮಗಾರಿಯಿಂದ ರಸ್ತೆಅಗೆದು ಬಿಟ್ಟು ಕೇಬಲ್ ಕತ್ತರಿಸಲಾಗಿದೆ. ಈ ಬಗ್ಗೆ ಕ್ರಮ ಕೈಗೊಳ್ಳಬೇಕು ಎಮದು ಸ್ಥಳೀಯರಾದ ನಿಝಾಮ್ ಕೋರಿದರು.

ಬಡವರು ತೆರಿಗೆಗಳನ್ನು ಬೇಗ ಪಾವತಿ ಮಾಡುತ್ತಾರೆ. ಬಲಾಢ್ಯರು ಪಾವತಿ ಮಾಡುವುದಿಲ್ಲ ಈ ಬಗ್ಗೆ ಕ್ರಮಕೈಗೊಳ್ಳಬೇಕು. ಜೋರು ಮಳೆ ಬಂದರೆ ಹಲವು ಮನೆಗಳಿಗೆ ಹಾನಿ ಆಗುತ್ತದೆ. ಈ ಹಿನ್ನೆಲೆಯಲ್ಲಿ ರಾಜ ಕಾಲುವೆ ಸಮಸ್ಯೆ ಇತ್ಯರ್ಥ ಆಗಬೇಕು. ಮಾಜಿ ಉಪಾಧ್ಯಕ್ಷ ಅಯ್ಯೂಬ್ ಜಿಲ್ಲಾಧಿಕಾರಿಯ ಗಮನ ಸೆಳೆದರು.

ನಗರಸಭೆಯಲ್ಲಿ 31 ವಾರ್ಡ್‌ಗಳ ಪೈಕಿ ಕೆಲವು ವಾರ್ಡ್‌ಗಳ ಬೆರಳೆಣಿಕೆಯಷ್ಟು ಮಾಜಿ ಕೌನ್ಸಿಲರ್‌ಗಳು ಸಭೆಯಲ್ಲಿ ಭಾಗವಹಿಸಿದ್ದರು. ಹೆಚ್ಚಿನ ಸಂಖ್ಯೆಯಲ್ಲಿ ಮಹಿಳೆಯರು ಭಾಗವಹಿಸಿ, ತಮ್ಮ ತಮ್ಮ ವಾರ್ಡ್‌ಗಳ ಸಮಸ್ಯೆಗಳನ್ನು ಜಿಲ್ಲಾಧಿಕಾರಿಯ ಮುಂದಿಟ್ಟರು.

ಪೌರಾಯುಕ್ತ ಸಂತೋಷ್ ಹಾಗೂ ಲೆಕ್ಕಾಧಿಕಾರಿ ವಾಸುದೇವ ಸಭೆಯಲ್ಲಿ ಉಪಸ್ಥಿತರಿದ್ದರು.

# ಕೊರಗಜ್ಜನಿಗೆ ದೊಂದಿ ಬೆಳಕಿನ ಕೋಲ ಸೇವೆ; ಕಣ್ತುಂಬಿಕೊಂಡ ಭಕ್ತಗಣ



**ತೊಕ್ಕೊಟ್ಟು;** ತೊಕ್ಕೊಟ್ಟು ಶಿವಾಜಿ ಫ್ರೆಂಡ್ಸ್ ಸರ್ಕಲ್ ಕೊರಗಜ್ಜನಿಗೆ ದೊಂದಿ ಬೆಳಕಿನ ಕೋಲ ಸೇವೆ ವಿಜೃಂಭಣೆಯಿಂದ ನಡೆದಿದೆ. ತುಳುನಾಡಿನ ಕಾರ್ಣಿಕ ದೈವ ಕೊರಗಜ್ಜನ ಈ ಸ್ಥಳ ಹಿಂದು–ಮುಸ್ಲಿಂ–ಕ್ರೈಸ್ತರ ಭಾವೈಕ್ಯತೆಗೆ ಸಾಕ್ಷಿಯಾಗಿದೆ.

ಸ್ವಾಮಿ ಕೊರಗಜ್ಜ ಸೇವಾ ಸಮಿತಿ ವತಿಯಿಂದ ಕಳೆದ 11ವರ್ಷಗಳಿಗೆ ವರ್ಷಾವಧಿ ಕೋಲ ನಡೆಸುತ್ತಿದ್ದೇವೆ. ಕೊರಗಜ್ಜ ದೈವದ ದೊಂದಿಬೆಳಕಿನ ಕೋಲಸೇವೆ ವಿಶೇಷವಾಗಿದ್ದು, ಭಕ್ತಾದಿಗಳು ಸಾವಿರಾರು ಸಂಖ್ಯೆಯಲ್ಲಿ ಆಗಮಿಸುತ್ತಾರೆ. ಈಗಾಗಲೇ ಜಿಲ್ಲಾ ರಾಜ್ಯೋತ್ಸವ ಪುರಸ್ಕೃತ ಸಂಸ್ಥೆಯಾಗಿರುವ ಶಿವಾಜಿ ಫ್ರೆಂಡ್ಸ್ ಸುವರ್ಣ ಮಹೋತ್ಸದತ್ತ ಹೆಜ್ಜೆಇಡುತ್ತಿದೆ ಎಂದು ಸಿರಿಲ್ ಡಿಸೋಜಾ ಹೇಳಿದ್ದಾರೆ.

ಇನ್ನು ದೈವಿಕ ಕಾರ್ಯದಲ್ಲಿ ಭಕ್ತಾದಿಗಳು ಆಗಮಿಸಿ, ಅನ್ನಸಂತರ್ಪಣೆ ಸ್ವೀಕರಿಸಿ, ದೊಂದಿಬೆಳಕಿನ ಕೊರಗಜ್ಜನ ಕೋಲಸೇವೆಯನ್ನು ಕಣ್ತುಂಬಿ ಕೊಂಡಿದ್ದಾರೆ.

ಈ ಸಂದರ್ಭ ಸದಾನಂದ ಒಂಬತ್ತುಕೆರೆ, ಗೌರವ ಅಧ್ಯಕ್ಷ ಸಿರಿಲ್ ರಾಬರ್ಟ್ ಡಿ'ಸೋಜ, ಮಾಜಿ ಕಾರ್ಯದರ್ಶಿ ಚಂದ್ರಶೇಖರ ಉಚ್ಚಿಲ್, ಮಾಜಿ ಗೌರವ ಅಧ್ಯಕ್ಷ ಕೇಶವ ಭಟ್ನಗರ ಹಾಗೂ ಸಂಘದ ಪ್ರಧಾನ ಕಾರ್ಯದರ್ಶಿ ರೋಹನ್ ತೊ–ಕ್ಕೊಟ್ಟು ಉಪಸ್ಥಿತರಿದ್ದರು.

# ಭಕ್ತಿಪೂರ್ವ ನಡಿಗೆಯಿಂದ ಊರಿಗೇ ಶಾಂತಿ, ನೆಮ್ಮದಿ ಲಭಿಸಲಿದೆ; ಸ್ಪೀಕರ್ ಯು.ಟಿ.ಖಾದರ್




**ಮುಡಿಪು;** ಕಥೊಲಿಕ್ ಸಭಾ ಮಂಗಳೂರು ಪ್ರದೇಶ್ ವತಿಯಿಂದ 'ನಮ್ಮ ನಡಿಗೆ ಮುಡಿಪು ಪುಣ್ಯ ಕ್ಷೇತ್ರದ ಕಡೆಗೆ' ಆಧ್ಯಾತ್ಮಿಕ ಜಾಥಾಕ್ಕೆ ಪಾನೀರ್ ಮೆರ್ಸಿಯಮ್ಮ ಚರ್ಚ್ ಬಳಿ ಪಾನೀರ್ ಚರ್ಚ್ ಧರ್ಮಗುರು ಫಾ.ವಿಕ್ಟರ್ ಡಿಮೆಲ್ಲೋ ನಡಿಗೆಗೆ ಚಾಲನೆ ನೀಡಿದ್ದಾರೆ.

ಈ ಸಂದರ್ಭ ವಿದಾನಸಭಾಧ್ಯಕ್ಷ ಯು.ಟಿ. ಖಾದರ್ ಮಾತನಾಡಿ, ಪಾನೀರ್ ಚರ್ಚ್ ನಿಂದ ಮುಡಿಪು ಚರ್ಚ್ ವರೆಗಿನ ಭಕ್ತಿಪೂರ್ವ ನಡಿಗೆಯಿಂದ ಕೇವಲ ಪಾಲ್ಗೊಂಡವರಿಗೆ ಮಾತ್ರವಲ್ಲದೆ ಊರಿಗೇ ಶಾಂತಿ, ನೆಮ್ಮದಿ ಲಭಿಸಲಿದೆ ಎಂದು ಹೇಳಿದರು. ಆಶೀರ್ವಚನ ನೀಡಿದ ಪೆರ್ಮನ್ನೂರು ಸಂತ ಸೆಬೆಸ್ಟಿಯನ್ ಚರ್ಚ್ ಧರ್ಮಗುರು ಅತಿ ವಂದನೀಯ ಫಾದರ್ ಸಿಪ್ರಿಯನ್ ಪಿಂಟೋ ಅವರು, ಕಠಿಣ ಬಿಸಿಲಿನಲ್ಲಿ ಉಪವಾಸಧಾರಿಗಳಾಗಿ ಪುಣ್ಯ ಕ್ಷೇತ್ರದೆಡೆಗಿನ ನಡಿಗೆ ಯಿಂದ ಪ್ರತಿಯೊಬ್ಬರ ಮನ, ಸಮಾಜ, ಸಮುದಾಯದಲ್ಲಿ ಶಾಂತಿ, ಸಾಮರಸ್ಯ ಮೂಡಲಿದೆ ಎಂದು ತಿಳಿಸಿದ್ದಾರೆ.

ಈ ಕಾರ್ಯಕ್ರಮದಲ್ಲಿ ಮುಡಿಪು ಚರ್ಚ್ ಪ್ರಧಾನ ಧರ್ಮಗುರು ಫಾ.ಆಸಿಸ್ಸಿ ರೆಬೆಲ್ಲೋ, ಬೋಳ ಚರ್ಚ್ ಧರ್ಮಗುರು ಪೀಟರ್ ಡಿಸೋಜ, ಎಂಸಿಸಿ ಬ್ಯಾಂಕ್ ಅಧ್ಯಕ್ಷ ಅನಿಲ್ ಲೋಬೋ, ಕಥೊಲಿಕ್ ಸಭಾ ಕೇಂದ್ರೀಯ ಸಮಿತಿ ಅಧ–್ಯಕ್ಷ ಸಂತೋಷ್ ಡಿಸೋಜ ಪಿಆರ್‌ಒ ರಾಲ್ಫಿ ಡಿಕೋಸ್ತ, ಕಾರ್ಯದರ್ಶಿ ವಿಲ್ಮಾ ಮೊಂತೆರೋ, ದಾಯ್ಜಿವರ್ಲ್ಡ್ ಸಮೂಹ ಸಂಸ್ಥೆಯ ಸಂಸ್ಥಾಪಕರಾದ ವಾಲ್ಟರ್ ನಂದಳಿಕೆ, ಪಾನೀರ್ ಚರ್ಚ್ ಪಾಲನಾ ಮಂಡಳಿ ಉಪಾಧ್ಯಕ್ಷರಾದ ಉರ್ಬನ್ ಫೆರಾವೋ, ಕಾರ್ಯದರ್ಶಿ ವಿನ್ನಿ ಕುಟಿನ್ಹಾ, ಮುಡಿಪು ಸಂತ ಜೋಸೆಫ್ ವಾರ್ಝ್ ಚರ್ಚ್ ಪಾಲನಾ ಮಂಡಳಿ ಉಪಾಧ್ಯಕ್ಷ ಅರುಣ್ ಡಿಸೋಜ, ಕಾರ್ಯದರ್ಶಿ ರೋಶನ್ ಡಿಸೋಜ, ಕಥೊಲಿಕ್ ಸಭಾ ದಕ್ಷಿಣ ವಲಯ ಕಾರ್ಯದರ್ಶಿ ಟ್ರೆಸ್ಸಿ ರೋಡ್ರಿಗಸ್, ಪಾನೀರ್ ಘಟಕಾಧ್ಯಕ್ಷರಾದ ಐವನ್ ಮೊಂತೆರೋ ಉಪಸ್ಥಿತರಿದ್ದರು.

# ನಿವೇಶನ ವಿಚಾರಕ್ಕೂ, ಉಚ್ಛಾಟನೆಗೂ ಸಂಬಂಧವಿಲ್ಲ; ಮೋಹನ್ ರಾಜ್

**ಕೋಟೆಕಾರ್ ಪ.ಪಂ. ಮಾದರಿ ಗ್ರಾಮ**




**ಉಳ್ಳಾಲ:** ಕೋಟೆಕಾರ್ ಪಟ್ಟಣ ಪಂಚಾಯತ್‌ನಲ್ಲಿ ಬಿಜೆಪಿ ಪಕ್ಷ ಅಧಿಕಾರದ ಚುಕ್ಕಾಣಿ ಹಿಡಿದಾಗಿನಿಂದ ಅಭಿವೃದ್ಧಿಯ ಕೆಲಸಗಳು ನಡೆಯುತ್ತಿವೆ. ಅದೇ ರೀತಿ ಸುಮಾರು 15 ವರ್ಷಗಳಿಂದ ನೆನೆಗುದ್ದಿಗೆ ಬಿದ್ದಿರುವ ಬಡ ನಿವೇಶನ ರಹಿತರ ಅರ್ಜಿ ವಿಚಾರವಾಗಿ ಈಗಾಗಲೇ ನಿವೇಶನಕ್ಕಾಗಿ ಅಧ–್ಯಕ್ಷರು, ಉಪಾಧ್ಯಕ್ಷರು ಜಾಗವನ್ನು ಗುರುತಿಸಿಕೊಂಡಿದ್ದರು ಎಂದು ಬಿಜೆಪಿ ಮಂಡಲದ ಅಧ್ಯಕ್ಷರಾದ ಜಗದೀಶ್ ಆಳ್ವ ಕುವೆತ್ತಬೈಲು ಹೇಳಿದ್ದಾರೆ.

ಇವರು ಉಳ್ಳಾಲ ಪ್ರೆಸ್‌ಕ್ಲಬ್‌ನಲ್ಲಿ ಕೋಟೆಕಾರ್ ಪಟ್ಟಣ ಪಂಚಾಯತ್ ಅಭಿವೃದ್ಧಿಯ ವಿಚಾರವಾಗಿ ನಡೆಸಿದ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ್ದಾರೆ.

ಬಿಜೆಪಿ ಮಂಡಲದ ಪ್ರಧಾನ ಕಾರ್ಯದರ್ಶಿಯಾದ ಮೋಹನ್ ರಾಜ್ ಮಾತನಾಡಿ, ಬಿಜೆಪಿ ಸದಸ್ಯರೋರ್ವರನ್ನು ನಿವೇಶನ ವಿಚಾರ ಮಾತನಾಡಿದರು ಎಂಬ ಕಾರಣಕ್ಕಾಗಿ ಉಚ್ಛಾಟನೆ ಮಾಡಿಲ್ಲ. ಪಕ್ಷದ ಆಂತರಿಕ ವಿಚಾರದಲ್ಲಿ ಸತತ ಒಂದು ವರ್ಷದಿಂದ ಪಕ್ಷ ವಿರೋಧಿ ಚಟುವಟಿಕೆ ಕಂಡು ಬಂದ ಹಿನ್ನಲೆ ಈ ಕ್ರಮಕೈಗೊಳ್ಳಲಾಗಿದೆ. ಸಾಮಾನ್ಯ ಸಭೆಯಲ್ಲಿ ನಡೆದ ವಿಚಾರವಾಗಿ ಮಾಧ್ಯಮಗಳಲ್ಲಿ ಬಿತ್ತರಿಸಿದ ವಿಷಯಗಳ ಪೈಕಿ ಉಚ್ಛಾಟನೆ ಮಾಡಲಾಗಿದೆ. ಅದು ಪಕ್ಷದ ಆಂತರಿಕ ವಿಚಾರ ಎಂದು ಸ್ಪಷ್ಟನೆ ನೀಡಿದ್ದಾರೆ.

ಕೋಟೆಕಾರ್ ಪಟ್ಟಣ ಪಂಚಾಯತ್ ಅಧ್ಯಕ್ಷರಾದ ದಿವ್ಯ ಸತೀಶ್ ಶೆಟ್ಟಿ ಮಾತನಾಡಿ, ನಿಗದಿ ಪಡಿಸಿದ ಜಾಗದಲ್ಲಿ ತ್ಯಾಜ್ಯ ಘಟಕ ನಿರ್ಮಾಣ ಮಾಡುವ ಬಗ್ಗೆ ಪ್ರಸ್ತಾಪನೆ ಬಂದಿತ್ತು. ಬಳಿಕ ಸ್ಥಳೀಯರು ವಿರೋಧ ವ್ಯಕ್ತಪಡಿಸಿ ಹೈಕೋರ್ಟ್ ಮೆಟ್ಟಿಲೇರಿದ್ದರು. ಹಾಗಾಗಿ ಈ ಜಾಗವನ್ನು ಕೇಸ್ ಇತ್ಯರ್ಥವಾಗುವವರೆಗೂ ಯಾರು ಬಳಸುವಂತಿಲ್ಲ. ಇದರ ಜೊತೆ ಬೇರೆ ಜಾಗವೊಂದನ್ನು ನಿವೇಶನಕ್ಕಾಗಿ ಗುರುತಿಸಿದ್ದೇವು. ಆ ಪ್ರದೇಶವನ್ನು ಕಡಲಕೊರೆತದ ಹಿನ್ನಲೆ ನಿರಾಶ್ರಿತರ ತಾಣವಾಗಿ ಅಧಿಕಾರಿಗಳು ಪಂಚಾಯತ್ ಅನುಮತಿಯಿಲ್ಲದೇ ಬದಲಾಯಿಸಿದ್ದರು. ಯಾವುದೇ ಭೂ ಮಾಫಿಯಾಗಳ ಪರವಾಗಿ ನಾವುಗಳು ಇಲ್ಲ. ಅಭಿವೃದ್ಧಿ ಮಾತ್ರ ಕರ್ತವ್ಯ ಎಂದು ಹೇಳಿದ್ದಾರೆ.

ಈ ಸುದ್ದಿಗೋಷ್ಠಿಯಲ್ಲಿ ಕೋ–ಟೆಕಾರು ಪಟ್ಟಣ ಪಂಚಾಯತ್ ಉಪಾಧ್ಯಕ್ಷರಾದ ಪ್ರವೀಣ್ ಬಗಂಬಿಲ, ಕೋಟೆಕಾರ್ ಮಹಾಶಕ್ತಿ ಕೇಂದ್ರದ ಪ್ರಧಾನ ಕಾರ್ಯದರ್ಶಿ ಅತುಲ್ ಬಗಂಬಿಲ, ದಯಾನಂದ ತೊ–ಕ್ಕೊಟ್ಟು ಉಪಸ್ಥಿತರಿದ್ದರು.

# ಕಲಾವಿದರಾದ ಮೋಹನ್ ಬೆಳ್ಳಿಪಾಡಿ, ರಮೇಶ್ ಪಟ್ರಮೆ, ಪಾಕತಜ್ಞ ಹರೀಶ್ ಭಟ್‌ಗೆ ಸನ್ಮಾನ



**ಅಸೈಗೋಳಿ;** ಯಕ್ಷಮಿತ್ರರು ಅಸೈಗೋಳಿ ವತಿಯಿಂದ ಯಕ್ಷಸೇವೆಯ ರಜತಪರ್ವದಲ್ಲಿ ಮಿಂಚುತ್ತಿರುವ ಮೋಹನ್ ಬೆಳ್ಳಿಪಾಡಿ ಇವರನ್ನು ಬೆಳ್ಳಿಯ ಪದಕದೊಂದಿಗೆ ಮತ್ತು ರಮೇಶ್ ಪಟ್ರಮೆ ಹಾಗೂ ಪಾಕತಜ್ಞ ಹರೀಶ್ ಭಟ್ ಅಸೈಗೋಳಿ ಇವರನ್ನು ಯಕ್ಷಧ್ರುವ ಪಟ್ಲ ಫೌಂಡೇಶನ್ ಟ್ರಸ್ಟ್‌ನ ಸ್ಥಾಪಕಾಧ್ಯಕ್ಷರಾದ ಪಟ್ಲ ಸತೀಶ್ ಶೆಟ್ಟಿಯವರು ಶಾಲು ಹೊದಿಸಿ ಸನ್ಮಾನಿಸಿದ್ರು. ಅಸೈಗೋಳಿಯಲ್ಲಿ ನಡೆದ "ಗರುಡೋದ್ಭವ"ಯಕ್ಷಗಾನಬಯಲಾಟದ ಸಂದರ್ಭದಲ್ಲಿ ಗೌರವಿಸಲಾಯಿತು. ಇದೇ ಸಂದರ್ಭದಲ್ಲಿ ಕಲಾವಿದರ ಕಾಮಧೇನು, ಕಲಾ ಪೋಷಕ, ಪಾವಂಜೆ ಮೇಳದ ಸಂಚಾಲಕರು ಹಾಗು ಪ್ರಧಾನ ಭಾಗವತರಾದ ಯಕ್ಷಧ್ರುವ ಪಟ್ಲ ಸತೀಶ್ ಶೆಟ್ಟಿ ಇವರನ್ನು ಗೌರವಿಸಲಾಯಿತು. ಬಳಿಕ ಮಾತನಾಡಿದ ಇವರು, ಪಾವಂಜೆ ಮೇಳ ಆರಂಭವಾಗಿ 6ವರ್ಷವಾಗಿದೆ. ಅಂದಿನಿಂದ ಅಸೈಗೋಳಿಯಲ್ಲಿ ಪಾವಂಜೆ ಮೇಳದ ಯಕ್ಷಗಾನ ಪ್ರದರ್ಶನಗೊಳ್ಳುತ್ತಿದೆ. ಕಲಾವಿದರನ್ನು ಗುರುತಿಸಿ ಗೌರವಿಸುವುದು ನಿಜಕ್ಕೂ ಉತ್ತಮ ಕಾರ್ಯ ಎಂದರು.

ಈ ಸಂದರ್ಭದಲ್ಲಿ ಸಾನಿಧ್ಯ ಎಂಟರ್‌ಪ್ರೈಸಸ್‌ನ ಮ್ಯಾನೇಜಿಂಗ್ ಡೈ–ರೆಕ್ಟರ್ ಕಿರಣ್, ಯಕ್ಷಮಿತ್ರ ಮಂಡಳಿಯ ಅಧ್ಯಕ್ಷರಾದ ರವಿಶಂಕರ್ ಭಟ್, ಪರಮೇಶ್ವರ್ ಭಟ್, ಅರುಣ್ ಭಟ್, ಶ್ರೀ ದೇವಿ ಕ್ಯಾಟರಿಂಗ್ ಮಾಲಕರಾದ ಉದಯ ಭಟ್ ಹಾಗು ಮತ್ತಿತರರು ಉಪಸ್ಥಿತರಿದ್ದರು. ವಿನಯಕೃಷ್ಣ ಭಟ್ ಕಾರ್ಯಕ್ರಮ ನಿರೂಪಿಸಿದರು.

# ಫೆ.27: ಬಿರ್ದ್‌ದ ಕಂಬುಲ ಹಾಗೂ ವೀರಕಂಬಳ ಸಿನಿಮಾ ರಾಜ್ಯಾದ್ಯಂತ ಬಿಡುಗಡೆ




**ಮಂಗಳೂರು;** ಫೆ.27ರಂದು ಬಿರ್ದ್ ದ ಕಂಬುಲ ಹಾಗೂ ವೀರಕಂಬಳ ಸಿನಿಮಾ ರಾಜ್ಯಾದ್ಯಂತ ಬಿಡುಗಡೆಯಾಗುತ್ತಿದೆ. ಈ ಸಿನಿಮಾಕ್ಕೆ ತುಳುನಾಡಿನ ಕಂಬಳ ಪ್ರೇಮಿಗಳು ಬಹಳಷ್ಟು ಬೆಂಬಲ ನೀಡಿದ್ದಾರೆ. ಸಿನಿಮಾಕ್ಕೆ ಕಂಬಳ ಕ್ಷೇತ್ರದ ಅನೇಕ ಸಾಧಕರು ಸಹಾಯ ನೀಡಿದ್ದಾರೆ. ಎಲ್ಲರಿಗೂ ಅಭಿನಂದನೆಗಳು. ತುಳುನಾಡಿನ ಹೆಮ್ಮೆಯ ಕಂಬಳವನ್ನು ದೇಶ ವಿದೇಶಗಳಲ್ಲಿ ಪಸರಿಸಲು ಸಿನಿಮಾ ಮಾಡಿದ್ದೇವೆ. ಎಲ್ಲರೂ ಸಿನಿಮಾ ನೋಡಿ ಚಿತ್ರತಂಡವನ್ನು ಗೆಲ್ಲಿಸಿ ಎಂದು ಚಿತ್ರದ ನಿರ್ಮಾಪಕ ಅರುಣ್ ರೈ ತೋಡಾರ್ ಪತ್ರಿಕಾಗೋಷ್ಠಿಯಲ್ಲಿ ಹೇಳಿದರು.

ಸಿನಿಮಾ ನಿರ್ದೇಶಕ ಡಾ.ಎಸ್.ವಿ ರಾಜೇಂದ್ರ ಸಿಂಗ್ ಬಾಬು ಮಾತಾಡಿ, ನಾನು 50 ಸಿನಿಮಾಗಳನ್ನು ಎಲ್ಲ ಭಾಷೆಯಲ್ಲೂ ಮಾಡಿದ್ದೆ. ನನಗೆ ಒಮ್ಮೆ ಗುಣಪಾಲ ಕಡಂಬ ಅವರು ಪುತ್ತೂರು ಕಂಬಳಕ್ಕೆ ಕರೆದಿದ್ರು. ಈ ವೇಳೆ ಕಂಬಳ ಕಂಟೆಂಟ್ ಇಟ್ಟುಕೊಂಡು ಸಿನಿಮಾ ಮಾಡ್ಬೇಕು ಅಂತ ಯೋಚನೆ ಬಂತು. ಹೀಗಾಗಿ ಅರುಣ್ ರೈ ಅವರಲ್ಲಿ ಸಿನಿಮಾ ಬಗ್ಗೆ ಹೇಳಿದ್ದೆ. ಅಲ್ಲಿಂದ ವಿಜಯ್ ಕುಮಾರ್ ಕೊಡಿಯಾಲ್ ಬೈಲ್ ಅವರನ್ನು ಸಂಪರ್ಕಿಸಿ ಸಿನಿಮಾಕ್ಕೆ ಸಂಭಾಷಣೆ ಬರೆಯಲು ಹೇಳಿದೆವು. ಅಲ್ಲಿಂದ ಶುರುವಾದ ಈ ಸಿನಿಮಾ ಜರ್ನಿ ಈಗ ಬಿಡುಗಡೆಯ ಹಂತಕ್ಕೆ ಬಂದು ಮುಟ್ಟಿದೆ. ಸಿನಿಮಾದ ಹಾಡುಗಳು ತುಂಬಾ ಚೆನ್ನಾಗಿ ಮೂಡಿಬಂದಿದ್ದು ನಮ್ಮ ಧೈರ್ಯವನ್ನು ನೂರ್ಮಡಿಗೊಳಿಸಿದೆ. ಎಲ್ಲರೂ ಸಿನಿಮಾ ನೋಡಿ ಗೆಲ್ಲಿಸಿ ಎಂದರು.

- **ಕಂಬಳ ಕಂಟೆಂಟ್ ಇಟ್ಟುಕೊಂಡು ಸಿನಿಮಾ ಮಾಡ್ಬೇಕು ಅಂತ ಯೋಚನೆ ಬಂತು.**
- **ಸಿನಿಮಾದ ಹಾಡುಗಳು ತುಂಬಾ ಚೆನ್ನಾಗಿ ಮೂಡಿಬಂದಿದ್ದು ನಮ್ಮ ಧೈರ್ಯವನ್ನು ನೂರ್ಮಡಿಗೊಳಿಸಿದೆ.**

ಜಿಲ್ಲಾ ಕಂಬಳ ಸಮಿತಿಯ ಅಧ್ಯಕ್ಷ ಬೆಳಪು ದೇವಿಪ್ರಸಾದ್ ಶೆಟ್ಟಿ ಹಾಡುಗಳನ್ನು ಬಿಡುಗಡೆಗೊಳಿಸಿದರು.

ಪತ್ರಿಕಾಗೋಷ್ಟಿಯಲ್ಲಿ ಕಾರ್ಯಕಾರಿ ನಿರ್ಮಾಪಕ ರಾಜೇಶ್ ಕುಡ್ಲ, ಸಂಗೀತ ನಿರ್ದೇಶಕ ಕದ್ರಿ ಮಣಿಕಾಂತ್, ರಾಜ್ಯ ಕಂಬಳ ಅಸೋಸಿಯೇಷನ್ ಅಧ್ಯಕ್ಷ ದೇವಿಪ್ರಸಾದ್ ಶೆಟ್ಟಿ ಬೆಳಪು, ಕೋಶಾಧಿಕಾರಿ ಲೋಕೇಶ್ ಶೆಟ್ಟಿ ಮುಚ್ಚೂರು ಕಲ್ಕುಡೆ, ರಾಜೀವ ಶೆಟ್ಟಿ, ಗುಣಪಾಲ ಕಡಂಬ, ಕೆ.ಕೆ.ಪೇಜಾವರ, ಶಶಿರಾಜ್ ಕಾವೂರು, ಮೈಮ್ ರಾಮದಾಸ್ ರಶ್ಮಿತ್ ಶೆಟ್ಟಿ ಮತ್ತಿತರರು ಉಪಸ್ಥಿತರಿದ್ದರು.

# ನುಸ್ರತುಲ್ ಮಸಾಕೀನ್ ಚಾರಿಟೇಬಲ್ ಟ್ರಸ್ಟ್ ವತಿಯಿಂದ ರಂಝಾನ್ ಕಿಟ್ ವಿತರಣೆ




**ಉಳ್ಳಾಲ:** ನುಸ್ರತುಲ್ ಮಸಾಕೀನ್ ಚಾರಿಟೇಬಲ್ ಟ್ರಸ್ಟ್ ಅಳೇಕಲ ಉಳ್ಳಾಲ ಇದರ ಆಶ್ರಯದಲ್ಲಿ ರಂಝಾನ್ ಕಿಟ್ ವಿತರಣೆ ಕಾರ್ಯಕ್ರಮ ಅಳೇಕಲದಲ್ಲಿರುವ ಟ್ರಸ್ಟ್‌ನ ಕಚೇರಿಯಲ್ಲಿ ನಡೆಯಿತು.

- **468 ಅರ್ಹ ಕುಟುಂಬಗಳಿಗೆ ರಂಝಾನ್ ಕಿಟ್ ವಿತರಣೆ**

ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದ ನುಸ್ರತುಲ್ ಮಸಾಕೀನ್ ಚಾರಿಟೇಬಲ್ ಟ್ರಸ್ಟ್ ಅಧ್ಯಕ್ಷ ಮುಹಮ್ಮದ್ ತ್ವಾಹಾ ಹಾಜಿ ಅವರು ಕಿಟ್ ವಿತರಣೆ ಅಗತ್ಯತೆ ಮತ್ತು ಟ್ರಸ್ಟ್‌ನ ಕಾರ್ಯ ಯೋಜನೆ ಬಗ್ಗೆ ಮಾಹಿತಿ ನೀಡಿದರು. ಅಳೇಕಲ ಮದ್ರಸ ಮುಅಲ್ಲಿಂ ಅಶ್ರಫ್ ಅಹ್ಸನಿ ದುಆ ನೆರವೇರಿಸಿದರು.

ಈ ಸಂದರ್ಭದಲ್ಲಿ ಉಳ್ಳಾಲ ನಗರ ವ್ಯಾಪ್ತಿಯ 468 ಅರ್ಹ ಕುಟುಂಬಗಳಿಗೆ ರಂಝಾನ್ ಕಿಟ್ ವಿತರಣೆ ಮಾಡಲಾಯಿತು.

# ಮೊಂಟೆಪದವು ಭೂ ಕುಸಿತ ಪ್ರಕರಣ: ಮಾನವ ಹಕ್ಕುಗಳ ಆಯೋಗದೆದುರು ಭಾವುಕರಾದ ಸಂತ್ರಸ್ತೆ



**ಮಂಗಳೂರು:** ಮಂಜನಾಡಿಯ ಮೊಂಟೆಪದವು ಎಂಬಲ್ಲಿ 2025ರ ಮೇ 30ರಂದು ಸಂಭವಿಸಿದ ಭೀಕರ ಗುಡ್ಡ ಕುಸಿತದಲ್ಲಿ ಸಿಲುಕಿ ತನ್ನೆರಡೂ ಕಾಲುಗಳನ್ನು ಕಳೆದುಕೊಂಡ ಅಶ್ವಿನಿ ಎಂಬವರು ತನ್ನ ತಾಯಿ ಪುಷ್ಪಾವತಿ ಜತೆ ಮಾನವ ಹಕ್ಕುಗಳ ಆಯೋಗದೆದುರು ನ್ಯಾಯಕ್ಕಾಗಿ ಕಣ್ಣೀರಿಟ್ಟ ಘಟನೆ ನಡೆಯಿತು.

ರಾಜ್ಯ ಮಾನವ ಹಕ್ಕುಗಳ ಆಯೋಗದ ಅಧ್ಯಕ್ಷ ಡಾ.ಶ್ಯಾಂ ಭಟ್ ಮತ್ತು ಸದಸ್ಯರಾದ ಎಸ್.ಕೆ. ವಂಟಿ ಗೋಡಿ ಅವರು ಜಿ.ಪಂ.ನ ನೇತ್ರಾವತಿ ಸಭಾಂಗಣದಲ್ಲಿ ಸಾರ್ವಜನಿಕ ದೂರುಗಳ ವಿಚಾರಣೆಯನ್ನು ಹಮ್ಮಿ ಕೊಂಡಿದ್ದರು. ಇದಕ್ಕಾಗಿ ತಾಯಿ ಜೊತೆ ಖಾಸಗಿ ಆಂಬುಲೆನ್ಸ್‌ನಲ್ಲಿ ಆಗಮಿಸಿದ್ದ ಅಶ್ವಿನಿಯವರು ಆಂಬುಲೆನ್ಸ್‌ನಿಂದ ವೀಲ್ ಚೇರ್‌ನಲ್ಲಿ ಕೂತು ಆಯೋಗದ ಅಧ್ಯಕ್ಷರು ಹಾಗೂ ಸದಸ್ಯರನ್ನು ಜಿ.ಪಂ. ಸಭಾಂಗಣ ಪ್ರವೇಶ ದ್ವಾರದಲ್ಲಿಯೇ ತಡೆದು ತಮ್ಮ ಅಳಲು ತೋಡಿಕೊಂಡರು.

ಅಶ್ವಿನಿ ಪರವಾಗಿ ಪ್ರಕರಣದ ಕುರಿತಂತೆ ಸಾಮಾಜಿಕ ಕಾರ್ಯಕರ್ತ ರವಿ ಎಂಬವರು ಆಯೋಗದ ಪ್ರತಿನಿಧಿಗಳಿಗೆ ವಿವರ ನೀಡಿದರು.

'ಮಂಜನಾಡಿ ಗ್ರಾಮದ ಮೊಂಟೆಪದವಿನ ಪಂಬದ ಹಿತ್ತಿಲು ಕೋಡಿ ಕೊಪ್ಪಳ ಎಂಬಲ್ಲಿ ಮನೆ ಮೇಲೆ ಗುಡ್ಡ ಕುಸಿದು ಸಂಭವಿಸಿದ ದುರಂತದಲ್ಲಿ ಅಶ್ವಿನಿಯವರ ಇಬ್ಬರು ಪುಟ್ಟ ಮಕ್ಕಳು ಮತ್ತು ಅತ್ತೆ ಸ್ಥಳದಲ್ಲೇ ಮೃತಪಟ್ಟಿದ್ದರು. ಮನೆಯ ಮೇಲಿನ ಬೃಹತ್ ಗುಡ್ಡ ಕುಸಿದ ಪರಿಣಾಮವಾಗಿ ಉಂಟಾದ ಅವಘಡದಲ್ಲಿ ಗಂಭೀರವಾಗಿ ಗಾಯಗೊಂಡಿದ್ದ ಅಶ್ವಿನಿ ತನ್ನೆರಡು ಕಾಲುಗಳನ್ನು ಕಳೆದುಕೊಂಡಿದ್ದಾರೆ. ಮನೆಯ ಹಿಂದಿನ ಗುಡ್ಡದಲ್ಲಿ ಅವೈಜ್ಞಾನಿಕ ಕಾಮಗಾರಿಯ ಪರಿಣಾಮ ಈ ದುರ್ಘಟನೆ ಸಂಭವಿಸಿ ಕುಟುಂಬದ ಮೂವರ ಪ್ರಾಣ ಹಾನಿಯ ಜತೆಗೆ ಅಶ್ವಿನಿಯವರು ಜೀವನ ಪರ್ಯಂತ ಅಂಗವೈಕಲ್ಯಕ್ಕೆ ಒಳಗಾಗಿದ್ದಾರೆ. ಕಾಲು ಕಳೆದುಕೊಂಡಿದ್ದಕ್ಕೆ ಅಶ್ವಿನಿಯವರಿಗೆ ಸರಕಾರದಿಂದ 2 ಲಕ್ಷ ರೂ. ಪರಿಹಾರ ಲಭಿಸಿದೆ. ಆದರೆ ಅದು ನಿರ್ಲಕ್ಷ್ಯದಿಂದ ಸಂಭವಿಸಿದ ದುರ್ಘಟನೆ ಆದ ಕಾರಣ ಸಂತ್ರಸ್ತೆಗೆ ಜೀವನ ಪರ್ಯಂತ ಸೂಕ್ತ ಪರಿಹಾರ, ಮನೆಯ ವ್ಯವಸ್ಥೆ ಮಾಡಬೇಕೆಂದು ಈಗಾಗಲೇ ಮಾನವ ಹಕ್ಕು ಆಯೋಗ ಸೇರಿದಂತೆ ಸಂಬಂಧಪಟ್ಟವರಿಗೆ ದೂರು ನೀಡಲಾಗಿದೆ. ಪ್ರಕರಣದಲ್ಲಿ ಮನೆಯನ್ನೂ ಕಳೆದುಕೊಂಡಿರುವ ಕುಟುಂಬಕ್ಕೆ ಇನ್ನೂ ಯಾವುದೇ ವ್ಯವಸ್ಥೆ ಆಗಿಲ್ಲ. ಕುಟುಂಬಕ್ಕೆ ನ್ಯಾಯಯುತ ಪರಿಹಾರ ಒದಗಿಸಬೇಕು' ಎಂದು ಆಯೋಗಕ್ಕೆ ಮನವರಿಕೆ ಮಾಡಿದರು.

- **ಕಾಲು ಕಳೆದುಕೊಂಡಿದ್ದಕ್ಕೆ ಅಶ್ವಿನಿಯವರಿಗೆ ಸರಕಾರದಿಂದ 2 ಲಕ್ಷ ರೂ. ಪರಿಹಾರ ಲಭಿಸಿದೆ.**
- **ಪ್ರಕರಣದಲ್ಲಿ ಮನೆಯನ್ನೂ ಕಳೆದುಕೊಂಡಿರುವ ಕುಟುಂಬಕ್ಕೆ ಇನ್ನೂ ಯಾವುದೇ ವ್ಯವಸ್ಥೆ ಆಗಿಲ್ಲ.**

ಪ್ರಕರಣದ ಬಗ್ಗೆ ಅಧಿಕಾರಿಗಳಿಂದ ಮಾಹಿತಿ ಪಡೆದ ಆಯೋಗದ ಅಧ್ಯಕ್ಷ ಡಾ.ಶ್ಯಾಂ ಭಟ್, ಅಧಿಕಾರಿಗಳು ತಿಳಿಸಿರುವಂತೆ ಎನ್‌ಐಟಿಕೆಯಿಂದ ಈ ಬಗ್ಗೆ ಸಲ್ಲಿಸಲಾಗುವ ವರದಿ ಆಧಾರದಲ್ಲಿ ಕ್ರಮ ವಹಿಸುವುದಾಗಿ ಭರವಸೆ ನೀಡಿದರು.

ಸಾರ್ವಜನಿಕ ದೂರು ವಿಚಾರಣೆ ವೇಳೆ ಈ ಪ್ರಕರಣದ ಕಡತದ ಪರಿಶೀಲನೆಯ ಸಂದರ್ಭ ಆಯೋಗದ ಸದಸ್ಯ ಎಸ್. ಕೆ. ವಂಟಿಗೋಡಿ ಪ್ರತಿಕ್ರಿಯಿಸಿ, ಇದೊಂದು ಗಂಭೀರ ಪ್ರಕರಣ, ಈ ಬಗ್ಗೆ ಎನ್‌ಐಟಿಕೆ ವರದಿ ಬಂದ ಮೇಲೆ ಮುಂದಿನ ಕ್ರಮ ವಹಿಸಲಾಗುತ್ತದೆ. ಅಧಿಕಾರಿಗಳು ಈ ಬಗ್ಗೆ ಗಮನ ಹರಿಸುವಂತೆ ಸೂಚಿಸಿದರು.

ಜಿ.ಪಂ.ಮುಖ್ಯಕಾರ್ಯನಿರ್ವಹಣಾಧಿಕಾರಿ ವಿನಾಯಕ ನರ್ವಾಡೆ, ಅರಣ್ಯ ಸಂರಕ್ಷಣಾಧಿಕಾರಿ ಆಂಟನಿ ಮರಿಯಪ್ಪ ಮಂಗಳೂರು ಸಹಾಯಕ ಆಯುಕ್ತರಾದ ಮೀನಾಕ್ಷಿ ಉಪಸ್ಥಿತರಿದ್ದರು.

## ಮಂಗಳೂರು ತಾಲೂಕು ಧ್ವನಿ ಬೆಳಕು ಮಾಲಕರ ಸಂಘದ ನೇತೃತ್ವದಲ್ಲಿ ಫೆ.28–ಮಾ.1ರಂದು 'ಐಕಾನಿಕ್ ಫುಡ್ ಪೆಸ್ಟಿವಲ್–2026'

**ವಾಮಂಜೂರು;** ಕರಾವಳಿ ಭಾಗದಲ್ಲಿ ಸಾಲು ಸಾಲು ಆಹಾರ ಮೇಳಗಳು ಮೇಳೈಸುತ್ತಿವೆ. ಆದ್ರೆ ಫೆ.28 ಹಾಗೂ ಮಾರ್ಚ್ 1ರಂದು ನಡೆಯುತ್ತಿರುವ ಫುಡ್ ಫೆಸ್ಟಿವಲ್ ಮಾತ್ರ ಫುಲ್ ಡಿಫರೆಂಟ್. ಹೌದು ಇದು ಅಕ್ಷರಶಃ ನಿಜ. ಸಮಾಜಮುಖಿ ಚಟುವಟಿಕೆಗಳಲ್ಲಿ ತೊಡಗಿಸಿಕೊಂಡು ಬಡಬಗ್ಗರಿಗೆ, ಆಶ್ರಮವಾಸಿಗಳಿಗೆ ನೆರವಿನ ಹಸ್ತವನ್ನು ಚಾಚುವ ಮಂಗಳೂರು ತಾಲೂಕು ಧ್ವನಿ ಬೆಳಕು ಮಾಲಕರ ಸಂಘದ ನೇತೃತ್ವದಲ್ಲಿ ಈ ಬಾರಿ ಐಕಾನಿಕ್ ಫುಡ್ ಪೆಸ್ಟಿವಲ್–2026 ನಡೆಯಲಿದೆ. ಹೇಗಿದ್ರೂ ಮನೆಯೂಟ ಡೈಲಿ ತಿಂದು ತಿಂದು ನಾಲಗೆಯ ರುಚಿ ಕೆಟ್ಟಿದ್ರೆ ಖಂಡಿತವಾಗಲೂ ವಾಮಂಜೂರಿನಲ್ಲಿರುವ ಪಿಲಿಕುಳದ ಮಾನಸ ಅಮ್ಯೂಸ್ಮೆಂಟ್ ಪಾರ್ಕ್ಗೆ ಬಂದು ವೆರೈಟಿ ಫುಡ್ ಟ್ರೈ ಮಾಡಿ. ನೀವು ಈಗಲೇ ಫೆ.28 ಹಾಗೂ ಮಾರ್ಚ್ 1 ನ್ನು ಕ್ಯಾಲೆಂಡರ್‌ನಲ್ಲಿ ಗುರುತು ಮಾಡಿ. ಆ ದಿನವನ್ನು ತಪ್ಪದೇ ಎಂಜಾಯ್ ಮಾಡಿ. ಎಂಟ್ರಿ ಅಂತೂ ಫ್ರೀ ಇರತ್ತೆ, ಇದರ ಜೊತೆಗೆ ವಿಡಿಜೆ, ಸ್ಪಾಟ್ ಪ್ರೈಸ್, ಮೆಗಾ ಹೌಸಿ ಹೌಸಿ, ಕೋಕ್‌ಟೈಲ್ ಮೋಕ್ ಟೈಲ್, ಆರ್ಕೆಸ್ಟ್ರಾ, ಸ್ಪೆಷಲ್ ಡ್ಯಾನ್ಸ್ ಅಬ್ಬಬ್ಬಾ ಸುಮಾರು ಕಾರ್ಯಕ್ರಮಗಳು ನಿಮಗಾಗಿ ನಡೆಯುತ್ತದೆ. ವೆಜ್, ನಾನ್ ವೆಜ್, ಐಸ್ ಕ್ರೀಮ್, ಇಂಡಿಯನ್, ಚೈನಿಸ್ ಫುಡ್ ಒಟ್ಟಿನಲ್ಲಿ ಆಹಾರ ಪ್ರಿಯರು ಬಾಯಿಚಪ್ಪರಿಸಿ ಸವಿಯುವಂತಹ ಎಲ್ಲಾ ತರಹದ ಸ್ಟಾಲ್ ಇಲ್ಲಿ ಪಕ್ಕಾ ಇರತ್ತೆ. ನಿಮ್ಮ ಫ್ಯಾಮಿಲಿ, ಫ್ರೆಂಡ್ಸ್ ಜೊತೆ ಭೇಟಿ ನೀಡಿ, ಎಂಜಾಯ್ ಮಾಡಿ. ಹೆಚ್ಚಿನ ಮಾಹಿತಿಗಾಗಿ 9845170171 ಅಥವಾ 9880385875 ನ್ನು ಸಂಪರ್ಕಿಸಿ.

## ಸರ್ವಿಸ್ ರಸ್ತೆಗಳ ನಿರ್ಮಾಣದ ವಸ್ತು ಸ್ಥಿತಿಯ ವರದಿ ನೀಡಿ; ತಾರಾನಾಥ ಗಟ್ಟಿ ಕಾಪಿಕಾಡ್

**ಉಳ್ಳಾಲ:** ಈ ಭಾಗದ ಹೆದ್ದಾರಿಯ ಬಾಕಿ ಉಳಿದಿರುವ ಸರ್ವಿಸ್ ರಸ್ತೆಗಳ ನಿರ್ಮಾಣದ ಬಗ್ಗೆ ವಸ್ತು ಸ್ಥಿತಿಯ ವರದಿಯನ್ನು ಹೆದ್ದಾರಿ



ಪ್ರಾಧಿಕಾರದವರು ಸಾರ್ವಜನಿಕರಿಗೆ ತಿಳಿಸಲಿ ಹಾಗೂ ಸರ್ವಿಸ್ ರಸ್ತೆ ಪೂರ್ಣಗೊಳ್ಳಲು ಇನ್ನೂ ಎಷ್ಟು ವರ್ಷ ಬೇಕಾಗಬಹುದು ಎಂಬುದನ್ನು ತಿಳಿಸಲಿ ಎಂದು ಒತ್ತಾಯಿಸುತ್ತೇನೆ.

ಸರ್ವಿಸ್ ರಸ್ತೆ ಇಲ್ಲದೆ ಇರುವುದರಿಂದ ಹೆದ್ದಾರಿಯಲ್ಲೇ ರಾಂಗ್ ಸೈಡ್‌ನಲ್ಲಿ ವಾಹನಗಳನ್ನು ಚಲಾಯಿಸುವುದು, ಹಾಗೂ ಬಸ್ಸುಗಳಿಗೆ ಹೆದ್ದಾರಿಯಿಂದ ಸರಿದು ಪಕ್ಕಕ್ಕೆ ನಿಲ್ಲಲು ಸ್ಥಳಾವಕಾಶವೇ ಇಲ್ಲದೆ ಇಲ್ಲದಿರುವುದರಿಂದ ಪದೇ ಪದೇ ಅಪಘಾತಗಳು ಸಂಭವಿಸುತ್ತಿರುತ್ತವೆ. ಹೆದ್ದಾರಿಯಿಂದ ಸರಿದು ಪಕ್ಕಕ್ಕೆ ಬಸ್ಸುಗೆ ಸ್ಟಾಪ್ ಕೊಡಲು ಅವಕಾಶ ಇರುತ್ತಿದ್ದರೆ ಈ ರೀತಿಯ ಅಪಘಾತ ಸಂಭವಿಸುತ್ತಿರಲಿಲ್ಲ.

## ಪಾವೂರು ಇನೋಳಿಗೆ ಸರಕಾರಿ ಬಸ್ ಸಂಚಾರಕ್ಕೆ ಒತ್ತಾಯ

**ಇನೋಳಿ:** ನಗರದಿಂದ ಸುಮಾರು 28 ಕಿ.ಮೀ. ದೂರದಲ್ಲಿರುವ ಪಾವೂರು ಇನೋಳಿಗೆ ಸರಕಾರಿ ಬಸ್ ಸಂಚಾರ ಆರಂಭಿಸಬೇಕು ಎಂದು ಗ್ರಾಮಸ್ಥರು ಮತ್ತೆ ಮನವಿ ಮಾಡಿದ್ದಾರೆ.

ಸರಕಾರಿ ಬಸ್ ಸಂಚಾರಕ್ಕಾಗಿ ಗ್ರಾಮಸ್ಥರು ಹಲವು ವರ್ಷಗಳಿಂದ ಜನಪ್ರತಿನಿಧಿಗಳು ಮತ್ತು ಅಧಿಕಾರಿಗಳಿಗೆ ಮನವಿ ಸಲ್ಲಿಸುತ್ತಾ ಬಂದಿದ್ದಾರೆ. ಪ್ರತೀ ಗ್ರಾಮಸಭೆಯಲ್ಲೂ ಸರಕಾರಿ ಬಸ್‌ಗಾಗಿ ಧ್ವನಿ ಎತ್ತಿದ್ದಾರೆ. ಆದರೆ ಅದಿನ್ನೂ ಕಾರ್ಯಗತಗೊಂಡಿಲ್ಲ. ಈ ಬಾರಿಯಾದರೂ ಸರಕಾರಿ ಬಸ್ ಸಂಚಾರ ಆರಂಭವಾಗಬಹುದು ಎಂಬ ನಿರೀಕ್ಷೆಯಲ್ಲಿ ಗ್ರಾಮಸ್ಥರಿದ್ದಾರೆ.

ಗ್ರಾಮಸ್ಥರ ಮನವಿ, ಆಗ್ರಹಕ್ಕೆ ಸ್ಪಂದಿಸಿರುವ ಕೆಎಸ್ಆರ್ಟಿಸಿ ಅಧಿಕಾರಿಗಳು ಮಂಗಳೂರು–ಕಂಕನಾಡಿ–ತೊಕ್ಕೊಟ್ಟು–ದೇರಳಕಟ್ಟೆ, ಕೊಣಾಜೆ, ಮಲಾರ್, ಪಾವೂರು–ಇನೋಳಿ ರೂಟ್‌ನ ಮ್ಯಾಪಿಂಗ್ ಮಾಡಿಸಿರುವುದಾಗಿ ತಿಳಿದು ಬಂದಿದೆ. ನಿಯೋಗದಲ್ಲಿ ಆಸೀಫ್ ಮಲಾರ್, ಟಿ. ನಾಸಿರ್, ಜಿ. ಸಮದ್, ಸಮೀರ್ ಟಿಪ್ಪುನಗರ, ಎಂ.ಕೆ. ಸಮದ್, ಎಂ.ಕೆ. ಕಮರ್ ಮತ್ತಿತರರಿದ್ದರು.

## ವಿವಿಧ ಅಭಿವೃದ್ಧಿ ಕಾಮಗಾರಿಗಳ ಶಿಲಾನ್ಯಾಸ; ನೂತನ ರಸ್ತೆ ಲೋಕಾರ್ಪಣೆ



ಉಳ್ಳಾಲ: ಉಳ್ಳಾಲ ತಾಲೂಕಿನ ನಗರಸಭಾ ವ್ಯಾಪ್ತಿಯಲ್ಲಿ ಮಾಸ್ತಿಕಟ್ಟೆ ಒಳರಸ್ತೆ ಶಾಸಕರ ಅನುದಾನದಲ್ಲಿ ವಿವಿಧ ರಸ್ತೆ ಕಾಮಗಾರಿಗಳಿಗೆ ಶಿಲಾನ್ಯಾಸ ಮತ್ತು ಉದ್ಘಾಟನೆ ಕಾರ್ಯಕ್ರಮ ಮಾಸ್ತಿಕಟ್ಟೆ,ಕೋಟೆಪುರ,ಉಳ್ಳಾಲ ಬೀಚ್ ರಸ್ತೆ ವ್ಯಾಪ್ತಿಯಲ್ಲಿ ನಡೆಯಿತು. ಮಾಸ್ತಿಕಟ್ಟೆ–ಅಸುನ್ನ ಮಸೀದಿ ರಸ್ತೆಗೆ 10 ಲಕ್ಷ ರೂಗಳಲ್ಲಿ ಶಿಲನ್ಯಾಸ, ಉಸ್ತಾದ್ ಕಾಂಪೌಂಡ್ ನಿಂದ ಮಾಸ್ತಿಕಟ್ಟೆ ಮುಖ್ಯರಸ್ತೆಗೆ 5 ಲಕ್ಷ ರೂ ನೂತನ ಕಾಂಕ್ರೀಟ್ ರಸ್ತೆ, ಬೀಚ್ ರಸ್ತೆಯಿಂದ ಕೋಡಿ ರಸ್ತೆ ಶಿಲನ್ಯಾಸ, ಶಾಸಕರ ಅನುದಾನದ 30 ಲಕ್ಷ ರೂ. ವೆಚ್ಚದಲ್ಲಿ ನಿರ್ಮಾಣಗೊಂಡ ಉಳ್ಳಾಲ ಬೈಲು ನೂತನ ರಸ್ತೆ ಉದ್ಘಾಟನೆಯನ್ನು ಲೋಕಾರ್ಪಣೆಗೊಳಿಸಲಾಯಿತು.

## ಉಡುಪಿ ಶ್ರೀ ಬಬ್ಬುಸ್ವಾಮಿ ಪರಿವಾರ ದೈವಸ್ಥಾನಕ್ಕೆ ಸ್ಪೀಕರ್ ಯು.ಟಿ.ಖಾದರ್ ಭೇಟಿ

**ಉಡುಪಿ;** ಉಡುಪಿ ಜಿಲ್ಲೆ ಬ್ರಹ್ಮಾವರ ತಾಲೂಕು ಗುಂಡ್ಮಿ ಗ್ರಾಮದ ಸಾಸ್ತಾನದ ರಾಷ್ಟ್ರೀಯ ಹೆದ್ದಾರಿ ಟೋಲ್ ಗೇಟ್ ಪಕ್ಕದಲ್ಲೇ ತಾಗಿಕೊಂಡಿರುವ ಅನಾದಿ ಕಾಲದಿಂದಲೂ ಪೂಜಿಸಿಕೊಂಡು ಬರುತ್ತಿರುವ ಶ್ರೀ ಬಬ್ಬುಸ್ವಾಮಿ ಪರಿವಾರ ದೈವಸ್ಥಾನಕ್ಕೆ ಸ್ಪೀಕರ್ ಯು.ಟಿ.ಖಾದರ್ ಭೇಟಿ ನೀಡಿದ್ದಾರೆ. ಈ ಸಂದರ್ಭ ಶಾಲು ಹೊದಿಸಿ ಸ್ಮರಣಿಕೆ ನೀಡಿ ಗೌರವಿಸಲಾಯಿತು. ದೈವಸ್ಥಾನಕ್ಕೆ ಸಂಬಂಧಿಸಿದ ಜಮೀನಿನ ಸಮಸ್ಯೆಯನ್ನು ಪರಿಹರಿಸಿ ಕೊಡುವಂತೆ ಹತ್ತು ಸಮಸ್ತರು ಯು.ಟಿ.ಖಾದರ್ ಅವರಲ್ಲಿ ಮನವಿ ಮಾಡಿಕೊಂಡಿದ್ದಾರೆ. ಸರಕಾರದ ವತಿಯಿಂದ ಜಿಲ್ಲಾಧಿಕಾರಿ ಗಮನಕ್ಕೆ ತಂದು ಜಮೀನಿನ ಸಮಸ್ಯೆಗೆ



ಪರಿಹಾರವನ್ನು ಕಂಡುಕೊಳ್ಳುವ ಭರವಸೆಗಳನ್ನು ನೀಡಿದ್ರು. ಹಾಗೆಯೇ ಸಭಾಧ್ಯಕ್ಷರನ್ನು ಇದೇ ಬರುವ ಏಪ್ರಿಲ್ 17.18 ರಂದು ನಡೆಯಲಿರುವ ಶ್ರೀ ಬಬ್ಬುಸ್ವಾಮಿ ಮತ್ತು ಪರಿವಾರ ದೈವಗಳ ನೇಮೋತ್ಸವಕ್ಕೆ ಆಮಂತ್ರಿಸಲಾಯಿತು. ಈ ಸಂದರ್ಭದಲ್ಲಿ ನೇಮೋತ್ಸವ ಸಮಿತಿಯ ಅಧ್ಯಕ್ಷರಾದ ಕೇಶವ ಕುಂದರ್, ಕಾರ್ಯದರ್ಶಿಯಾದ ಚಂದ್ರ ಕಟ್ಟಿನ ಮನೆ, ಗುರಿಕಾರರಾದ ಚಂದ್ರಪ್ಪ, ಪ್ರಧಾನ ಅರ್ಚಕರಾದ ಕಾರ್ತಿಕ್ ರಾಜ್ ಸಾಸ್ತಾನ, ಜಗದೀಶ್ ಗಂಗೊಳ್ಳಿ, ಸತ್ಯನಾರಾಯಣ ಹೆಮ್ಮಾಡಿ ಹಾಗು ಊರಿನವರು ಉಪಸ್ಥಿತರಿದ್ದರು.

### ಕೊಲ್ಯ ಬಿಲ್ಲವ ಭವನ ಸೋಮೇಶ್ವರದಲ್ಲಿ 48ನೇ ವರ್ಷದ ವಾರ್ಷಿಕೋತ್ಸವ ಸಮಾರಂಭ

## ರಾಜ್ಯದಲ್ಲಿ ಬ್ರಹ್ಮಶ್ರೀ ನಾರಾಯಣ ಗುರುಗಳ ತತ್ವಾದರ್ಶಗಳನ್ನು ಪಸರಿಸುವ ಕಾರ್ಯ ಶಕ್ತಿಯಾಗಿ ಕೈಗೊಂಡಿದೆ: ರಕ್ಷಿತ್ ಶಿವರಾಮ್

**ಉಳ್ಳಾಲ;** ಬಿಲ್ಲವ ಸೇವಾ ಸಮಾಜ ಟ್ರಸ್ಟ್ ಹಾಗು ಬಿಲ್ಲವ ಸೇವಾ ಸಮಾಜ ಕೊಲ್ಯ ಸೋಮೇಶ್ವರ ಇದರ ವತಿಯಿಂದ ಕೊಲ್ಯ ಬಿಲ್ಲವ ಭವನದಲ್ಲಿ 48ನೇ ವರ್ಷದ ವಾರ್ಷಿಕೋತ್ಸವ ಸಮಾರಂಭ ಅದ್ದೂರಿಯಾಗಿ ನಡೆಯಿತು.

ಕಾರ್ಯಕ್ರಮವನ್ನು ಬೆಸ್ಟ್ ಫೌಂಡೇಶನ್, ಬೆಳ್ತಂಗಡಿ ಇದರ ಅಧ್ಯಕ್ಷರಾದ ರಕ್ಷಿತ್ ಶಿವರಾಮ್ ಉದ್ಘಾಟಿಸಿ ಬಳಿಕ ಮಾತನಾಡಿದ್ದಾರೆ. ಕೊಲ್ಯ ಪ್ರದೇಶದ ಬಿಲ್ಲವ ಸಂಘ ರಾಜ್ಯದಲ್ಲೇ ಅಂದದ, ಚಂದದ ಸಮೃದ್ಧಿ ತುಂಬಿದ ಜಾಗವೆಂದು ಹೆಸರಾಗಿದ್ದು, ಸಮಾಜದ ಬಡ ವರ್ಗದವರಿಗೂ ಸಂಘದ ಮೂಲಕ ನೆರವು ತಲುಪುವ ಕಾರ್ಯ ನಡೆಯುತ್ತಿದೆ. ಸಮಾಜ ಸಂಘ ಸಂಸ್ಥೆಗಳು ಅವರ ಕೈಹಿಡಿದು ಮುಂದೆ ಬರಲು ವೇದಿಕೆಯಾಗಿವೆ ಎಂದರು.

ಕೊಲ್ಯ ಸೋಮೇಶ್ವರ ಹಿರಿಯ ಸಂಘ ರಾಜ್ಯದಲ್ಲೇ ಗಣನೀಯವಾದ, ಇತಿಹಾಸ ಪ್ರಸಿದ್ಧ ಹಾಗೂ ಸಕ್ರಿಯ ಸಂಘವಾಗಿ ಗುರುತಿಸಿಕೊಂಡಿದೆ. ಸಂಘಕ್ಕೆ ಸಮಾಜವು ಎಂದಿಗೂ ಚಿರ ಋಣಿಯಾಗಿರುತ್ತದೆ. ಗಾಂಧಿ–ಬ್ರಹ್ಮಶ್ರೀ ಸಂವಾದ ಕಾರ್ಯಕ್ರಮದಲ್ಲಿ ಕೊಲ್ಯ ಸಂಘ ಸಕ್ರಿಯವಾಗಿ ಭಾಗವಹಿಸಿ, ಇಡೀ ರಾಜ್ಯದಲ್ಲಿ ಬ್ರಹ್ಮಶ್ರೀ ನಾರಾಯಣ ಗುರುಗಳ ತತ್ವಾದರ್ಶಗಳನ್ನು ಪಸರಿಸುವ



ಕಾರ್ಯವನ್ನು ಶಕ್ತಿಯಾಗಿ ಕೈಗೊಂಡಿದೆ. ಬೆಂಗಳೂರು ಬಿಲ್ಲವ ಸಂಘದಂತೆಯೇ ಅಭಿವೃದ್ಧಿ ಪಥದಲ್ಲಿ ಸಾಗುತ್ತಿರುವ ಕೊಲ್ಯ ಸಂಘವು ಆದಾಯ ತರುವಂತಹ ಸ್ಥಳದಲ್ಲೇ ಕಾರ್ಯನಿರ್ವಹಿಸುತ್ತಿದೆ. ಸೂಕ್ತ ಆಲೋಚನೆ, ದೂರದೃಷ್ಟಿ ಮತ್ತು ಸಮರ್ಥ ನಾಯಕತ್ವದಿಂದ ಬಹುಮಹಡಿ ಕಟ್ಟಡವು ಶೀಘ್ರದಲ್ಲೇ ನೆಲೆಯೂರಲಿ ಅಂತ ಶುಭಹಾರೈಸಿದರು.

ಕಾರ್ಯಕ್ರಮದ ಅಧ್ಯಕ್ಷತೆಯನ್ನು ವಹಿಸಿ ಮಾತನಾಡಿದ ಬ್ರಹ್ಮಶ್ರೀ ನಾರಾಯಣ ಗುರು ಸ್ವಾಮಿ ಪ್ರಕಾಶನ ಚಾರಿಟೇಬಲ್ ಟ್ರಸ್ಟ್ ಅಧ್ಯಕ್ಷರಾದ ಗೋಪಾಲ ಪೂಜಾರಿ ವೀರನಗರ ಅವರು, ವೈಯಕ್ತಿಕವಾಗಿ ಭೂಮಿ ಕಳೆದುಕೊಂಡಿರುವುದರಿಂದ ಸಮಾಜ ಸೇವಾ ಕಾರ್ಯಾಲಯ ಖರೀದಿಸಲು ಅಡಚಣೆ ಎದುರಾಗುತ್ತಿದೆ. ನಾವು ವಿದ್ಯೆ ನೀಡುತ್ತಿದ್ದೇವೆ, ಆದರೆ ಸಮಾಜದಲ್ಲಿ ಸಂಸ್ಕಾರ ಮತ್ತು ಬುದ್ಧಿವಂತಿಕೆ ಬೆಳೆಬೇಕು. ಹೆತ್ತವರ ಋಣ ತೀರಿಸುವ ಮನೋಭಾವ ಬೆಳೆಸಬೇಕು ಎಂದು ಹೇಳಿದ್ದಾರೆ.

ಈ ಸಂದರ್ಭ ಹಿರಿಯ ರಂಗಭೂಮಿ ಕಲಾವಿದ ಪ್ರಭಾಕರ್ ಕೊಲ್ಯ ಅವರನ್ನು ಸನ್ಮಾನಿಸಲಾಯಿತು. ಜಿಲ್ಲಾ ರಾಜ್ಯೋತ್ಸವ ಪ್ರಶಸ್ತಿ ಪುರಸ್ಕೃತ ಗಂಗಾಧರ ಪೂಜಾರಿ ಕುಜುಮಗದ್ದೆ, ಕರ್ನಾಟಕ ಜನಪದ ಪರಿಷತ್ ಉಳ್ಳಾಲ ತಾಲೂಕು ಅಧ್ಯಕ್ಷರಾಗಿ ಆಯ್ಕೆಯಾದ ಪ್ರವೀಣ್ ಎಸ್. ಕುಂಪಲ, ಪಿಎಚ್.ಡಿ ಪದವಿ ಪಡೆದ ಅಪೂರ್ವ ಆರ್. ಪೂಜಾರಿ ಅವರನ್ನು ಅಭಿನಂದಿಸಿ ಗೌರವಿಸಲಾಯಿತು.

ಯುವವಾಹಿನಿ ಕೇಂದ್ರ ಸಮಿತಿ ಅಧ್ಯಕ್ಷ ಅಶೋಕ್ ಕುಮಾರ್ ಪಡು ಮಾತನಾಡುತ್ತಾ, ಗಣ್ಯರು, ಹಿರಿಯರ ಮಾರ್ಗದರ್ಶನ ಮತ್ತು ಗುರುಗಳ ಸಂದೇಶಗಳನ್ನು ಪಾಲನೆ ಮಾಡುವ ಉದ್ದೇಶದಿಂದ ಸಮಾಜ ಸೇವಾ ಸಂಘ ಹುಟ್ಟಿಕೊಂಡಿದ್ದು, ಕಟ್ಟಕಡೆಯ ವ್ಯಕ್ತಿಯ ಕಲ್ಯಾಣವೇ ಸಂಘದ ಮುಖ್ಯ ಧ್ಯೇಯವಾಗಿದೆ. ಕಳೆದ 48 ವರ್ಷಗಳಿಂದ ಸಮಾಜದ ಸುದೃಢತೆಗೆ ನಡೆಸಿದ ಪ್ರಯತ್ನಗಳೇ ಇಂದಿನ ಸಂಘದ ಬಲವಾಗಿದೆ. ಮುಂದಿನ ದಿನಗಳಲ್ಲಿ ಉತ್ತಮ ನಾಯಕತ್ವ ಬೆಳೆಸುವ ಕಾರ್ಯಗಳು ನಡೆಯಬೇಕಿದ್ದು, ಯುವಕರ ಭಾಗವಹಿಸುವಿಕೆ ಹೆಚ್ಚಾಗಬೇಕು ಎಂದು ಅಭಿಪ್ರಾಯಪಟ್ಟಿದ್ದಾರೆ.

ಇನ್ನು ಈ ಸಮಾರಂಭದಲ್ಲಿ ಮುಖ್ಯ ಅತಿಥಿಯಾಗಿ ಕೊಡಿಯಾಲ್ ಬೈಲ್ ಎಸ್‌ಕೆಸಿಇಸಿಎಸ್ ಮುಖ್ಯ ಕಾರ್ಯನಿರ್ವಹಣಾಧಿಕಾರಿ ಸತೀಶ್ ಪೂಜಾರಿ, ಬಿಲ್ಲವ ಸೇವಾ ಸಮಾಜದ ಅಧ್ಯಕ್ಷರಾದ ಗೋಪಾಲ್ ಕೊಂಡಾಣ, ರೈಲ್ವೆ ಇಲಾಖೆಯ ಹೊನ್ನಯ್ಯ ಕೆ, ತೊಕ್ಕೊಟ್ಟು ಎಲೆಕ್ಟ್ರಿಕಲ್ ಗುತ್ತಿಗೆದಾರರಾದ ರಾಜೇಶ್ ಕೆರೆಬೈಲ್, ತಲಪಾಡಿ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯ ಶಿಕ್ಷಕಿ ಮಮತಾ ಸತೀಶ್ ಕುಂಪಲ, ಉಳ್ಳಾಲ ಭಾರತ್ ಹೈಸ್ಕೂಲ್‌ನ ದೈಹಿಕ ನಿರ್ದೇಶಕರಾದ ಪ್ರೀತಮ್, ಮಹಿಳಾ ಸಂಘದ ತ್ರಿವೇಣಿ ಉದಯ್, . ಯುವವಾಹಿನಿ ಕೊಲ್ಯ ಘಟಕದಅಧ್ಯಕ್ಷರಾದ ನಿತಿನ್ ಕರ್ಕೇರ, ಭಾಸ್ಕರ್ ಮಡ್ಯಾರ್, ಕೊಲ್ಯ ಬಿಲ್ಲವ ಸೇವಾ ಸಮಾಜ ಟ್ರಸ್ಟ್ ಅಧ್ಯಕ್ಷ ವೇಣುಗೋಪಾಲ್ ಕೊಲ್ಯ, ಶಿರಾಲ್ ಕೊಲ್ಯ, ಲತೀಶ್ ಎಂ.ಸಂಕೊಳಿಗೆ, ಸುರೇಶ್ ಪಾಂಡವರಕಲ್ಲು, ಸುಂದರ್ ಸುವರ್ಣ, ಈಶ್ವರ್ ಸುವರ್ಣ ಸೇರಿದಂತೆ ಮತ್ತಿತರರು ಉಪಸ್ಥಿತರಿದ್ದರು.

## ತೌಡುಗೋಳಿ ಶ್ರೀ ದುರ್ಗಾದೇವಿ ಕ್ಷೇತ್ರಕ್ಕೆ ಮಾಣಿಲ ಶ್ರೀ ಶಿಲಾನ್ಯಾಸ

**ತೌಡುಗೋಳಿ:** ಇಲ್ಲಿನ ಶ್ರೀ ದುರ್ಗಾದೇವಿ ಕ್ಷೇತ್ರ, ಶ್ರೀ ಅಯ್ಯಪ್ಪ ಸ್ವಾಮಿ ಮಂದಿರ ಹಾಗೂ ಪರಿವಾರ ದೈವಗಳ ಸಾನಿಧ್ಯದಲ್ಲಿ ತೌಡುಗೋಳಿ ಶ್ರೀ ದುರ್ಗಾದೇವಿ ಕ್ಷೇತ್ರಕ್ಕೆ ಮಾಣಿಲ ಕ್ಷೇತ್ರದ ಶ್ರೀಮೋಹನದಾಸ ಪರಮಹಂಸ ಸ್ವಾಮೀಜಿಯವರ ಶಿಲಾನ್ಯಾಸ ನೆರವೇರಿಸಿದರು.

ಬಳಿಕ ಆಶೀರ್ವಚನ ನೀಡಿ, ಹಿಂದೂ ಸಮಾಜದ ಶ್ರದ್ಧಾ ಕೇಂದ್ರಗಳನ್ನು ಉಳಿಸಿ ಬೆಳೆಸುವ ಕಾಲಘಟ್ಟದಲ್ಲಿ ನಾವಿರುವಾಗ ತೌಡುಗೋಳಿಯಲ್ಲಿ ನಡೆಯುತ್ತಿರುವಂತಹ ಈ ಕ್ಷೇತ್ರದ ಜೀರ್ಣೋದ್ಧಾರ ಮಹತ್ವ ಪಡೆದಿದೆ. ಪ್ರತಿಯೊಬ್ಬರೂ ಈ ಪುಣ್ಯಕಾರ್ಯದಲ್ಲಿ ಕೈ ಜೋಡಿಸಿ ಯಶಸ್ವಿಗೊಳಿಸಲು ಕರೆ ನೀಡಿದರು.

ಉದ್ಯಾವರ ಮಾಡ ಅರಸು ಮಂಜಿಷ್ಣಾರ್ ದೈವದ ದೈವದ ಪಾತ್ರಿ ರಾಜ ಬೆಳ್ಚಪ್ಪಾಡರು ಮಾತನಾಡಿ, ಈ ಕ್ಷೇತ್ರದ ಜೀರ್ಣೋದ್ಧಾರ ಕೆಲಸಗಳು ಸಾಂಗವಾಗಿ ನೆರವೇರಿ ಬ್ರಹ್ಮಕಲಶ ನೋಡುವ ಭಾಗ್ಯ ನಮಗೆಲ್ಲರಿಗೂ ಆದಷ್ಟು ಬೇಗ ಸಿಗಲಿ ಎಂದು ಹಾರೈಸಿದರು.

ಈ ಸಂದರ್ಭದಲ್ಲಿ ಶ್ರೀ ಕ್ಷೇತ್ರದ ಜೀರ್ಣೋದ್ಧಾರದ ನಿಧಿ ಸಂಚಯದ ಕೂಪನ್‌ಗಳನ್ನು ಮಾಣಿಲ ಶ್ರೀಗಳು ದಾನಿಗಳಿಗೆ ನೀಡುವ ಮೂಲಕ ಅನಾವರಣಗೊಳಿಸಿದರು.

ಈ ಸಂದರ್ಭ ಅನುವಂಶೀಯ ಮೊಕ್ತೇಸರ ಗೋವಿಂದ ಗುರುಸ್ವಾಮಿ, ವರ್ಕಾಡಿ ಗ್ರಾಮ



ಪಂಚಾಯಿತಿ ಮಾಜಿ ಅಧ್ಯಕ್ಷ ದೇವಪ್ಪ ಶೆಟ್ಟಿ ಚಾವಡಿಬೈಲು, ನೆತ್ತಿಲ ಶ್ರೀ ಕೃಷ್ಣ ಭಜನಾ ಮಂದಿರದ ಅಧ್ಯಕ್ಷ ಪ್ರೇಮಾನಂದ ರೈ ನೆತ್ತಿಲ, ಶಾಂತಿಪಳಿಕೆ ಕ್ಷೇತ್ರದ ದೈವಸ್ಥಾನದ ಆಡಳಿತ ಮೊಕ್ತೇಸರ ಪಸನ್ನ ಪಕ್ಕಳ ಬಲೆತೆ–ಗ್ಗೋಡು, ಸಮಾಜ ಸೇವಕ ಹರೀಶ್ ಕನ್ನಿಗುಳಿ, ದೈವ ಪರಿಚಾರಕ ಶಾಂತ ಶೆಟ್ಟಿ, ತಾಲೀಮು ಮಾಸ್ಟರ್ ಮಾಧವ ಶೆಟ್ಟಿ ಬಡಾಜೆ, ನೃತ್ಯ ಶಿಕ್ಷಕ ಆರ್. ಬಿ. ಉದ್ಯಾವರ, ಯಕ್ಷಗಾನ ಭಾಗವತ ಆನಂದ ಎಸ್.. ಸರ್ಕುಡೇಲ್ ಹಾಗೂ ಕಟ್ಟಡ ನಿರ್ಮಾಣ ಮೇಲ್ವಿಚಾರಕ ದಿನೇಶ್ ಕೊಂದಲಕುಮೇರ್ ಉಪಸ್ಥಿತರಿದ್ದರು.

ಪತ್ರಕರ್ತ ಶಿವಪ್ರಸಾದ್ ತೌಡುಗೋಳಿ ಸ್ವಾಗತಿಸಿದರು. ಶಿವರಾಜ್ ತೌಡುಗೋಳಿ, ಸಮಿತಿಯ ಸದಸ್ಯರು ಸಹಕರಿಸಿದರು.

## ಹರೇಕಳ ಗ್ರಾಮ ಪಂಚಾಯತ್ ಆರೋಗ್ಯಕೇಂದ್ರದಲ್ಲಿ ಯೆನಪೋಯ ಹರೇಕಳ ಆರೋಗ್ಯ ಕಾರ್ಡ್ ವಿತರಣೆ

**ಹರೇಕಳ:** ಯೆನಪೋಯ ಹರೇಕಳ ಆರೋಗ್ಯ ಕಾರ್ಡ್ ವಿತರಣಾ ಸಮಾರಂಭ ಹರೇಕಳ ಗ್ರಾ.ಪಂ.ಆರೋಗ್ಯ ಕೇಂದ್ರದಲ್ಲಿ ನಡೆಯಿತು. ಕಾರ್ಯಕ್ರಮದಲ್ಲಿ ಎಂದು ವಿಧಾನಸಭಾ ಅಧ್ಯಕ್ಷರಾದ ಯು.ಟಿ.ಖಾದರ್ ಭಾಗಿಯಾಗಿ ಮಾತನಾಡಿ, ಸರ್ಕಾರ, ಸ್ಥಳಿಯಾಡಳಿತ, ಖಾಸಗಿ ಸಂಸ್ಥೆಗಳು ಹಾಗೂ ಗ್ರಾಮ ಜನತೆ ಒಗ್ಗಟ್ಟಾಗಿ ಕೆಲಸ ಮಾಡಿದರೆ ಗ್ರಾಮದ ನೈಜ ಅಭಿವೃದ್ಧಿ ಸಾಧ್ಯ ಎನ್ನುವುದಕ್ಕೆ ಹರೇಕಳ ಗ್ರಾಮ ಮಾದರಿಯಾಗಿದೆ. ಹರೇಕಳ ಆರೋಗ್ಯ ಕೇಂದ್ರದ ಮೂಲಕ ಯೆನೆಪೋಯ ವೈದ್ಯಕೀಯ ಆಸ್ಪತ್ರೆಯವರು ಹರೇಕಳ ಗ್ರಾಮದ ಜನತೆಗೆ ವೈದ್ಯಕೀಯ ಸೇವೆಯನ್ನು ನೀಡುತ್ತಾ ಬರುತ್ತಿದ್ದಾರೆ. ಇದು ನಮ್ಮ ಆಸ್ಪತ್ರೆ ಎಂಬ ಕಾಳಜಿ ಪ್ರೀತಿ ಎಲ್ಲರಿಗೂ ಬರಲಿ. ಆರೋಗ್ಯ ಜಾಗೃತಿ ಮೂಡಿಸುವ ಕಾರ್ಯ ಇಲ್ಲಿಂದ ಆಗಲಿದೆ. ಈ ಆರೋಗ್ಯ ಕೇಂದ್ರವು ರೋಗ ಬಂದು ಚಿಕಿತ್ಸೆ ನೀಡುವುದಕ್ಕಿಂತ ಹೆಚ್ಚು ರೋಗ ಬರುವ ಮುಂಚೆಯೇ ಸಾರ್ವಜನಿಕರಲ್ಲಿ ಜಾಗೃತಿ ಮೂಡಿಸುವ ಕಾರ್ಯವನ್ನು ಮಾಡಲಿದೆ ಎಂದರು.

ಯೆನೆಪೋಯ ಪರಿಗಣಿತ ವಿಶ್ವವಿದ್ಯಾನಿಲಯದ ಸಹಕುಲಾಧಿಪತಿ ಫರ್‌ಹಾದ್ ಯೆನೆಪೋಯ ಅವರು



ಮಾತನಾಡಿ, ಯೆನೆಪೋಯ ಸಂಸ್ಥೆಯು ಹರೇಕಳ ಗ್ರಾ.ಪಂ. ಸಹಯೋಗದೊಂದಿಗೆ ಆರೋಗ್ಯ ಕೇಂದ್ರದ ಮೂಲಕ ಗ್ರಾಮದ ಜನರಿಗೆ ಕೆಲವೊಂದು ಸೇವೆಯನ್ನು ಒದಗಿಸುತ್ತಾ ಬಂದಿದೆ. ವಿಶ್ವವಿದ್ಯಾಲಯದ ವೈದ್ಯರು ಹಾಗೂ ವೈದ್ಯಕೀಯ ವಿದ್ಯಾರ್ಥಿಗಳಿಗೆ ಗ್ರಾಮೀಣ ಜನರ ಸೇವೆಯ ಅವಕಾಶ ದೊರೆತಿದೆ ಎಂದರು.

ನಿವೃತ್ತ ಮುಖ್ಯೋಪಾಧ್ಯಾಯರಾದ ರವೀಂದ್ರ ರೈ ಕಲ್ಲಿಮಾರ್ ಅವರು ಮಾತನಾಡಿ, ವಿದ್ಯಾದಾನ, ಅನ್ನದಾನ ದಂತೆಯೇ ಔಷಧಿದಾನವೂ ಪ್ರಮುಖವಾದುದು. ಈ ನಿಟ್ಟಿನಲ್ಲಿ ಹರೇಕಳದಲ್ಲಿ ಯೆನೆಪೋಯ ಸಂಸ್ಥೆಯ ಸೇವೆ ಶ್ಲಾಘನೀಯವಾಗಿದೆ ಎಂದರು.

ಕಾರ್ಯಕ್ರಮದಲ್ಲಿ ಜಿಲ್ಲಾ ಆರೋಗ್ಯಾಧಿಕಾರಿ ಡಾ.ಜೆ.ಆರ್ ತಿಮ್ಮಯ್ಯ, ವೈದ್ಯರುಗಳಾದ ಡಾ.ಹಬೀಬುಲ್ ರಹಿಮಾನ್, ಡಾ.ನೆಲ್ವಿನ್ ನೆಲ್ಸನ್ , ಡಾ.ಸಾಬೀತ್, ಯುವ ನಾಯಕರಾದ ಯು.ಟಿ.ಫರೀದ್ , ಡಾ.ಅಕ್ಷಯ್ ಕೆ.ಎಮ್, ಉಳ್ಳಾಲ ತಾಲೂಕು ಕಾರ್ಯನಿರ್ವಹಣಾ ಅಧಿಕಾರಿ ಗುರುದತ್, ಪಂಚಾಯತ್ ಆಡಳಿತಾಧಿಕಾರಿ ನಿತಿನ್ ಕುಮಾರ್, ನಿಕಟ ಪೂರ್ವ ಅಧ್ಯಕ್ಷೆ ಗುಲಾಬಿ, ನಿಕಟ ಪೂರ್ವ ಉಪಾಧ್ಯಕ್ಷ ಅಬ್ದುಲ್ ಮಜೀದ್,ಅಂಬ್ಲಮೊಗರು ಗ್ರಾ.ಪಂ ನಿಕಟಪೂರ್ವ ಅಧ್ಯಕ್ಷರಾದ ಇಕ್ಬಾಲ್ ಅಂಬ್ಲಮೊಗರು, ಮುಸ್ತಾಫ ಮಲಾರ್, ಕಾರ್ಯದರ್ಶಿ ತಾರಾಕ್ಷಿ, ಮಾಜಿ ತಾಲೂಕು ಪಂಚಾಯತ್ ಸದಸ್ಯ ಮುಸ್ತಾಫ ಹರೇಕಳ, ದೈಹಿಕ ಶಿಕ್ಷಕರಾದ ತ್ಯಾಗಂ ಹರೇಕಳ, ಗ್ರಾ.ಪಂ ಮಾಜಿ ಅಧ್ಯಕ್ಷರಾದ ಬದ್ರುದ್ದೀನ್ ಹಾಗೂ ಗ್ರಾ.ಪಂನ ನಿಕಟ ಪೂರ್ವ ಸದಸ್ಯರು ಉಪಸ್ಥಿತರಿದ್ದರು.

ಡಾ.ಹಬೀಬುಲ್ ರಹಿಮಾನ್ ಅವರು ಆರೋಗ್ಯ ಕಾರ್ಡ್ ಬಗ್ಗೆ ವಿವರಿಸಿದ್ದಾರೆ.

### ಅಂಬ್ಲಮೊಗರು ಗ್ರಾಮ ಪಂಚಾಯಿತಿಯ 2025-26ನೇ ಸಾಲಿನ ದ್ವಿತೀಯ ಹಂತದ ಹಾಗೂ ಜನಪ್ರತಿನಿಧಿಗಳ ಆಡಳಿತದ ಕೊನೆಯ ಗ್ರಾಮಸಭೆ

## ಸರ್ಕಾರಿ ಜಾಗದಲ್ಲಿ ಅಹೋರಾತ್ರಿ ಕೆಲಸ ನಡೆಯುತ್ತಿದ್ದು ಕಂದಾಯ ಇಲಾಖೆ ಮೌನವೇಕೆ?

**ಉಳ್ಳಾಲ:** ಅಂಬ್ಲಮೊಗರು ಗ್ರಾಮ ಪಂಚಾಯಿತಿಯ 2025–26ನೇ ಸಾಲಿನ ದ್ವಿತೀಯ ಹಂತದ ಹಾಗೂ ಜನಪ್ರತಿನಿಧಿಗಳ ಆಡಳಿತದ ಕೊನೆಯ ಗ್ರಾಮಸಭೆ ಸೋಮವಾರ ಗ್ರಾ.ಪಂ. ವಠಾರದಲ್ಲಿ ನಡೆಯಿತು.

ಸಭೆಯಲ್ಲಿ ಮಾತನಾಡಿದ ಇಬ್ರಾಹಿಂ ಮದಕ, ನಾಲ್ಕು ವರ್ಷಗಳಿಂದ ಕಂಡಿಲದಿಂದ ಲಕ್ಷ್ಮಿ ನರಸಿಂಹ ದೇವಸ್ಥಾನಕ್ಕೆ ಹೋಗಲು ರಸ್ತೆಯೇ ಇಲ್ಲ. ತಹಸೀಲ್ದಾರ್ ಈ ಬಗ್ಗೆ ಮೌನವಾಗಿದ್ದಾರೆ. ಸರ್ಕಾರಿ ಜಾಗದಲ್ಲಿ ಅಹೋರಾತ್ರಿ ಕೆಲಸ ನಡೆಯುತ್ತಿದ್ದು ಕಂದಾಯ ಇಲಾಖೆ ಮೌನವೇಕೆ? ಈಗಲೂ ಕೆಲಸ ನಡೆಯುತ್ತಿದ್ದು ತಕ್ಷಣ ನಿಲ್ಲಿಸಬೇಕು. ಮೈದಾನದ ಮೀಸಲು ಜಾಗ, ದೇವಸ್ಥಾನ ಸಂಪರ್ಕ ರಸ್ತೆ ಎಲ್ಲಿದೆ ಎಂದು ಪ್ರಶ್ನಿಸಿದರು.

ಜಾಗದ ಬಗ್ಗೆ ಪೂರ್ಣ ವಿವರ ಕಲೆ ಹಾಕಲಾಗಿದ್ದು ಸರ್ವೆ ಇಲಾಖೆ ಸ್ಪಷ್ಟ ವರದಿ ಕೊಡಬೇಕಿದೆ. ಖಾಸಗಿ ಜಾಗಕ್ಕೆ ಅಧಿಕಾರಿಗಳು ಹೋಗುವಂತಿಲ್ಲ, ಪಾವೂರಿನಲ್ಲಿ ಈಗಾಗಲೇ ಖಾಸಗಿ ಜಾಗದವರು ಕೇಸ್ ಹಾಕಿದ್ದಾರೆ. ಸರ್ಕಾರಿ ಜಾಗದಲ್ಲಿ ಕೆಲಸ ನಡೆಯುತ್ತಿದ್ದರೆ ನಿಲ್ಲಿಸುವುದಾಗಿ ಅಂಬ್ಲಮೊಗರು ಗ್ರಾಮ ಆಡಳಿತಗಾರೆ ನಯನ ತಿಳಿಸಿದರು.

ಯು.ಟಿ. ಫರೀದ್ ಹೆಸರಲ್ಲಿ ನಾಲ್ಕೂವರೆ ಎಕರೆ ಜಮೀನು ಮೈದಾನಕ್ಕೆ ಮೀಸಲಿಡಲಾಗಿದೆ. ಆದರೆ ಈಗಿರುವ ಜಾಗ ರಸ್ತೆಬದಿ ಇರುವುದರಿಂದ ಪಂಚಾಯಿತಿಗೆ ಆದಾಯ ಬರುವಂತಹ ಯೋಜನೆ ರೂಪಿಸುವ ನಿಟ್ಟಿನಲ್ಲಿ ಸ್ಪೀಕರ್ ಭರವಸೆ ಮೇರೆಗೆ ಕಾದಿರಿಸಲಾಗಿದೆ. ಒಳಭಾಗದಲ್ಲಿ ಜಾಗ ಸಿಗದಿದ್ದರೆ ಮೀಸಲು ಜಾಗದಲ್ಲೇ ಆಟದ ಮೈದಾನ ನಿರ್ಮಿಸಲಾಗುವುದು. ಸರ್ಕಾರಿ ಜಾಗಕ್ಕೆ ಖಾಸಗಿಯವರು ಮಣ್ಣು ಹಾಕಿದ್ದರೆ ಸರ್ವೆ ಮಾಡಿ ವಶಕ್ಕೆ ಪಡೆಯಲಾಗುವುದು ಎಂದು ಗ್ರಾ.ಪಂ. ಅಧ್ಯಕ್ಷ ಎಸ್.ಮಹಮ್ಮದ್ ಇಕ್ಬಾಲ್ ಭರವಸೆ ನೀಡಿದರು.

ನೀರು ಹರಿಯುವ ಮೋರಿ ಮುಚ್ಚಲಾಗಿದ್ದು



ಕಲುಶಿತ ನೀರು ನಿಂತು ದುರ್ನಾತ ಬೀರುತ್ತಿದೆ ಎಂದು ಸ್ಥಳೀಯರು ದೂರಿದ್ದು, ಗ್ರಾಮಸ್ಥರ ಜೊತೆ ನಾವಿದ್ದು ಸಮಸ್ಯೆಗೆ ಶಾಶ್ವತ ಪರಿಹಾರ ಕಲ್ಪಿಸುವ ನಿಟ್ಟಿನಲ್ಲಿ ಗ್ರಾಮಸ್ಥರ ಜೊತೆ ನಾವೂ ತಹಸೀಲ್ದಾರ್ ಬಳಿ ಚರ್ಚಿಸೋಣ ಎಂದು ಪಿಡಿಒ ಅಬ್ದುಲ್ ಖಾದರ್ ಐ ಹಾಗೂ ಮಾರ್ಗದರ್ಶಿ ಅಧಿಕಾರಿ ಎಚ್.ಆರ್.ಈಶ್ವರ್ ಭರವಸೆ ನೀಡಿ ಚರ್ಚೆ ಮುಕ್ತಾಯಗೊಳಿಸಿದರು.

ಅಂಬ್ಲಮೊಗರು ಪಶು ಆಸ್ಪತ್ರೆಯಲ್ಲಿ ವೈದ್ಯರಿಲ್ಲದ ಕಾರಣ ನಮ್ಮ ಮೂರು ದನಗಳು ಸತ್ತು ಹೋಗಿವೆ. ದನಗಳ ಆರೋಗ್ಯ ಹದಗೆಟ್ಟಾಗ ನಾವು ಕರೆ ಮಾಡಿದರೆ ಆಂಬ್ಯುಲೆನ್ಸ್ ಗೆ ಕರೆ ಮಾಡುವಂತೆ ಹೇಳುತ್ತಾರೆಂದು ಗ್ರಾಮಸ್ಥೆ ಜಮೀಲಾ ಎಂಬವರು ಅಳಲು ತೋಡಿಕೊಂಡರು

ಗ್ರಾಮದಲ್ಲಿ ದೊಡ್ಡ ಪಶು ಆಸ್ಪತ್ರೆ ಆಗಿದೆ, ವೈದ್ಯರಿಲ್ಲದೆ ಉದ್ಘಾಟನೆಗೆ ನಾವು ಅವಕಾಶ ಕೊಡದೆ ಬಹಿಷ್ಕರಿಸಿದ್ದೇವೆ. ದೂರುದಾರೆ ಹಾಲು ಮಾರಿ ಜೀವನ ಸಾಗಿಸುತ್ತಿದ್ದು, ದೂರು ಕೊಟ್ಟ ಬಳಿಕ ವೈದ್ಯರು ಬರಬೇಕು, ಇಲ್ಲವೇ ಆಗುವುದಿಲ್ಲ ಎಂದರೆ ಹೇಳಿದ ರೆ ನಾವು ಪರ್ಯಾಯ ವ್ಯವಸ್ಥೆ ಮಾಡುತ್ತೇವೆಂದು ಪಶುಸಖಿ ವಿದ್ಯಾ ಬಳಿ ಅಧ್ಯಕ್ಷ ಎಸ್. ಮಹಮ್ಮದ್ ಇಕ್ಬಾಲ್ ಅಸಮಾಧಾನ ವ್ಯಕ್ತಪಡಿಸಿದರು.

ರಾಜ್ಯದಲ್ಲಿ ಗೃಹಜ್ಯೋತಿ ಯೋಜನೆ ಇರುವುದರಿಂದ ಜನರು ಸೋಲಾರ್ ರೂಫ್ ಟಾಪ್ ಬಗ್ಗೆ ನಿರಾಸಕ್ತಿ ವಹಿಸಿದ್ದಾರೆ. ಹೊಸ ವಿದ್ಯುತ್ ಸಂಪರ್ಕ ಪಡೆಯುವವರಿಗೆ ಪ್ರೀಪೇಡ್ ಮತ್ತು ಪೋಸ್ಟ್ ಪೇಡ್ ಅವಕಾಶ ಇರುವ ಸ್ಮಾರ್ಟ್ ಮೀಟರ್ ಅಳವಡಿಸಲಾಗುತ್ತಿದೆ ಎಂದು ಮೆಸ್ಕಾಂ ಕಿರಿಯ ಅಭಿಯಂತರ ನಿತೇಶ್ ಹೊಸಗದ್ದೆ ತಿಳಿಸಿದರು.

ಸಂಜೆ ಶಾಲೆ ಬಿಟ್ಟ ಬಳಿಕ ಕಲಿಕೆಯಲ್ಲಿ ಹಿಂದುಳಿದ ಮಕ್ಕಳ ಪೋಷಕರಿಗೆ ಕರೆ ಮಾಡಿ ಅರ್ಧ ಗಂಟೆ ಮಕ್ಕಳನ್ನು ಜೊತೆ ಕೂರಿಸಿ ಪಾಠ ಮಾಡುವ 'ಗಣಿತ ಗಣಕ' ಈ ವರ್ಷದಿಂದ ಆರಂಭಗೊಂಡಿದೆ ಎಂದು ಅಂಬ್ಲಮೊಗರು ಶಾಲಾ ಮುಖ್ಯಶಿಕ್ಷಕ ಜಗದೀಶ್ ಶೆಟ್ಟಿ ಮನವಿ ಮಾಡಿದರು.

ಗ್ರಾ.ಪಂ. ಅಧ್ಯಕ್ಷ ಎಸ್.ಮಹಮ್ಮದ್ ಇಕ್ಬಾಲ್ ಅಧ್ಯಕ್ಷತೆ ವಹಿಸಿದ್ದರು. ಉಪಾಧ್ಯಕ್ಷೆ ಮಮ್ತಾಝ್, ಕ್ಷೇತ್ರ ಶಿಕ್ಷಣಾಧಿಕಾರಿ ಎಚ್. ಆರ್.ಈಶ್ವರ್ ಮಾರ್ಗದರ್ಶಿ ಅಧಿಕಾರಿಯಾಗಿ ಭಾಗವಹಿಸಿದ್ದರು. ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆಯ ಮೇಲ್ವಿಚಾರಕಿ ಶಂಕರಿ, ಮೆಸ್ಕಾಂ ಕಿರಿಯ ಅಭಿಯಂತರ ನಿತೇಶ್ ಹೊಸಗದ್ದೆ ಭಾಗವಹಿಸಿದ್ದರು.

## ಸಹಕಾರ ಸಂಘಗಳಿಗೆ ಶೀಘ್ರ ತರಬೇತಿ: ಡಾ.ಎಂ.ಎನ್ಆರ್

**ಮಂಗಳೂರು:** ಬ್ಯಾಂಕಿನ ಗ್ರಾಹಕರಿಗೆ ಡಿಜಿಟಲ್ ಬ್ಯಾಂಕಿಂಗ್ ಸೇವೆಗಳಾದ ಯುಪಿಐ ಮತ್ತು ಐಎಂಪಿಎಸ್ ಸೌಲಭ್ಯಗಳಿಗೆ ಸಾಂಕೇತಿಕವಾಗಿ ದೀಪಬೆಳಗಿಸುವುದರ ಎಸ್‌ಸಿಡಿಸಿಸಿ ಬ್ಯಾಂಕ್‌ನ ಸಭಾಂಗಣದಲ್ಲಿ ಎಸ್‌ಸಿಡಿಸಿಸಿ ಬ್ಯಾಂಕ್ ಅಧ್ಯಕ್ಷ ಡಾ.ಎಂ.ಎನ್ .ರಾಜೇಂದ್ರ ಕುಮಾರ್ ಚಾಲನೆ ನೀಡಿದ್ದಾರೆ.

ಯುಪಿಐ ಮತ್ತು ಐಎಂಪಿಎಸ್ ವ್ಯವಸ್ಥೆಯ ಪೋಸ್ಟರ್ ಹಾಗು ಕ್ಯೂ ಆರ್ ಕೋಡ್‌ನ್ನು ರಾಜೇಂದ್ರನ್ ಕುಮಾರ್ ಅನಾವರಣಗೊಳಿಸಿದ್ರು. ಬಳಿಕ ಮಾತನಾಡಿದ ಇವರು, ದಕ್ಷಿಣ ಕನ್ನಡ ಜಿಲ್ಲಾ ಕೇಂದ್ರ ಸಹಕಾರಿ ಬ್ಯಾಂಕ್ ತಮ್ಮ ಗ್ರಾಹಕರಿಗೆ ಪ್ರಸ್ತುತ ಅವಶ್ಯಕತೆಗೆ ಅನುಗುಣವಾಗಿ ಡಿಜಿಟಲ್ ಬ್ಯಾಂಕಿಂಗ್ ಸೌಲಭ್ಯವನ್ನು ಅಳವಡಿಸಿಕೊಂಡು ವಿಸ್ತರಿಸಿದೆ. ಯುಪಿಐ ಮತ್ತು ಐಎಂಪಿಎಸ್ ಡಿಜಿಟಲ್ ಬ್ಯಾಂಕಿಂಗ್ ವಿಸ್ತರಿತ ಸೌಲಭ್ಯಕ್ಕೆ ಈಗಾಗಲೇ ಚಾಲನೆ ನೀಡಲಾಗಿದೆ. ಈ ಸೌಲಭ್ಯ ಬ್ಯಾಂಕಿನ ಎಲ್ಲಾ ಶಾಖೆಗಳಿಗೂ ವಿಸ್ತರಣೆ ಮಾಡಲಾಗುವುದು ಎಂದು ತಿಳಿಸಿದ್ದಾರೆ. ಸಮಾರಂಭದಲ್ಲಿ ಸಾಪ್ಟ್ ವೇರ್ ತಂತ್ರಜ್ಞರಾದ ನಂದಕುಮಾರ್ ಅವರು ಐಎಂಪಿಎಸ್ ಬಗ್ಗೆ ತಾಂತ್ರಿಕ ಮಾಹಿತಿ ನೀಡಿದ್ದಾರೆ.

ಕಾರ್ಯಕ್ರಮದಲ್ಲಿ ಉಪಾಧ್ಯಕ್ಷರಾದ ವಿನಯ್ ಕುಮಾರ್ ಸೂರಿಂಜೆ, ನಿರ್ದೇಶಕರಾದ ಭಾಸ್ಕರ್ ಎಸ್. ಕೋಟ್ಯಾನ್, ಎಸ್.ಬಿ.ಜಯರಾಮ್ ರೈ, ಸದಾಶಿವ ಉಳ್ಳಾಲ್, ಮಹೇಶ್ ಹೆಗ್ಡೆ ಎಂ, ಅಶೋಕ್ ಕುಮಾರ್ ಶೆಟ್ಟಿ, ರಾಜೇಶ್ ರಾವ್, ಎಂ.ವಾದಿರಾಜ ಶೆಟ್ಟಿ, ಎಸ್.ಎನ್ ಮನ್ಮಥ, ಕುಶಾಲಪ್ಪ ಗೌಡ, ಮುಖ್ಯ ಕಾರ್ಯನಿರ್ವಹಣಾಧಿಕಾರಿ ಗೋಪಾಲಕೃಷ್ಣ ಭಟ್, ಸಹಕಾರ ಸಂಘಗಳ ಉಪ ನಿಬಂಧಕ ರಮೇಶ್ ಎಚ್.ಎನ್, ಬ್ಯಾಂಕಿನ ನಿರ್ದೇಶಕ ಶಶಿಕುಮಾರ್ ರೈ ಬಾಲ್ಯೊಟ್ಟು, ರಾಜೀವ್ ಕಕ್ಕೆ ಪದವು ಸೇರಿದಂತೆ ಮತ್ತಿತರರು ಉಪಸ್ಥಿತರಿದ್ದರು.

### 'ಕಾಯರ್‌ಗೋಳಿ ಜಂಕ್ಷನ್‌ನಿಂದ ಮುಡಿಪು ಜಂಕ್ಷನ್‌ವರೆಗೆ' 'ಕಾಲ್ನಡಿಗೆ ಜಾಥಾ' ಹಾಗೂ ಜಾಗೃತಿ ಸಭೆ

# ಮುಡಿಪುವಿನಲ್ಲಿ ಬಿಜೆಪಿಯಿಂದ ಕಾಲ್ನಡಿಗೆ ಜಾಥಾ, ಜನಜಾಗೃತಿ ಸಭೆ

**ಮುಡಿಪು:** ಮಂಗಳೂರು ಮಂಡಲದ ವತಿಯಿಂದ "ವಿಕಸಿತ ಭಾರತ–ಉದ್ಯೋಗ ಮತ್ತು ಜೀವನೋಪಾಯ ಮಿಷನ್ ಗ್ಯಾರಂಟಿ ಅಡಿಯಲ್ಲಿ ಮಹಾತ್ಮಗಾಂಧಿ ನರೇಗಾ ಯೋಜನೆಯಲ್ಲಿನ ಭ್ರಷ್ಟಾಚಾರ ತೊಡೆದು ಹಾಕಲು, ಕೇಂದ್ರ ಸರ್ಕಾರದ ಕಾಯ್ದೆಯ ಬಗ್ಗೆ ಜನಜಾಗ್ರತಿ ಮೂಡಿಸಲು ಹಾಗೂ ಭ್ರಷ್ಟಾಚಾರ ಮುಕ್ತ ಆಡಳಿತಕ್ಕಾಗಿ "ಮುಡಿಪು ಕಾಯರ್ ಗೋಳಿ ಜಂಕ್ಷನ್ ನಿಂದ ಮುಡಿಪು ಜಂಕ್ಷನ್‌ವರೆಗೆ" "ಕಾಲ್ನಡಿಗೆ ಜಾಥಾ" ಹಾಗೂ ಜಾಗೃತಿ ಸಭೆ ನಡೆಯಿತು.



ವಿಧಾನಪರಿಷತ್ ಸದಸ್ಯರಾದ ಕಿಶೋರ್ ಕುಮಾರ್ ಮಾತನಾಡಿ, ಕಾಂಗ್ರೆಸ್ ನವರು ಎಂಜಿ ನರೇಗ ಯೋಜನೆಯ ಮೂಲಕ ಹಣವನ್ನು ಲೂಟಿ ಮಾಡುತ್ತಿದ್ದರು. ಸತ್ತವರ ಹೆಸರಲ್ಲಿ, ವಿದೇಶದವರ ಹೆಸರಲ್ಲಿ ಹಣ ಪಡೆಯುವ ಮೂಲಕ ಭ್ರಷ್ಟಾಚಾರಗಳು ನಡೆಯುತ್ತಿತ್ತು. ಅದಕ್ಕಾಗಿ ಮೋದಿಜಿಯವರು ಇದನ್ನು ತಡೆಯುವುದಕ್ಕಾಗಿ ಹಾಗೂ ಗ್ರಾಮೀಣ ಜನರ ಅಭಿವೃದ್ಧಿಗಾಗಿ ವಿಕಸಿತ ಭಾರತ–ಉದ್ಯೋಗ ಮತ್ತು ಜೀವನೋಪಾಯ ಮಿಷನ್ ಗ್ಯಾರಂಟಿ ಯೋಜನೆಯನ್ನು ಜಾರಿಗೆ ತಂದಿದ್ದಾರೆ ಎಂದರು.

ಮಹಾತ್ಮ ಗಾಂಧೀಜಿಯವರು ಗ್ರಾಮಸ್ವರಾಜ್ಯದ, ರಾಮರಾಜ್ಯದ ಕನಸನ್ನು ಕಂಡಿದ್ದರು. ಅದನ್ನು ಪ್ರಧಾನಿ ನರೇಂದ್ರ ಮೋದಿಜಿಯವರು ನನಸು ಮಾಡಿದ್ದಾರೆ. ಆತ್ಮನಿರ್ಭರ ಭಾರತ, ಸ್ವದೇಶಿ ಚಿಂತನೆ ಮೂಲಕ ಮೋದಿಜಿಯವರ ಅನೇಕ ಅಭಿವೃದ್ಧಿ ಯೋಜನೆಗಳಿಂದ ಭಾರತ ಆರ್ಥಿಕತೆಯಲ್ಲಿ ಹದಿಮೂರನೇ ಸ್ಥಾನದಿಂದ 4ನೇ ಸ್ಥಾನಕ್ಕೆ ಬರಲು ಸಾಧ್ಯವಾಗಿದೆ ಎಂದರು.

ದ.ಕ.ಜಿಲ್ಲಾ ಬಿಜೆಪಿ ಉಪಾಧ್ಯಕ್ಷರಾದ ಪೂಜಾ ಪೈ ಮಾತನಾಡಿ, ಅನೇಕ ಸುಳ್ಳುಗಳನ್ನು ಹೇಳಿಕೊಂಡು ಪಾದಯಾತ್ರೆ ನಡೆಸಿ ಜನರನ್ನು ದಿಕ್ಕು ತಪ್ಪಿಸುವ ಪ್ರಯತ್ನವನ್ನು ಕಾಂಗ್ರೆಸ್ ಮಾಡುತ್ತಿದೆ. ನರೇಗ ಹೊ ಯೋಜನೆಯಲ್ಲಿ ಅನೇಕ ಸುದಾರಣೆಯನ್ನು ತಂದಿದೆ. ಬಿಜೆಪಿ ಬಂದ ನಂತರ ನೂರು ದಿನಗಳ ಬದಲು ನೂರ ಇಪ್ಪತ್ತೈದು ದಿನ ಉದ್ಯೋಗವನ್ನು ನೀಡಿದೆ. ಗ್ರಾಮೀಣ ಪ್ರದೇಶದಿಂದ ಜನರು ಉದ್ಯೋಗಕ್ಕಾಗಿ ವಲಸೆ ಹೋಗದಂತೆ ಈ ಕಾಯ್ದೆ ಅನುಕೂಲ ನೀಡಿದೆ. ಕಾಂಗ್ರೆಸ್‌ನವರಿಗೆ ಲೂಟಿ ಮಾಡಲು ಸಾಧ್ಯವಾಗುತ್ತಿಲ್ಲ ಆದ್ದರಿಂದ ವಿರೋಧಿಸುತ್ತಿದ್ದಾರೆ.

ಬಿಜೆಪಿ ಮಂಗಳೂರು ಮಂಡಲ ಅಧ್ಯಕ್ಷರಾದ ಜಗದೀಶ್ ಆಳ್ವ ಕುವೆತ್ತಬೈಲ್ ಮಾತನಾಡಿ, ಕಾಂಗ್ರೆಸ್ ಜನರನ್ನು ಸುಳ್ಳು ಸುದ್ದಿ ಹಬ್ಬಿಸಿ ಮೋಸಗೊಳಿಸುವ ಪ್ರಯತ್ನ ಫಲಿಸದು. ರಾಜ್ಯದಲ್ಲಿರುವ ಇಂತಹ ಕಾಂಗ್ರೆಸ್ ಸರ್ಕಾರವನ್ನು ಕಿತ್ತೊಗೆದು ಬಿಜೆಪಿಯನ್ನು ಅಧಿಕಾರಕ್ಕೆ ತರೋಣ ಎಂದರು.

ಈ ಸಂದರ್ಭದಲ್ಲಿ ಮುಖಂಡರಾದ ರವೀಂದ್ರ ಶೆಟ್ಟಿ ಉಳಿದೊಟ್ಟು, ಸಂತೋಷ್ ಕುಮಾರ್ ರೈ ಬೋಳಿಯಾರ್, ಚಂದ್ರಶೇಖರ್ ಉಚ್ಚಿಲ, ಚಂದ್ರಹಾಸ್ ಪಂಡಿತ್ ಹೌಸ್, ಧನಲಕ್ಷ್ಮೀ ಗಟ್ಟಿ, ಹೇಮಂತ್ ಶೆಟ್ಟಿ, ಸೀತಾರಾಮ ಬಂಗೇರ, ದಿವ್ಯ ಸತೀಶ್ ಶೆಟ್ಟಿ ಸೇರಿದಂತೆ ಮಂಡಲ ಪದಾಧಿಕಾರಿಗಳು, ಕಾರ್ಯಕರ್ತರು ಭಾಗವಹಿಸಿದ್ದರು.

ಮಂಡಲ ಪ್ರದಾನ ಕಾರ್ಯದರ್ಶಿ ಮೋಹನ್ ರಾಜ್ ಸ್ವಾಗತಿಸಿದರು. ಮಂಡಲ ಪ್ರಧಾನ ಕಾರ್ಯದರ್ಶಿ ದಯಾನಂದ ತೊಕ್ಕೊಟ್ಟು ವಂದಿಸಿದರು. ಮಂಡಲ ಉಪಾಧ್ಯಕ್ಷರಾದ ರವಿಶಂಕರ್ ಸೋಮೇಶ್ವರ ನಿರೂಪಿಸಿದರು.

> ಕಾಂಗ್ರೆಸ್ ನವರು ಎಂಜಿ ನರೇಗ ಯೋಜನೆಯ ಮೂಲಕ ಹಣವನ್ನು ಲೂಟಿ ಮಾಡುತ್ತಿದ್ದರು. ಸತ್ತವರ ಹೆಸರಲ್ಲಿ, ವಿದೇಶದವರ ಹೆಸರಲ್ಲಿ ಹಣ ಪಡೆಯುವ ಮೂಲಕ ಭ್ರಷ್ಟಾಚಾರಗಳು ನಡೆಯುತ್ತಿತ್ತು. ಅದಕ್ಕಾಗಿ ಮೋದಿಜಿಯವರು ಇದನ್ನು ತಡೆಯುವುದಕ್ಕಾಗಿ ಹಾಗೂ ಗ್ರಾಮೀಣ ಜನರ ಅಭಿವೃದ್ಧಿಗಾಗಿ ವಿಕಸಿತ ಭಾರತ-ಉದ್ಯೋಗ ಮತ್ತು ಜೀವನೋಪಾಯ ಮಿಷನ್ ಗ್ಯಾರಂಟಿ ಯೋಜನೆಯನ್ನು ಜಾರಿಗೆ ತಂದಿದ್ದಾರೆ.
>
> ■ ಕಿಶೋರ್ ಕುಮಾರ್
> ವಿಧಾನಪರಿಷತ್ ಸದಸ್ಯರು




## ಮಂಗಳೂರು ತಾಲೂಕು ಧ್ವನಿ ಮತ್ತು ಬೆಳಕು ಮಾಲಕರ ಸಂಘದಿಂದ ಆಶ್ರಮಕ್ಕೆ 60 ಫ್ಯಾನ್‌ಗಳ ಕೊಡುಗೆ



**ದೇರಳಕಟ್ಟೆ;** ಇಲ್ಲಿನ ದೆ ಮೆರ್ಸಿದೆ ಮಕ್ಕಳ ಆಶ್ರಮಕ್ಕೆ ಮಂಗಳೂರು ತಾಲೂಕು ಧ್ವನಿ ಮತ್ತು ಬೆಳಕು ಮಾಲಕರ ಸಂಘದ ವತಿಯಿಂದ ಸುಮಾರು ಒಂದು ಲಕ್ಷ ಐವತ್ತು ಸಾವಿರ ರೂ. ಮೌಲ್ಯದ 60 ಫ್ಯಾನ್‌ಗಳನ್ನು ಕೊಡುಗೆ–ಯಾಗಿ ನೀಡಲಾಯಿತು. ಇದೇ ಸಂದರ್ಭ ಸುಮಾರು 100 ಮಕ್ಕಳ ಹುಟ್ಟುಹಬ್ಬವನ್ನು ಕೇಕ್ ಕತ್ತರಿಸುವ ಮೂಲಕ ಆಚರಿಸಲಾಯಿತು.

ಸಿಸ್ಟರ್ ಹಾಗೂ ಜಿಲ್ಲಾ ರಾಜ್ಯೋತ್ಸವ ಪ್ರಶಸ್ತಿ ಪುರಸ್ಕೃತರಾದ ಲೂಸಿ ಪಿಂಟೊ ಅವರು ಮಾತನಾಡಿ, ಬಿಸಿಲ ಬೇಗೆಗೆ ಮಕ್ಕಳಿಗೆ ಕೊಂಚ ಸಮಸ್ಯೆಯಾಗುತ್ತಿತ್ತು. ಆದ್ರೆ ಇಂದು ತಣ್ಣಗಾಗುವ ನಿಟ್ಟಿನಲ್ಲಿ ಫ್ಯಾನ್‌ಗಳನ್ನು ಧ್ವನಿ ಮತ್ತು ಬೆಳಕು ಮಾಲಕರ ಸಂಘ ನೀಡಿದ್ದಾರೆ. ಇದರ ಜೊತೆಗೆ ಮಕ್ಕಳ ಹುಟ್ಟುಹಬ್ಬವನ್ನು ಸಿಹಿತಿಂಡಿಗಳನ್ನು ಹಂಚುವ ಮೂಲಕ ಆಚರಿಸಿಕೊಂಡಿದ್ದು, ಇವರ ಈ ಸೇವೆ ಇನ್ನಷ್ಟು ಮುಂದುವರೆಯಲಿ ಎಂದು ಶುಭಹಾರೈಸಿದರು.

ಈ ಕಾರ್ಯಕ್ರಮದಲ್ಲಿ ಸಂಘದ ಅಧ್ಯಕ್ಷ ಬೆನೆಟ್ ಡಿಸಿಲ್ವ ಅವರು ಮಾತನಾಡುತ್ತಾ, ಸಂಘದ ವತಿಯಿಂದ ಸುಮಾರು 60 ಫ್ಯಾನ್‌ಗಳನ್ನು ನೀಡಿದ್ದೇವೆ. ಇದರ ಜೊತೆಗೆ ಅಂದಾಜು 100 ಮಕ್ಕಳ ಹುಟ್ಟು ಹಬ್ಬವನ್ನು ಆಚರಿಸಿದ್ದು, ಊಟದ ವ್ಯವಸ್ಥೆಯನ್ನು ಸಂಘದ ಮೂಲಕ ಮಾಡಿದ್ದೇವೆ. ಸಂಘದ ಸದಸ್ಯರು ಹಾಗೂ ಕಾರ್ಯಕಾರಿಣಿ ಸದಸ್ಯರ ಸಹಕಾರದಿಂದ ಈ ಮುಗ್ಧ ಮಕ್ಕಳಿಗಾಗಿ ಇಂತಹದೊಂದು ವ್ಯವಸ್ಥೆಯನ್ನು ಕಲ್ಪಿಸಲಾಯಿತು ಎಂದು ಶ್ಲಾಘನೆ ವ್ಯಕ್ತಪಡಿಸಿದರು.

ಇನ್ನು ದೆ ಮೆರ್ಸಿದೆ ಮಕ್ಕಳ ಆಶ್ರಮದ ಸಿಸ್ಟರ್ ಲೀಡಿಯಾ ಅವರು ಮಾತನಾಡಿ, ಇಲ್ಲಿ ಕಲಿತು,ಬೆಳೆದ ಮಕ್ಕಳು ಮುಂದೆ ಸಮಾಜದಲ್ಲಿ ತಮ್ಮಂತಹ ನೂರಾರು ಮಕ್ಕಳಿಗೆ ದಾರಿ ದೀಪವಾಗಬೇಕು ಎನ್ನುತ್ತಾ ಒಂದು ಇಸ್ಲಾಂ ಮಹಿಳೆಯ ಜೀವನದ ಘಟನೆಯನ್ನು ವಿವರಿಸಿದ್ದಾರೆ.

ಕಾರ್ಯಕ್ರಮದಲ್ಲಿ ಮಕ್ಕಳು ಕುಣಿದು, ಕುಪ್ಪಳಿಸಿದರು. ಮಂಗಳೂರು ತಾಲೂಕು ಧ್ವನಿ ಮತ್ತು ಬೆಳಕು ಮಾಲಕರ ಸಂಘದ ಅಧ್ಯಕ್ಷರು ರಸಪ್ರಶ್ನೆ ಹಾಗು ಇನ್ನಿತರ ಚಟುವಟಿಕೆಗಳನ್ನು ಮಕ್ಕಳಿಗೆ ನೀಡಿದರು.

ಈ ಸಂದರ್ಭ ಪ್ಲಾವಿಯಾ, ಟ್ರಿಝಾ, ರೆನಿಟ, ಸುನಿತ, ಧ್ವನಿ ಮತ್ತು ಬೆಳಕು ಮಾಲಕರ ಸಂಘದ ಉಪಾಧ್ಯಕ್ಷ ಮಹೇಶ್ ಬೊಳಾರ್, ವಿನೋದ್ ಕುಂಪಲ ಹಾಗೂ ಸದಸ್ಯರಾದ ಅರುಣ್ ನೊರೊನ್ಹಾ, ಸಂದೀಪ್ ಡಿಸಿಲ್ವ, ಸಂದೀಪ್ ಉಳ್ಳಾಳ್, ರಾಜೇಶ್, ಮಾಕ್ಸಿಮ್, ರವಿ, ವಿಜಿತ್, ರಂಜನ್, ಯಶ್ಪಾಲ್, ಗಣೇಶ್ ಎ ಉಪಸ್ಥಿತರಿದ್ದರು.

ರಿಶೆಲ್ ಕಾರ್ಯಕ್ರಮ ನಿರೂಪಿಸಿದರು. ರಕ್ಷಿತಾ ಧನ್ಯವಾದವಿತ್ತರು.

### ಬೋಳಿಯಾರ್ ಕಾರ್ಯಕ್ಕೆ ಮೆಚ್ಚುಗೆಯ ಸುರಿಮಳೆ | 6ನೇ ನಮೋ ಕುಟೀರ ಗೃಹಪ್ರವೇಶದಲ್ಲಿ ಸಂಸದ ಕ್ಯಾ.ಚೌಟ

# ಅಶಕ್ತ ವರ್ಗದವರಿಗೆ ಮನೆಗಳನ್ನ ನಿರ್ಮಿಸಿ ಕೊಡುತ್ತಿರುವ ಕಾರ್ಯ ಮಹತ್ತರ

**ಬೋಳಿಯಾರ್:** ಪಂಡಿತ್ ದೀನ್ ದಯಾಳ್ ಉಪಾಧ್ಯಾಯರ ಅಂತ್ಯೋದಯ ಪರಿಕಲ್ಪನೆಯನ್ನ ಪ್ರಧಾನಿ ಮೋದಿಯವರು ಸಾಕಾರಗೊಳಿಸಿದ್ದಾರೆ. ದೇಶದ ಕಟ್ಟ ಕಡೆ–ಯ ವ್ಯಕ್ತಿಯೂ ಕೂಡ ವಸತಿ, ಆರೋಗ್ಯ, ಶಿಕ್ಷಣದಿಂದ ವಂಚಿತರಾಗಬಾರದೆಂಬ ನಿಟ್ಟಿನಲ್ಲಿ ಮೋದಿಯವರು ಯೋಜನೆಗಳನ್ನ ಅನುಷ್ಠಾನಗೊಳಿಸುತ್ತಿದ್ದಾರೆ. ಅಂತಹ ಹೆಮ್ಮೆಯ ಪ್ರಧಾನಿಯ ಹೆಸರಲ್ಲಿ ಸಮಾಜದ ಅಶಕ್ತ ವರ್ಗದವರಿಗೆ ಮನೆಗಳನ್ನ ನಿರ್ಮಿಸಿ ಕೊಡುತ್ತಿರುವ ಕಾರ್ಯ ಮಹತ್ತರವಾಗಿದೆ. ಸಂತೋಷ್ ಬೋಳಿಯಾರ್ ಕೈಗೊಂಡಿರುವ ನಮೋ ಕುಟೀರದ ಸರಣಿ ಯೋಜನೆಯ ಬಗ್ಗೆ ಅವಕಾಶ ಸಿಕ್ಕಾಗ ಪ್ರಧಾನಿ ಮೋದಿಯವರ ಗಮನಕ್ಕೆ ತರುವುದಾಗಿ ಸಂಸದ ಕ್ಯಾ.ಬ್ರಜೇಶ್ ಚೌಟ ಹೇಳಿದರು.

ಬಿಜೆಪಿ ಮುಖಂಡರು ಹಾಗೂ ದಿ.ಮೈಸೂರು ಇಲೆಕ್ಟ್ರಿಕಲ್ಸ್ (ಲಿ)ನ ಮಾಜಿ ಅಧ್ಯಕ್ಷರಾದ ಸಂತೋಷ್ ಕುಮಾರ್ ರೈ ಬೋಳಿಯಾರ್ ಅವರು ಕುರ್ನಾಡು ಗ್ರಾಮದ ಅಬಿಮಾರ್ ಎಂಬಲ್ಲಿ ರುಕ್ಮಯ ಮತ್ತು ವಿಜಯ ಎಂಬ ಮಕ್ಕಳಿಲ್ಲದ ಹಿರಿಯ ದಂಪತಿಗಳಿಗೆ ಪ್ರಧಾನಿ ನರೇಂದ್ರ ಮೋದಿಯವರ ಹೆಸರಲ್ಲಿ ನಿರ್ಮಿಸಿ ಕೊಟ್ಟ ಆರನೇ ನೂತನ ಮನೆ "ನಮೋ ಕುಟೀರ"ದ ಕೀಲಿ ಕೈಯನ್ನು ಫಲಾನುಭವಿ ಕುಟುಂಬಕ್ಕೆ ಬುಧವಾರದಂದು ಹಸ್ತಾಂತರಿಸಿ ಅವರು ಮಾತನಾಡಿದರು. ಆರು ಮನೆಗಳನ್ನು ನಿರ್ಮಿಸಿದರು ಕೂಡಾ ಸಂತೋಷ್ ಬೋಳಿಯಾರ್ ಅವರ ಉತ್ಸಾಹವು ಕಳೆಗುಂದಿಲ್ಲ.ಅವರ ಸೇವಾ ಚಟುವಟಿಕೆಯು ಏಳನೇ ಮನೆ ನಿರ್ಮಾಣದತ್ತ ಮುಂದುವರೆದಿರುವುದು ನಮಗೆಲ್ಲರಿಗೂ ಪ್ರೇರಣೆಯಾಗಿದೆ.ಜಿಲ್ಲೆಯಲ್ಲಿ ನಡೆಯುವ ದಾನ,ಧರ್ಮದ ಕೈಂಕರ್ಯಗಳು ಬೇರೆಲ್ಲೂ ಕಾಣಲು ಸಾಧ್ಯವಿಲ್ಲ.ನಿರ್ದಿಷ್ಟ ಗುರಿ ಸಾಧನೆಯ ಸೇವಾ ಕಾರ್ಯಗಳು ಹಿಂದೂ ಸಮಾಜದ ಇಂದಿನ ಅನಿವಾರ್ಯತೆಯಾಗಿದೆಯೆಂದರು.



> ಬಡವರಿಗೆ ಮನೆ ಕಟ್ಟಿ ಕೊಡುವ ಮನೋಭಾವ ಎಲ್ಲರಲ್ಲೂ ಇರಲು ಭಗವಂತನ ಪ್ರೇರಣೆ ಅಗತ್ಯ.ಸಂತೋಷ್ ಬೋಳಿಯಾರ್ ಅವರಲ್ಲಿ ಸಿರಿವಂತಿಕೆಯ ಜೊತೆಗೆ ಭಕ್ತಿಯ ಮಾರ್ಗವೂ ಜೋಡಣೆ-ಯಾಗಿದೆ. ಸಮಾಜ ಸೇವೆಯನ್ನು ಅವರು ಕಾಟಾಚಾರಕ್ಕೆ ನಡೆಸದೆ, ಫಲಾನುಭವಿಗಳಿಗೆ ವಾಸ್ತು ಪ್ರಕಾರದ ಸುಸಜ್ಜಿತ ಮನೆ ನಿರ್ಮಿಸಿ ಕೊಟ್ಟು ಎಲ್ಲರಿಗೂ ಮಾದರಿಯಾಗಿದ್ದಾರೆ. ಅವರ ಈ ಸರಣಿ ಯೋಜನೆಯು 108 ಮನೆಗಳನ್ನ ನಿರ್ಮಿಸುವ ಮಹತ್ತರ ಗುರಿಯತ್ತ ಸಾಗಲಿ.
>
> ■ ಶ್ರೀ ಶಿವಯೋಗಿ ದುರ್ಗಾನಂದ ಸ್ವಾಮೀಜಿ

> ಸಮಾಜದ ಅರ್ಹ ಅಶಕ್ತ ವರ್ಗದವರಿಗೆ ಹತ್ತು ಮನೆಗಳನ್ನ ನಿರ್ಮಿಸಿ ಕೊಡುವ ಯೋಜನೆಯನ್ನು ಹಮ್ಮಿಕೊಳ್ಳಲಾಗಿದೆ. ಭಾರತವನ್ನು ವಿಶ್ವಗುರುವಿನ ಸ್ಥಾನಕ್ಕೇರಿಸಿದ ನಮ್ಮ ಹೆಮ್ಮೆಯ ಪ್ರಧಾನಿ ನರೇಂದ್ರ ಮೋದಿಯವರ ಹೆಸರಲ್ಲಿ ಈ ಸರಣಿ ಯೋಜನೆಯನ್ನು ಕೈಗೊಳ್ಳಲಾಗಿದೆ. ಪತ್ನಿ,ಮಕ್ಕಳು ಮತ್ತು ಸಮಾಜ ಬಾಂಧವರ ನಿರಂತರ ಪ್ರೋತ್ಸಾಹ ದಿಂದ ಸಮಾಜಮುಖಿ ಕಾರ್ಯಗಳನ್ನ ನಡೆಸಲು ಉತ್ಸಾಹ ಇಮ್ಮಡಿಯಾಗಿದೆ. ದೇವರು ಕರುಣಿಸಿದರೆ ನೂರು ನಮೋ ಕುಟೀರಗಳನ್ನ ಕಟ್ಟುವ ಮಹದಾಸೆ ಇದೆ.
>
> ■ ಸಂತೋಷ್ ಕುಮಾರ್ ಬೋಳಿಯಾರ್. ಬಿಜೆಪಿ ಮುಖಂಡರು

ಪುತ್ತೂರು ವಿವೇಕಾನಂದ ವಿದ್ಯಾವರ್ಧಕ ಸಂಘದ ಅಧ್ಯಕ್ಷರಾದ ಡಾ.ಕಲ್ಲಡ್ಕ ಪ್ರಭಾಕರ ಭಟ್ ಮಾತನಾಡಿ ಧರ್ಮವೇ ದೇಶದ ಆತ್ಮವಾಗಿದ್ದು,ತ್ಯಾಗ ಮತ್ತು ಸೇವೆಯೇ ಧರ್ಮದ ಭಾಗವಾಗಿದೆ.ಚುನಾಯಿತ ಜನಪ್ರತಿನಿಧಿಗಳು, ಸಹಕಾರಿ ಸಂಸ್ಥೆಗಳು ತಮ್ಮ ಕಾರ್ಯ ವ್ಯಾಪ್ತಿಯಲ್ಲಿನ ನಿವೇಶನ ರಹಿತರು,ಶಿಕ್ಷಣ ವಂಚಿತರಿಗೆ ಸೂಕ್ತ ವ್ಯವಸ್ಥೆ ಕಲ್ಪಿಸಿ ಕೊಡುವ ಕಾರ್ಯ ನಡೆಸಬೇಕಿದೆ.ಸಮಾಜದ ಕಟ್ಟ ಕಡೆಯ ವ್ಯಕ್ತಿಗೆ ಮೂಲಭೂತ ಸೌಲಭ್ಯ ಲಭಿಸಿದರೆ ಅದುವೇ ದೇಶದ ಅಭಿವೃದ್ಧಿಯ ಸಂಕೇತವಾಗಿದೆ.ನಮ್ಮ ಸಮಾಜದಲ್ಲಿ ತಾನು ತನಗಾಗಿಯೆಂಬ ಯೋಚನೆಗಳೇ ತುಂಬಿದ್ದು,ಸಾಮಾಜಿಕ,ಜನಪರ ಚಿಂತನೆಗಳು ತೀರಾ ಕಡಿಮೆಯಾಗಿವೆ.ಪ್ರತಿಯೊಬ್ಬರೂ ಸಂತೋಷ್ ಬೋಳಿಯಾರ್ ಅವರ ಹಾದಿಯಲ್ಲೇ ಯೋಚಿಸಿ ಸಮಾಜಮುಖಿ ಕಾರ್ಯಗಳನ್ನು ನಡೆಸಿದಲ್ಲಿ ಹಿಂದೂ ಸಮಾಜ ಸಧೃಡಗೊಳ್ಳಲು ಸಾಧ್ಯವಿದೆಯೆಂದರು.

ಮಾಡೂರು ಮರಿಯಣ್ಣಪಾಲು ಶಿವದುರ್ಗಾಂಭ ಮಠದ ಶ್ರೀ ಶಿವಯೋಗಿ ದುರ್ಗಾನಂದ ಸ್ವಾಮೀಜಿಯವರು ಆಶೀರ್ವಚನವಿತ್ತರು.

ರಾಷ್ಟ್ರೀಯ ಸ್ವಯಂಸೇವಕ ಸಂಘದ ಕರ್ನಾಟಕ ದಕ್ಷಿಣ ಪ್ರಾಂತ ಸಹ ಕಾರ್ಯವಾಹಕರಾದ ಪಿ.ಎಸ್. ಪ್ರಕಾಶ್, ಕಣಂತೂರು ಕ್ಷೇತ್ರದ ಆಡಳಿತ ಮೊಕ್ತೇಸರರಾದ ದೇವಿಪ್ರಸಾದ್ ಪೊಯ್ಯತ್ತಾಯ,ನಾರ್ಯಗುತ್ತುವಿನ ಗಡಿ ಪ್ರಧಾನರಾದ ಪದ್ಮನಾಭ ಯಾನೆ ಮಂಜು ಭಂಡಾರಿ,ಹಿರಿಯರಾದ ನಾಗರಾಜ ಭಟ್ ,ಇನೋಳಿ ಶ್ರೀ ಸೋಮನಾಥ ದುರ್ಗಾಪರಮೇಶ್ವರೀ ಕ್ಷೇತ್ರದ ಆಡಳಿತ ಮೊಕ್ತೇಸರರಾದ ಚಂದ್ರಹಾಸ ಪೂಂಜಾ,ಡಾ. ಅಣ್ಣಯ್ಯ ಕುಲಾಲ್,ಮಾಜಿ ತಾ.ಪಂ ಸದಸ್ಯರಾದ ಸೇಸಪ್ಪ ಟೈಲರ್,ಸೋಮೇಶ್ವರ ಪುರಸಭಾ ಉಪಾಧ್ಯಕ್ಷರಾದ ರವಿಶಂಕರ ಸೋಮೇಶ್ವರ,ಜನಶಿಕ್ಷಣ ಟ್ರಸ್ಟ್ ನ ಶೀನ ಶೆಟ್ಟಿ ಹಾಗೂ ಕೃಷ್ಣ ಮೂಲ್ಯ,ಕುರ್ನಾಡು ಗ್ರಾ.ಪಂ ಮಾಜಿ ಅಧ್ಯಕ್ಷರಾದ ಗಣೇಶ್ ನಾಯ್ಕ್ ಕುರ್ನಾಡು ಗುತ್ತು ,ಮುಡಿಪು ಕುಲಾಲ ಸಂಘದ ಅಧ್ಯಕ್ಷರಾದ ಪುಂಡರೀಕಾಕ್ಷ ,ಪ್ರಮುಖರಾದ ಜಯರಾಮ ಶೆಟ್ಟಿ ಕಂಬ್ಳಪದವು,ರಾಜೇಶ್ ಮಡಿವಾಳ,ಹಿರಿಯರಾದ ನಾರಾಯಣ ಶೆಟ್ಟಿ ಬಲೆತ್ತೋಡು,ಉದ್ಯಮಿಗಳಾದ ಚಂದ್ರಹಾಸ್ ಉಳ್ಳಾಲ್,ರಾಧಾಕೃಷ್ಣ ರೈ ಉಮಿಯ,ದಿ. ಮೈಸೂರು ಇಲೆಕ್ಟ್ರಿಕಲ್ಸ್ ಲಿ. ನ ಮಾಜಿ ಅಧ್ಯಕ್ಷರಾದ ಸಂತೋಷ್ ಕುಮಾರ್ ಬೋಳಿಯಾರ್,ಪತ್ನಿ ವೀಣಾ ರೈ,ಪುತ್ರಿ ಸ್ಪರ್ಶ ಎಸ್.ರೈ, ಪುತ್ರ ಸಮ್ಯಕ್ತ್ ರೈ ಬೋಳಿಯಾರ್ ಉಪಸ್ಥಿತರಿದ್ದರು. ರವಿ ರೈ ಪಜೀರು ಸ್ವಾಗತಿಸಿ,ನಿರೂಪಿಸಿದರು.

## ಇನ್ನೂ ಅನೇಕ ಕುಟುಂಬಗಳ ಬದುಕಿನಲ್ಲಿ ಬೆಳಕು ಹರಡಲಿ

ಭಾರತೀಯ ಜನತಾ ಪಕ್ಷದ ಮುಖಂಡರಾಗಿಯೂ, "ದಿ ಮೈಸೂರು ಎಲೆಕ್ಟ್ರಿಕಲ್ಸ್" ಸಂಸ್ಥೆಯ ನಿಕಟಪೂರ್ವ ಅಧ್ಯಕ್ಷರಾಗಿರುವ ಸಂತೋಷ್ ರೈ ಬೋಳಿಯಾರ್ ಅವರು ಸಮಾಜಮುಖಿ ಕಾರ್ಯಗಳ ಮೂಲಕ ವಿಶೇಷವಾಗಿ ಮೆಚ್ಚುಗೆಗೆ ಪಾತ್ರರಾಗಿದ್ದಾರೆ. ರಾಜಕೀಯ ಕ್ಷೇತ್ರದಲ್ಲಿ ಮಾತ್ರವಲ್ಲ, ಮಾನವೀಯ ಸೇವೆಯಲ್ಲಿ ತಮ್ಮದೇ ಆದ ಗುರುತು ಮೂಡಿಸಿರುವ ಅವರು ಈಗಾಗಲೇ ಐದು ಮನೆಗಳನ್ನು ಬಡ ಕುಟುಂಬಗಳಿಗೆ ನಿರ್ಮಿಸಿ ನೀಡಿರುವುದು ಸಮಾಜದಲ್ಲಿ ಅಪಾರ ಕೃತಜ್ಞತೆ ಮತ್ತು ಗೌರವಕ್ಕೆ ಕಾರಣವಾಗಿದೆ.



ಇದೀಗ ಅವರ 6ನೇ ಯೋಜನೆಯಾಗಿ ಕುಲಾಲ ಸಮುದಾಯದ ವೃದ್ಧ ದಂಪತಿಗೆ ಮನೆ ನಿರ್ಮಿಸಿ ಕೊಟ್ಟಿರುವುದು ಶ್ಲಾಘನೀಯ ಕಾರ್ಯ. ದಂಪತಿ ಕಷ್ಟಕ್ಕೆ ತಕ್ಷಣ ಸ್ಪಂಧಿಸಿ, ಅವರಿಗೆ ಗೌರವಯುತ ಬದುಕು ಕಟ್ಟಿಕೊಡುವ ಸಂಕಲ್ಪ ಮಾಡಿದ್ದಾರೆ. ಇದು ಕೇವಲ ಮನೆ ಕಟ್ಟಿಕೊಡುವ ಕೆಲಸವಲ್ಲ. ಅದು ಕಣ್ಣೀರನ್ನು ಒರೆಸುವ, ಮಾನವೀಯತೆ ಮೆರೆದ ಒಂದು ಮಹೋನ್ನತ ಸೇವೆ.

ಇದುವರೆಗೆ ಐದು ಮನೆಗಳನ್ನು ಕಟ್ಟಿಕೊಟ್ಟು ಸಂಕಷ್ಟದಲ್ಲಿದ್ದ ಕುಟುಂಬಗಳಿಗೆ ಆಶ್ರಯ ಒದಗಿಸಿರುವ ಅವರು, ತಮ್ಮ ವೈಯಕ್ತಿಕ ಸಂಪನ್ಮೂಲಗಳನ್ನು ಬಳಸಿ ನಿಸ್ವಾರ್ಥ ಸೇವೆ ಸಲ್ಲಿಸಿರುವುದು ವಿಶೇಷ. ರಾಜಕೀಯ ಪ್ರಚಾರಕ್ಕಾಗಿ ಅಲ್ಲದೆ, ಮೌನವಾಗಿ, ಬಡವರ ಕಷ್ಟವನ್ನು ಮನಗಂಡು ಕಾರ್ಯನಿರ್ವಹಿಸುವ ಅವರ ಮನೋಭಾವ ಸಮಾಜದ ಇತರ ನಾಯಕರಿಗೆ ಮಾದರಿಯಾಗಿದೆ. ಮುಂದಿನ ಯೋಜನೆಯಾಗಿ ಸಂಕೊಳಿಗೆಯಲ್ಲಿಯೂ ಮನೆ ನಿರ್ಮಾಣ ಕಾರ್ಯಕ್ಕೆ ಕೈ ಹಾಕಿರುವುದು ಅವರ ಸೇವಾಭಾವನೆಯ ನಿರಂತರತೆಯನ್ನು ತೋರಿಸುತ್ತದೆ. ಸಮಾಜದಲ್ಲಿ ಮನೆವಿಲ್ಲದೆ ಕಷ್ಟಪಡುವವರನ್ನು ಗುರುತಿಸಿ, ಅವರ ಬದುಕಿಗೆ ನೆಲೆ ಒದಗಿಸುವ ಉದ್ದೇಶದಿಂದ ಈ ಯೋಜನೆಗಳನ್ನು ಕೈಗೊಳ್ಳುತ್ತಿರುವುದು ಅಭಿನಂದನೀಯ. ಮನೆ ಎಂದರೆ ಕೇವಲ ನಾಲ್ಕು ಗೋಡೆಗಳಲ್ಲ. ಅದು ಭದ್ರತೆ, ಗೌರವ ಮತ್ತು ಭವಿಷ್ಯದ ವಿಶ್ವಾಸ. ಅದನ್ನು ಒದಗಿಸುವ ಕಾರ್ಯವು ನಿಜವಾದ ಜನಸೇವೆಯ ಪ್ರತೀಕ.

ಇವರ ಈ ಸೇವಾ ಚಟುವಟಿಕೆಗಳನ್ನು ಪ್ರಧಾನ ಮಂತ್ರಿಗಳ ಗಮನಕ್ಕೆ ತರಲು ಪ್ರಯತ್ನಿಸುವ ಭರವಸೆಯನ್ನು ಸಂಸದ ಬ್ರಿಜೇಶ್ ಚೌಟ ಅವರು ನೀಡಿರುವುದು ಗಮನಾರ್ಹ. ಇದ–ರಿಂದ ಸಂತೋಷ್ ರೈ ಬೋಳಿಯಾರ್ ಅವರ ಕಾರ್ಯ ರಾಷ್ಟ್ರಮಟ್ಟದಲ್ಲಿಯೂ ಗುರುತಿಸಿಕೊಳ್ಳುವ ಸಾಧ್ಯತೆ ಇದೆ. ಇಂತಹ ಸೇವಾ ಮನೋಭಾವದ ನಾಯಕರನ್ನು ಉತ್ತೇಜಿಸುವುದು ಸಮಾಜದ ಕರ್ತವ್ಯವಾಗಿದೆ. ಸಂತೋಷ್ ರೈ ಬೋಳಿಯಾರ್ ಅವರು ರಾಜಕೀಯ ಹುದ್ದೆಗಳನ್ನು ಅಲಂಕರಿಸಿದ್ದರೂ, ಜನಸೇವೆಯ ಮೂಲಕವೇ ಜನಮನ ಗೆದ್ದಿದ್ದಾರೆ. ಬಡವರ ನೋವನ್ನು ತಮ್ಮದೇ ನೋವನ್ನಾಗಿ ಕಂಡು ಸ್ಪಂದಿಸುವ ಅವರ ಮನಸ್ಸು ನಿಜವಾದ ಸಮಾಜ ಸೇವಕನ ಲಕ್ಷಣವಾಗಿದೆ. ಅವರ ಸೇವಾ ಪಥ ಇನ್ನಷ್ಟು ವಿಸ್ತರಿಸಲಿ, ಇನ್ನೂ ಅನೇಕ ಕುಟುಂಬಗಳ ಬದುಕಿನಲ್ಲಿ ಬೆಳಕು ಹರಡಲಿ ಎಂಬುದು ಎಲ್ಲರ ಹಾರೈಕೆ.

# ನವಮಂಗಳೂರು ಬಂದರಿಗೆ 2ನೇ ಪ್ರವಾಸಿ ಹಡಗು ಆಗಮನ



- 95 ಪ್ರಯಾಣಿಕರು ಮತ್ತು 70 ಸಿಬ್ಬಂದಿಯನ್ನು ಹೊತ್ತ ಕ್ರೂಸ್ ಹಡಗಿನಲ್ಲಿ ಬಂದ ಪ್ರವಾಸಿಗರು. ಮಂಗಳೂರಿನ ಯಕ್ಷಗಾನ ಕಲಾ ಪ್ರಕಾರದ ಸೆಲ್ಫಿ ಸ್ಟಾಂಡ್‌ನಲ್ಲಿ ಪ್ರವಾಸಿಗರಿಗೆ ಸೆಲ್ಫಿ ಕ್ಲಿಕ್ಕಿಸುವ ಅವಕಾಶ.
- ಮಂಗಳೂರು ಮತ್ತು ಸುತ್ತಮುತ್ತಲಿನ ಪ್ರಮುಖ ತಾಣಗಳಿಗೆ ಪ್ರವಾಸಿಗರು ಭೇಟಿ
- ಮಧ್ಯಾಹ್ನ 1 ಗಂಟೆಗೆ ಹಡಗು ಮಂಗಳೂರು ಬಂದರಿನಿಂದ ನಿರ್ಗಮನ

**ಮಂಗಳೂರು:** ನವಮಂಗಳೂರು ಬಂದರು ಪ್ರಾಧಿಕಾರವು ಈ ಸಾಲಿನ 2ನೇ ಪ್ರವಾಸಿ ಹಡಗಾದ ಎಂ.ಎಸ್. ಐಲ್ಯಾಂಡ್ ಸ್ಕೈ ಅನ್ನು ಬಂದರು ತೀರದಲ್ಲಿ ಸ್ವಾಗತಿಸಿದೆ.

ಬಹಾಮಾಸ್ ಧ್ವಜದ ಅಡಿಯಲ್ಲಿ ನೌಕಾಯಾನ ಮಾಡುವ ಮತ್ತು ಸಲೆನ್ ಶಿಪ್ ಮ್ಯಾನೇಜೆಂಟ್ ಎಬಿ ನಿರ್ವಹಿಸುವ ಈ ಹಡಗು ಬೆಳಿಗ್ಗೆ 7.30ಕ್ಕೆ ನವ ಮಂಗಳೂರು ಬಂದರಿಗೆ ಬಂದರಿಗೆ ಆಗಮಿಸಿತು.

95 ಪ್ರಯಾಣಿಕರು ಮತ್ತು 70 ಸಿಬ್ಬಂದಿಯನ್ನು ಹೊತ್ತ ಕ್ರೂಸ್ ಹಡಗಿನಲ್ಲಿ ಬಂದ ಪ್ರವಾಸಿಗರಿಗೆ ಆಯುಷ್ ಸಚಿವಾಲಯದಿಂದ ಸ್ಥಾಪಿಸಿದ ಧ್ಯಾನ ಕೇಂದ್ರ, ಎನ್‌ಎಂಪಿಎಯ ಉಚಿತ ವೈ–ಫೈ ಸಂಪರ್ಕ ಮತ್ತು ಪ್ರವಾಸೋದ್ಯಮ ಸಚಿವಾಲಯದಿಂದ ಸ್ಥಾಪಿಸಲಾದ ಮಂಗಳೂರಿನ ಯಕ್ಷಗಾನ ಕಲಾ ಪ್ರಕಾರದ ಸೆಲ್ಫಿ ಸ್ಟಾಂಡ್‌ನಲ್ಲಿ ಪ್ರವಾಸಿಗರಿಗೆ ಸೆಲ್ಫಿ ಕ್ಲಿಕ್ಕಿಸುವ ಅವಕಾಶ ಕಲ್ಪಿಸಲಾಯಿತು. ಪ್ರವಾಸಿಗರು ಕುದ್ರೋಳಿ ಗೋಕರ್ಣನಾಥ ದೇವಸ್ಥಾನ, ಸೇಂಟ್ ಅಲೋಶಿಯಸ್ ಚಾಪೆಲ್, ಸ್ಥಳೀಯ ಮಾರುಕಟ್ಟೆಗಳು ಮತ್ತು ಕಲ್ಬಾವಿ ಗೋಡಂಬಿ ಕಾರ್ಖಾನೆ ಸೇರಿದಂತೆ ಮಂಗಳೂರು ಮತ್ತು ಸುತ್ತಮುತ್ತಲಿನ ಪ್ರಮುಖ ತಾಣಗಳಿಗೆ ಪ್ರವಾಸಿಗರು ಭೇಟಿ ನೀಡಿದರು. ಬಳಿಕ ಮಧ್ಯಾಹ್ನ 1 ಗಂಟೆಗೆ ಹಡಗು ಮಂಗಳೂರು ಬಂದರಿನಿಂದ ನಿರ್ಗಮಿಸಿದೆ.

# ವೀರರಾಣಿ ಅಬ್ಬಕ್ಕ ಉತ್ಸವದಲ್ಲಿ ಮಾಜಿ ಶಾಸಕ ಜಯರಾಮ ಶೆಟ್ಟಿಗೆ ಗೌರವ ಸನ್ಮಾನ



**ಉಳ್ಳಾಲ:** ವೀರರಾಣಿ ಅಬ್ಬಕ್ಕ ಉತ್ಸವ ಸಮಿತಿಯ ವತಿಯಿಂದ ತೊಕ್ಕೊಟ್ಟು ಒಳಪೇಟೆಯ ಡಾ.ಅಂಬೇಡ್ಕರ್ ರಂಗಮಂದಿರದಲ್ಲಿ ಇತ್ತೀಚೆಗೆ ನಡೆದ 2025–26ನೇ ಸಾಲಿನ ಕಾರ್ಯಕ್ರಮದಲ್ಲಿ ಉಳ್ಳಾಲ ವಿಧಾನಸಭಾ ಕ್ಷೇತ್ರವನ್ನು ಪ್ರತಿನಿಧಿಸಿದ ಸಾಮಾಜಿಕ, ಸಾಂಸ್ಕೃತಿಕ, ಧಾರ್ಮಿಕ ಹಾಗೂ ರಾಜಕೀಯ ಕ್ಷೇತ್ರದಲ್ಲಿ ತನ್ನ ಛಾಪನ್ನು ಮೂಡಿಸಿದ ತನ್ನ ವೃತ್ತಿ ಜೀವನದಲ್ಲಿ ಯಾವುದೇ ಕಳಂಕವಿಲ್ಲದೆ ಪ್ರಾಮಾಣಿಕತೆ ಹಾಗೂ ಶ್ರದ್ಧೆಯಿಂದ ದುಡಿದ ಮಾಜಿ ಶಾಸಕ ಕೆ. ಜಯರಾಮ ಶೆಟ್ಟಿ ಅವರನ್ನು 80ನೇ ವರ್ಷದ ಗೌರವ ಸನ್ಮಾನ ಮಾಡಲಾಯಿತು.

ಉಳ್ಳಾಲ ವಿಧಾನಸಭಾ ಕ್ಷೇತ್ರದ ಶಾಸಕರಾಗಿದ್ದಾಗ 1997ರಲ್ಲಿ ಪ್ರಾರಂಭವಾದ ವೀರರಾಣಿ ಅಬ್ಬಕ್ಕ ಉತ್ಸವ ಸಮಿತಿ(ರಿ)ಯ ಗೌರವಾಧ್ಯಕ್ಷರಾಗಿ ಜಯರಾಮ ಶೆಟ್ಟಿ 29 ವರ್ಷಗಳವರೆಗೆ ಅಬ್ಬಕ್ಕಳ ಹೆಸರನ್ನು ಇಡೀ ದೇಶಕ್ಕೆ ಪಸರಿಸಲು ಶ್ರಮಿಸಿದವರು ಎಂದು ಉಳ್ಳಾಲ ವೀರರಾಣಿ ಅಬ್ಬಕ್ಕ ಉತ್ಸವ ಸಮಿತಿ (ರಿ)ಯ ಅಧ್ಯಕ್ಷ ದಿನಕರ ಉಳ್ಳಾಲ್ ಹೇಳಿದರು.

ಈ ಸಂದರ್ಭ ಸಮಿತಿಯ ಗೌರವ ಉಪಾಧ್ಯಕ್ಷ ಸದಾನಂದ ಬಂಗೇರ, ಉಪಾಧ್ಯಕ್ಷೆ ದೇವಕಿ ಆರ್.ಉಳ್ಳಾಲ್, ಪ್ರಧಾನ ಕಾರ್ಯದರ್ಶಿ ಧನಲಕ್ಷ್ಮಿಗಟ್ಟಿ, ಕೋಶಾಧಿಕಾರಿ ಆನಂದ ಕೆ. ಅಸೈಗೋಳಿ, ಪದಾಧಿಕಾರಿಗಳಾದ ಡಿ.ಎನ್. ರಾಘವ, ಕೆ.ಎಂ.ಕೆ ಮಂಜನಾಡಿ, ಸತೀಶ್ ಭಂಡಾರಿ, ಚಿದಾನಂದ, ಪ್ರವೀಣ್ ಬಸ್ತಿ, ಮಾಧವ ಉಳ್ಳಾಲ್, ಪ್ರವೀಣ್ ಕುಮಾರ್, ಸುವಾಸಿನಿ ಜೆ. ಬಬ್ಬುಕಟ್ಟೆ, ರತ್ನಾವತಿ ಜೆ. ಬೈಕಾಡಿ, ಶಶಿಕಲ ಗಟ್ಟಿ, ಮಾಧವಿ ಉಳ್ಳಾಲ್, ಮಲ್ಲಿಕಾ ಭಂಡಾರಿ, ಅನುಪಮ ಸಿ., ವಾಣಿ ಲೋಕಯ್ಯ ಶಶಿಕಾಂತಿ ಉಳ್ಳಾಲ್, ಸರೋಜಾ ಕುಮಾರಿ, ಸತ್ಯವತಿ, ಕೇರಾ ಕುವೆಲ್ಲೋ, ರಾಜೀ ಕೆಂಪುಮಣ್ಣು ಮಲ್ಲಿಕಾ ಉಳ್ಳಾಲ್ ಬೈಲ್, ದೇವಕಿ ಯು. ಬೋಳಾರ್, ಲತಾ ಶ್ರೀಧರ್, ಜಯಲಕ್ಷ್ಮಿ ಬಾಲಕೃಷ್ಣ ಸ್ವಪ್ನಾ ಶೆಟ್ಟಿ, ವಾಣಿ ಗೌಡ, ಅಮಿತಾ, ಚಿತ್ರಾ ಜಗನ್, ಸ್ವಪ್ನಾ ಹರೀಶ್, ಆಶಾ ಗಟ್ಟಿ, ನಾಗರತ್ನ ಗಟ್ಟಿ, ಜಯಶ್ರೀ ಕೆ., ಚಂದ್ರಕಲಾ ಮಲ್ಯ, ಹೇಮಲತಾ, ಪ್ರೇಮಲತಾ, ಮಮತಾ, ಸುಜಾತಾ ಬಿ.ಶೆಟ್ಟಿ, ಸುಮಲತಾ ಕೊಣಾಜೆ, ಹೇಮಾ, ಉಷಾ ನಾಯ್ಕ ಹರಿಣಾಕ್ಷಿ ಉಪಸ್ಥಿತರಿದ್ದರು.

## ನಿಧನ ಸುದ್ದಿ

### ಶ್ರೀನಿವಾಸ್ ಗ್ರೂಪ್ಸ್‌ನ ಸ್ಥಾಪಕ ಸಿಎ.ಎ ರಾಘವೇಂದ್ರ ರಾವ್



**ಮಂಗಳೂರು:** ಖ್ಯಾತ ಶಿಕ್ಷಣ ತಜ್ಞ, ಉದ್ಯಮಿ ಡಾ. ಸಿಎ. ಎ. ರಾಘವೇಂದ್ರ ರಾವ್ (88) ನಿಧನರಾದರು.

1988ರಲ್ಲಿ ಎ. ಶಾಮ್ ರಾವ್ ಪ್ರತಿಷ್ಠಾನವನ್ನು ಸ್ಥಾಪಿಸಿದ ಡಾ. ಸಿ.ಎ. ಎ. ರಾಘವೇಂದ್ರ ರಾವ್ ಅವರು, ಶ್ರೀನಿವಾಸ್ ಗ್ರೂಪ್ ಆಫ್ ಕಾಲೇಜುಗಳು ರಾಜ್ಯದ ಪ್ರಮುಖ ಶಿಕ್ಷಣ ಸಂಸ್ಥೆಗಳಾಗಿ ಬೆಳೆಯುವಲ್ಲಿ ಪ್ರಮುಖ ಪಾತ್ರ ವಹಿಸಿದ್ದಾರೆ. ಏಳು ವಿದ್ಯಾರ್ಥಿಗಳೊಂದಿಗೆ ಆರಂಭವಾದ ಶ್ರೀನಿವಾಸ್ ಕಾಲೇಜ್ ಆಫ್ ಹೋಟೆಲ್ ಮ್ಯಾನೇಜ್ಮೆಂಟ್ ನಂತರ ಹಲವು ವೃತ್ತಿಪರ ಹಾಗೂ ಉನ್ನತ ಶಿಕ್ಷಣ ಸಂಸ್ಥೆಗಳಾಗಿ ವಿಸ್ತರಿಸಿತು. 1980ರಲ್ಲಿ ಶ್ರೀನಿವಾಸ್ ಎಂಬ ತ್ರಿ–ಸ್ಟಾರ್ ಸಸ್ಯಾಹಾರಿ ಹೋಟೆಲ್ ಸ್ಥಾಪಿಸಿದ್ದರು. ಶಿಕ್ಷಣ ಹಾಗೂ ಸಮಾಜಸೇವೆಯಲ್ಲಿ ನೀಡಿದ ಕೊಡುಗೆಗಾಗಿ ಅವರಿಗೆ ಕರ್ನಾಟಕ ರಾಜ್ಯೋತ್ಸವ ಜಿಲ್ಲಾ ಪ್ರಶಸ್ತಿ (2004) ಸೇರಿದಂತೆ ಅನೇಕ ಪ್ರಶಸ್ತಿಗಳು ಲಭಿಸಿವೆ. ಮೃತರು ಪತ್ನಿ ವಿಜಯಲಕ್ಷ್ಮಿ, ಮಗಳು ಪದ್ಮಿನಿ, ಮಗ ಶ್ರೀನಿವಾಸ್ ಹಾಗೂ ನಾಲ್ವರು ಮೊಮ್ಮಕ್ಕಳನ್ನು ಅಗಲಿದ್ದಾರೆ.

### ಗೋಪಾಲ ಬಂಗೇರ ಅರ್ಕಾಣ



**ಕೊಣಾಜೆ:** ಪಜೀರು ಗ್ರಾಮದ ಅರ್ಕಾಣ ಪಾದಲ್ಪಾಡಿ ನಿವಾಸಿ ಗೋಪಾಲ ಬಂಗೇರ(76) ಅವರು ಅಲ್ಪಕಾಲದ ಅಸೌಖ್ಯದಿಂದ ಗುರುವಾರ ನಿಧನರಾದರು. ಇವರು ಪತ್ನಿ, ಇಬ್ಬರು ಪುತ್ರರು, ಪುತ್ರಿಯನ್ನು ಅಗಲಿದ್ದಾರೆ.

## ಉದ್ಘಾಟನೆಗೊಳ್ಳಬೇಕಿದ್ದ ನೂತನ ಮಳಿಗೆ ಮಾಲಿಕ ಕರೆಂಟ್ ಶಾಕ್‌ಗೆ ಬಲಿ



**ತೊಕ್ಕೊಟ್ಟು:** ನೂತನ ವಸ್ತ್ರಮಳಿಗೆಯ ಉದ್ಘಾಟನೆಗೆ ಸಿದ್ಧತೆ ನಡೆಸುತ್ತಿದ್ದ ಯುವಕನೊಬ್ಬ ಅದೇ ಮಳಿಗೆಯಲ್ಲಿ ವಿದ್ಯುತ್ ಆಘಾತಕ್ಕೊಳಗಾಗಿ ಮೃತಪಟ್ಟ ಘಟನೆ ತೊಕ್ಕೊಟ್ಟುವಿನಲ್ಲಿ ರವಿವಾರ ರಾತ್ರಿ ನಡೆದಿದೆ.

ಮೃತರನ್ನು ಮೂಲತಃ ಪಜೀರು ಬೆಂಗೋಡಿ ಪದವು ನಿವಾಸಿ ಹಾಗೂ ಪ್ರಸ್ತುತ ಮಂಗಳೂರಿನ ಪಾಂಡೇಶ್ವರ ಶಿವನಗರದಲ್ಲಿ ವಾಸವಾಗಿದ್ದ ಸಲ್ಮಾನ್ ಫಾರಿಶ್ (20) ಎಂದು ಗುರುತಿಸಲಾಗಿದೆ.ತೊಕ್ಕೊಟ್ಟುವಿನ ಖಾಸಗಿ ವಾಣಿಜ್ಯ ಸಂಕೀರ್ಣದಲ್ಲಿ ಸಲ್ಮಾನ್ ಫಾರಿಶ್ ಮಾಲಕತ್ವದಲ್ಲಿ ನೂತನ ವಸ್ತ್ರಮಳಿಗೆಯನ್ನು ಇದೇ ಶುಕ್ರವಾರ ಉದ್ಘಾಟಿಸಲು ನಿರ್ಧರಿಸಲಾಗಿತ್ತು. ಅದರ ಪೂರ್ವಸಿದ್ಧತಾ ಕಾರ್ಯಗಳ ಭಾಗವಾಗಿ ರವಿವಾರ ರಾತ್ರಿ ಮಳಿಗೆಯಲ್ಲಿ ವಿದ್ಯುತ್ ಸಂಪರ್ಕ ಸೇರಿದಂತೆ ವಿವಿಧ ಕೆಲಸಗಳು ನಡೆಯುತ್ತಿತ್ತು ಎನ್ನಲಾಗಿದೆ.ಈ ವೇಳೆ ಸಲ್ಮಾನ್ ಫಾರಿಶ್ ಅವರಿಗೆ ಏಕಾಏಕಿ ವಿದ್ಯುತ್ ಆಘಾತವಾಗಿದ್ದು, ಮಳಿಗೆಯಲ್ಲಿದ್ದ ಕಾರ್ಮಿಕರು ತಕ್ಷಣವೇ ಅವರನ್ನು ಆಟೋ ರಿಕ್ಷಾದಲ್ಲಿ ದೇರಳಕಟ್ಟೆಯ ಖಾಸಗಿ ಆಸ್ಪತ್ರೆಗೆ ಕರೆದೊಯ್ದರು. ಆದರೆ ದಾರಿಮಧ್ಯೆಯೇ ಅವರು ಮೃತಪಟ್ಟಿರುವುದಾಗಿ ತಿಳಿದುಬಂದಿದೆ.

### ಕುತ್ತಾರು ರಾಜರಾಜೇಶ್ವರಿ ಸಿದ್ಧಿ ವಿನಾಯಕ ಕ್ಷೇತ್ರದಲ್ಲಿ ಸನಾತನ ಹಿಂದೂ ಸೇವಾ ಪ್ರತಿಷ್ಠಾನ ಉದ್ಘಾಟನೆ

# ಕರಾವಳಿ ಭಾಗದಲ್ಲಿ ಹಿಂದೂ ಶಕ್ತಿ ಗಟ್ಟಿಗೊಳ್ಳಲಿ: ಸುರೇಶ್




**ಉಳ್ಳಾಲ:** ಇತ್ತೀಚೆಗಷ್ಟೆ ಕೇಂದ್ರ ಸರಕಾರವು ವಂದೇ ಮಾತರಂ ಗೀತೆಗೆ ಸಲ್ಲಬೇಕಾದ ನಿಜವಾದ ಸ್ಥಾನ ಮಾನವನ್ನು ಮತ್ತೆ ಕಲ್ಪಿಸಿ ಕೊಟ್ಟಿದೆ.ಎಲ್ಲಾ ಕಾರ್ಯಕ್ರಮಗಳಲ್ಲೂ ವಂದೇ ಮಾತರಂ ಗೀತೆಯನ್ನ ಪೂರ್ತಿಯಾಗಿ ಹಾಡುವ ಮೂಲಕ ನಾವೆಲ್ಲರೂ ಹೊಸ ಚೈತನ್ಯದೊಂದಿಗೆ ಹಿಂದುತ್ವದ ಕಿಚ್ಚು ಹಚ್ಚಿಸಬೇಕಿದೆ. ಸೇವಾ ಚಟುವಟಿಕೆ, ಯುವಕ, ಯುವತಿಯರಲ್ಲಿ ಜಾಗೃತಿ ಮೂಡಿಸುವ ನಿಟ್ಟಿನಲ್ಲಿ ಹಿರಿಯರು ಸೇರಿ ಈ ಭಾಗದ ಅವಶ್ಯಕತೆ ಮನಗಂಡು ಸನಾತನ ಹಿಂದೂ ಸೇವಾ ಪ್ರತಿಷ್ಠಾನವೆಂಬ ನೂತನ ಸಂಘಟನೆ ಹುಟ್ಟು ಹಾಕಿದ್ದು ಬಹಳ ಸಂತಸದ ವಿಚಾರವಾಗಿದೆಯೆಂದು ಬೆಂಗಳೂರು ರಾಜಾಜಿನಗರದ ಶಾಸಕರು, ಮಾಜಿ ಸಚಿವರಾದ ಸುರೇಶ್ ಕುಮಾರ್ ಹೇಳಿದರು.

ಕುತ್ತಾರಿನ ಶ್ರೀ ರಾಜರಾಜೇಶ್ವರಿ ಸಿದ್ಧಿವಿನಾಯಕ ಕ್ಷೇತ್ರದ ದಿ.ಲೋಕಯ್ಯ ಗಟ್ಟಿ ವೇದಿಕೆಯಲ್ಲಿ ನೂತನವಾಗಿ ಅಸ್ತಿತ್ವಕ್ಕೆ ಬಂದ "ಸನಾತನ ಹಿಂದೂ ಸೇವಾ ಪ್ರತಿಷ್ಠಾನ"ವನ್ನು ಭಾನುವಾರದಂದು ಉದ್ಘಾಟಿಸಿ ಅವರು ಮಾತನಾಡಿದರು. ನೂತನ ಸಂಘಟನೆಯ ಉದ್ದೇಶಗಳು ಹೆಚ್ಚು ಪ್ರಖರವಾಗಿ, ವಿಸ್ತಾರಗೊಂಡು ಎಲ್ಲರ ಮನೆ, ಮನ ಮುಟ್ಟಬೇಕು. ಸನಾತನ ಹಿಂದೂ ಸೇವಾ ಪ್ರತಿಷ್ಠಾನದ ಮೂಲಕ ಕರಾವಳಿ ಭಾಗದಲ್ಲಿ ಹಿಂದೂ ಶಕ್ತಿ ಗಟ್ಟಿಗೊಳ್ಳಲೆಂದು ಆಶಿಸಿದರು.

ರಾಷ್ಟ್ರೀಯ ಸ್ವಯಂಸೇವಕ ಸಂಘದ ಕರ್ನಾಟಕ ದಕ್ಷಿಣ ಪ್ರಾಂತ ಸಹ ಕಾರ್ಯವಾಹಕರಾದ ಪ್ರಕಾಶ್ ಪಿ.ಎಸ್ ಅವರು ಸನಾತನ ಹಿಂದೂ ಸೇವಾ ಪ್ರತಿಷ್ಠಾನದ ಲಾಂಛನವನ್ನು ಲೋಕಾರ್ಪಣೆಗೊಳಿಸಿದರು.

ಎಂಭತ್ತು ವರುಷಗಳನ್ನು ಪೂರೈಸಿದ ಉಳ್ಳಾಲದ ಮಾಜಿ ಶಾಸಕರಾದ ಕೆ.ಜಯರಾಮ ಶೆಟ್ಟಿಯವರಿಗೆ ಪ್ರತಿಷ್ಠಾನದ ವತಿಯಿಂದ "ಜಯರಾಮಾಭಿವಂದನೆ"ಯನ್ನು ಸಲ್ಲಿಸಲಾಯಿತು.

> **ಉಳ್ಳಾಲ ಭಾಗದಲ್ಲಿ ಹಿಂದೂಗಳು ಅಲ್ಪಸಂಖ್ಯಾತರಾಗುತ್ತಿರುವ ಸನ್ನಿವೇಶದಲ್ಲಿ, ಹಿಂದೂಗಳ ಜನಸಂಖ್ಯೆಯಿಂದ ಹಿಡಿದು ಹಿಂದೂ ಶಕ್ತಿಯ ವರ್ಧನೆ ಮಾಡಬೇಕಿದೆ.ಆ ನಿಟ್ಟಿನಲ್ಲಿ ಸನಾತನ ಹಿಂದೂ ಸೇವಾ ಪ್ರತಿಷ್ಠಾನವು ಕಾರ್ಯ ಪ್ರವೃತ್ತಗೊಳ್ಳಬೇಕಿದೆ. ಎರಡು ಸಾವಿರ ವರುಷದ ನಿರಂತರ ಪರಕೀಯರ ದಾಳಿಯ ಹೊರತಾಗಿಯೂ ಇಂದಿಗೂ ಸಾವಿಲ್ಲದೆ ಜೀವಂತವಾಗಿರುವ ಸನಾತನ ಹಿಂದೂ ಸಮಾಜ ನಮ್ಮದಾಗಿದೆ.**
>
> ■ ಪಿ.ಎಸ್.ಪ್ರಕಾಶ್

ಮಾಜಿ ಸಂಸದರಾದ ನಳಿನ್ ಕುಮಾರ್ ಕಟೀಲು, ಜಾಗತಿಕ ಬಂಟರ ಸಂಘದ ಅಧ್ಯಕ್ಷರಾದ ಐಕಳ ಹರೀಶ್ ಶೆಟ್ಟಿ, ಕನ್ಯಾಕುಮಾರಿ ಕುಮಾರನ್ ಪೈಲಮೆಂಟ್ಸ್ ಪ್ರೈ.ಲಿ. ನಿರ್ದೇಶಕರಾದ ಅವಿನಾಶ್ ಕೆ.ಎಸ್, ಉದ್ಯಮಿಗಳಾದ ಅಶ್ವಿನ್ ಪುತ್ರನ್ ಬೋಳೂರು, ಹರೀಶ್ ಕುತ್ತಾರು, ಚಂದ್ರಶೇಖರ ಗಟ್ಟಿ ಗುಂಡ್ಯ, ಸಮಾಜ ಸೇವಕಿ ಪ್ರಫುಲ್ಲ ದೇವಾಡಿಗ ಮೊದಲಾದವರು ಉಪಸ್ಥಿತರಿದ್ದರು.

ಪ್ರತಿಷ್ಠಾನದ ಅಧ್ಯಕ್ಷರಾದ ಸುರೇಶ್ ಚೌಟ ಕಕ್ಕೆಮಜಲು ಸ್ವಾಗತಿಸಿದರು.ಸಂಚಾಲಕರಾದ ಪವಿತ್ರ ಕುಮಾರ್ ಗಟ್ಟಿ ಪ್ರಸ್ತಾವನೆಗೈದರು. ಡಾ.ಅರುಣ್ ಉಳ್ಳಾಲ್ ನಿರೂಪಿಸಿದರು. ಶಿವರಾಮ ಶೆಟ್ಟಿ ಕುಂಪಲ ವಂದಿಸಿದರು.

ಚೆಂಬುಗುಡ್ಡೆಯ ಪ್ರತೀಕ್ಷ ,ಗಾಯತ್ರಿ ಕುಟುಂಬದ ಮನೆ ದುರಸ್ತಿ, ಪಾರ್ಶ್ವ ವಾಯು ಪೀಡಿತ ಅಂಬ್ಲಮೊಗರಿನ ಕುಮಾರನ್, ಕಿಡ್ನಿ ವೈಫಲ್ಯದಿಂದ ಬಳಲುತ್ತಿರುವ ಕೋಟೆಕಾರಿನ ಮಹೇಂದ್ರ ಆಚಾರ್, ಹುಟ್ಟು ಅಂಗವೈಕಲ್ಯದಿಂದ ಬಳಲುತ್ತಿರುವ ರತಿದೇವಿ ಕಕ್ಕೆಮಜಲು, ಹಿರಿಯ ಹಿಂದೂ ಕಾರ್ಯಕರ್ತ ತೇಜ್ ಪಾಲ್ ಅಮೀನ್ ಅವರಿಗೆ ಪ್ರತಿಷ್ಠಾನದ ವತಿಯಿಂದ ಸಹಾಯಧನ ವಿತರಿಸಲಾಯಿತು.

**ಸನಾತನಾಭಿವಂದನೆ**

ಹಿರಿಯ ಧರ್ಮ ಸೇವಾಳುಗಳಾದ ಡಾ.ಎಮ್.ಬಿ ಪುರಾಣಿಕ್,ಪ್ರೊ.ಪಿ.ಅನಂತಕೃಷ್ಣ ಭಟ್,ಮಾಜಿ ಶಾಸಕಿ ಶಕುಂತಲಾ ಶೆಟ್ಟಿ,ಉಳ್ಳಾಲ ಶ್ರೀಕರ ಕಿಣಿ,ವೆಂಕಪ್ಪ ಮಾಸ್ಟರ್ ಅಸೈಗೋಳಿ,ಸೀತಾರಾಮ ಬಂಗೇರ ಕೊಲ್ಯ,ಬಾಬು ಶೆಟ್ಟಿ ಕುತ್ತಾರು,ಉಳ್ಳಾಲ ತೇಜ್ ಪಾಲ್ ಅಮೀನ್ ಪರವಾಗಿ ಅವರ ಧರ್ಮ ಪತ್ನಿಗೆ ಸನಾತನಾಭಿವಂದನೆ ಸಲ್ಲಿಸಿ ಗೌರವಿಸಲಾಯಿತು.

# ಉನ್ನತ ಶಿಕ್ಷಣ ಪಡೆದವರ ಪಾಲಕರೇ ಆಶ್ರಮ ಸೇರುತ್ತಿರುವುದು ಬೇಸರದ ಸಂಗತಿ: ಶ್ರೀಕೃಷ್ಣ ಶಿವಕೃಪಾ ಕುಂಜತ್ತೂರು



**ಕೊಣಾಜೆ:** ಉತ್ತಮ ಸಂಸ್ಕಾರದೊಂದಿಗೆ ನಮ್ಮಲ್ಲಿರುವ ಅಜ್ಞಾನದ ಕತ್ತಲೆಯನ್ನು ದೂರಗೊಳಿಸಬೇಕು. ನಾವು ಎಷ್ಟು ದೊಡ್ಡವರಾದರೂ ತಂದೆ ತಾಯಿ ಋಣ ತೀರಿಸಲು ಸಾಧ್ಯವಿಲ್ಲ. ಆದರೆ ಇಂದು ಆಶ್ರಮವಾಸಿಗಳ ಸಂಖ್ಯೆ ಹೆಚ್ಚಾಗುತ್ತಿದೆ. ಉನ್ನತ ಶಿಕ್ಷಣ ಪಡೆದವರು, ಉತ್ತಮ ಉದ್ಯೋಗದಲ್ಲಿರುವವರ ತಂದೆ ತಾಯಿಗಳೇ ಹೆಚ್ಚಾಗಿ ಆಶ್ರಮ ಸೇರುತ್ತಿರುವುದು ಬೇಸರದ ಸಂಗತಿಯಾಗಿದೆ. ಸಂಸ್ಕಾರವಿಲ್ಲದ ಶಿಕ್ಷಣ, ಉದ್ಯೋಗ ನಮಗೆ ಅಗತ್ಯವಿದೆಯೇ? ಉತ್ತಮ ಸಂಸ್ಕಾರದೊಂದಿಗೆ ತಂದೆ ತಾಯಿಯನ್ನು ಗೌರವಿಸೋಣ ಎಂದು ಶ್ರೀಕೃಷ್ಣ ಶಿವಕೃಪಾ ಕುಂಜತ್ತೂರು ಹೇಳಿದರು.

ಅವರು ಗುಳಿಗ ಕೊರಗಜ್ಜ ಸೇವಾ ಸಮಿತಿ ಅಸೈಗೋಳಿ ಇದರ ಆಶ್ರಯದಲ್ಲಿ ನಡೆಯುವ ಕೋಲೋತ್ಸವ ಹಾಗೂ ಇತರ ಧಾರ್ಮಿಕ ಕಾರ್ಯಕ್ರಮದ ಅಂಗವಾಗಿ ನಡೆದ ಧಾರ್ಮಿಕ ಸಭಾ ಕಾರ್ಯಕ್ರಮದಲ್ಲಿ ಭಾಗವಹಿಸಿ ಮಾತನಾಡಿದರು.

ಮಾತೆ, ಪ್ರಕೃತಿ, ಶಕ್ತಿ ನಮ್ಮ ಜೀವನದ ಮಹತ್ತರವಾದ ಪಾತ್ರವಹಿಸುತ್ತದೆ ಎಂದರು.

ದೈವ ಪಾತ್ರಿ ಪ್ರವೀಣ್ ಆಚಾರ್ಯ ಕಾರ್ಯಕ್ರಮ ಉದ್ಘಾಟಿಸಿದರು. ಕೊಣಾಜೆ ಠಾಣೆ ಉಪನಿರೀಕ್ಷರಾದ ನಾಗಾರಾಜ್ ಅವರು ಮಾತನಾಡಿ, ತಂತ್ರಜ್ಞಾನ ಎಷ್ಟು ಮುಂದುವರಿದರೂ ನಮ್ಮ ಸಂಪ್ರದಾಯ,ಸಂಸ್ಕೃತಿ,ದೈವಾರಾಧನೆಂು ಮಹತ್ವವನ್ನು ಮಕ್ಕಳಿಗೆ ತಿಳಿಯ ಪಡಿಸುವ ಕಾರ್ಯ ಆಗಬೇಕಿದೆ ಎಂದರು.

ಮಂಗಳೂರು ವಿವಿ ಕುಲಸಚಿವ ಪ್ರೊ.ಗಣೇಶ್ ಸಂಜೀವ್ ಅವರು ಮಾತನಾಡಿ, ನಾವು ಮಾಡುವ ಕಾರ್ಯದಲ್ಲಿ ನಂಬಿಕೆಗಳಿದ್ದರೆ ಮಾತ್ರ ಯಶಸ್ಸು ಸಿಗುತ್ತದೆ. ಪ್ರತಿಯೊಂದು ಕೆಲಸದ ಔಚಿತ್ಯವನ್ನು ಅರ್ಥ ಮಾಡಿಕೊಳ್ಳಬೇಕು ಎಂದರು.

ಕಾರ್ಯಕ್ರಮದಲ್ಲಿ ನಿವೃತ್ತ ಶಿಕ್ಷಕರಾದ ರವೀಂದ್ರ ರೈ ಕಲ್ಲಿಮಾರ್ ಮಾತನಾಡಿ, ಪ್ರತಿಯೊಬ್ಬರೂ ನಂಬಿಕೆ ಅಗತ್ಯ. ಕಲಾ ಮಾಧ್ಯಮಗಳು ನಮಗೆ ಸಂಸ್ಕಾರವನ್ನು ನೀಡಿ ಉನ್ನತಿಯತ್ತ ಕೊಂಡೊಯ್ಯುತ್ತದೆ ಎಂದರು.

ಗುಳಿಗಜ್ಜ ಕೊರಗಜ್ಜ ಸೇವಾ ಸಮಿತಿಯ ಅಧ್ಯಕ್ಷರಾದ ಭಾಸ್ಕರ ಕೆ ಗುಡ್ಡೆಮಾರ್ ಅವರು ಅಧ್ಯಕ್ಷತೆಯನ್ನು ವಹಿಸಿ ಮಾತನಾಡಿದರು.

ವಿವಿಧ ಕ್ಷೇತ್ರದ ಸಾಧಕರಾದ ವಂಶೀ ರತ್ನ ಕುಮಾರ್, ಬಾಬು ಮೊಂಟೆಪದವು, ಆನಂದ ಪುಲ್ಲು, ಆದ್ಯ ಭೋವಿ, ರಿತಿಷಾ ಕೆಜೆ ಅವರನ್ನು ಸನ್ಮಾನಿಸಿ ಗೌರವಿಸಲಾಯಿತು. ಶೈಕ್ಷಣಿಕ ಸಾಧಕರಾದ ಸುಚಿತಾ ದೇವಾಡಿಗ, ತೃಷಾ, ಭೂಮಿಕಾ, ಪ್ರತೀಕ್ಷಾ ಅವರನ್ನು ಅಭಿನಂದಿಸಲಾಯಿತು.

ಕಾರ್ಯಕ್ರಮದಲ್ಲಿ ಕೊಣಾಜೆ ಗ್ರಾಮ ಪಂಚಾಯತ್ ಅಧ್ಯಕ್ಷರಾದ ಗೀತಾ ದಾಮೋದರ್ ಕುಂದರ್, ಮುಖಂಡರಾದ ರವಿ ರೈ ಪಜೀರು, ಶ್ರೀನಿವಾಸ ಶೆಟ್ಟಿ ಪುಲ್ಲು, ಪಟ್ಟೋರಿ ಶ್ರೀ ನಾಗಬ್ರಹ್ಮ ಭಜನಾ ಮಂಡಳಿಯ ಅಧ್ಯಕ್ಷರಾದ ದಿನೇಶ್ ಕುಲಾಲ್ ಕಲಾಯಿ, ಜೈ ಶ್ರೀರಾಮ ಫ್ರೆಂಡ್ಸ್ ಸರ್ಕಲ್ ಕಕ್ಕೆಮಜಲು ಇದರ ಅಧ್ಯಕ್ಷರಾದ ಚೇತನ್, ಬೇಬಿಂದ್ರ ಬರಿಕೆ, ಹೇಮಂತ್ ಕುಮಾರ್ ಮೊದಲಾದವರು ಉಪಸ್ಥಿತರಿದ್ದರು.

ಸಂದೀಪ್ ಅಂಚನ್ ಅವರು ಸ್ವಾಗತಿಸಿದರು. ಪ್ರೇಮದಾಸ್ ಕರ್ಕೇರ ವಂದಿಸಿದರು. ಸುಮನಾ ಗಿರೀಶ್ ಪ್ರಶಸ್ತಿ ಪತ್ರ ವಾಚಿಸಿದರು. ಪ್ರತಾಪ್, ಯೋಗೀಶ್ ಮಲ್ಲಿಗೆ ಮಾಡು ನಿರೂಪಿಸಿದರು.

## ಸಹಕಾರ ಸಂಘಗಳಿಗೆ ಶೀಘ್ರ ತರಬೇತಿ: ಡಾ.ಎಂ.ಎನ್ ರಾಜೇಂದ್ರಕುಮಾರ್

**ಮಂಗಳೂರು;** ಬ್ಯಾಂಕಿನ ಗ್ರಾಹಕರಿಗೆ ಡಿಜಿಟಲ್ ಬ್ಯಾಂಕಿಂಗ್ ಸೇವೆಗಳಾದ ಯುಪಿಐ ಮತ್ತು ಐಎಂಪಿಎಸ್ ಸೌಲಭ್ಯಗಳಿಗೆ ಸಾಂಕೇತಿಕವಾಗಿ ದೀಪಬೆಳಗಿಸುವುದರ ಎಸ್‌ಸಿಡಿಸಿಸಿ ಬ್ಯಾಂಕ್‌ನ ಸಭಾಂಗಣದಲ್ಲಿ ಎಸ್‌ಸಿಡಿಸಿಸಿ ಬ್ಯಾಂಕ್ ಅಧ್ಯಕ್ಷ ಡಾ.ಎಂ.ಎನ್. ರಾಜೇಂದ್ರ ಕುಮಾರ್ ಚಾಲನೆ ನೀಡಿದ್ದಾರೆ.

ಯುಪಿಐ ಮತ್ತು ಐಎಂಪಿಎಸ್ ವ್ಯವಸ್ಥೆಯ ಪೋಸ್ಟರ್ ಹಾಗು ಕ್ಯೂ ಆರ್ ಕೋಡ್‌ನ್ನು ರಾಜೇಂದ್ರನ್ ಕುಮಾರ್ ಅನಾವರಣಗೊಳಿಸಿದ್ರು. ಬಳಿಕ ಮಾತನಾಡಿದ ಇವರು, ದಕ್ಷಿಣ ಕನ್ನಡ ಜಿಲ್ಲಾ ಕೇಂದ್ರ ಸಹಕಾರಿ ಬ್ಯಾಂಕ್ ತಮ್ಮ ಗ್ರಾಹಕರಿಗೆ ಪ್ರಸ್ತುತ ಅವಶ್ಯಕತೆಗೆ ಅನುಗುಣವಾಗಿ ಡಿಜಿಟಲ್ ಬ್ಯಾಂಕಿಂಗ್ ಸೌಲಭ್ಯವನ್ನು ಅಳವಡಿಸಿಕೊಂಡು ವಿಸ್ತರಿಸಿದೆ. ಯುಪಿಐ ಮತ್ತು ಐಎಂಪಿಎಸ್ ಡಿಜಿಟಲ್ ಬ್ಯಾಂಕಿಂಗ್ ವಿಸ್ತರಿತ ಸೌಲಭ್ಯಕ್ಕೆ ಈಗಾಗಲೇ ಚಾಲನೆ ನೀಡಲಾಗಿದೆ. ಈ ಸೌಲಭ್ಯ ಬ್ಯಾಂಕಿನ ಎಲ್ಲಾ ಶಾಖೆಗಳಿಗೂ ವಿಸ್ತರಣೆ ಮಾಡಲಾಗುವುದು ಎಂದು ತಿಳಿಸಿದ್ದಾರೆ.

ಸಮಾರಂಭದಲ್ಲಿ ಸಾಫ್ಟ್ ವೇರ್ ತಂತ್ರಜ್ಞರಾದ ನಂದಕುಮಾರ್ ಅವರು ಐಎಂಪಿಎಸ್ ಬಗ್ಗೆ ತಾಂತ್ರಿಕ ಮಾಹಿತಿ ನೀಡಿದ್ದಾರೆ.

ಕಾರ್ಯಕ್ರಮದಲ್ಲಿ ಉಪಾಧ್ಯಕ್ಷರಾದ ವಿನಯ್ ಕುಮಾರ್ ಸೂರಿಂಜೆ, ನಿರ್ದೇಶಕರಾದ ಭಾಸ್ಕರ್ ಎಸ್. ಕೋಟ್ಯಾನ್, ಎಸ್.ಬಿ.ಜಯರಾಮ್ ರೈ, ಸದಾಶಿವ ಉಳ್ಳಾಲ್, ಮಹೇಶ್ ಹೆಗ್ಡೆ ಎಂ, ಅಶೋಕ್ ಕುಮಾರ್ ಶೆಟ್ಟಿ, ರಾಜೇಶ್ ರಾವ್, ಎಂ.ವಾದಿರಾಜ ಶೆಟ್ಟಿ, ಎಸ್.ಎನ್ ಮನ್ಮಥ, ಕುಶಾಲಪ್ಪ ಗೌಡ, ಮುಖ್ಯ ಕಾರ್ಯನಿರ್ವಹಣಾಧಿಕಾರಿ ಗೋಪಾಲಕೃಷ್ಣ ಭಟ್, ಸಹಕಾರ ಸಂಘಗಳ ಉಪ ನಿಬಂಧಕ ರಮೇಶ್ ಎಚ್.ಎನ್, ಬ್ಯಾಂಕಿನ ನಿರ್ದೇಶಕ ಶಶಿಕುಮಾರ್ ರೈ ಬಾಲ್ಯೊಟ್ಟು, ರಾಜೀವ್ ಕಕ್ಕೆ ಪದವು ಸೇರಿದಂತೆ ಮತ್ತಿತರರು ಉಪಸ್ಥಿತರಿದ್ದರು.

### ಲೋಕೋಪಯೋಗಿ ಇಲಾಖೆಯವರು ತೊಕ್ಕೊಟ್ಟುವಿನಲ್ಲಿ ಸಿಐಟಿಯು ವತಿಯಿಂದ ಪ್ರತಿಭಟನೆ

# ಕಾರ್ಮಿಕ ಸಂಹಿತೆಗಳ ವಿರುದ್ಧ ಅಖಿಲ ಭಾರತ ಮಹಾಮುಷ್ಕರ



**ತೊಕ್ಕೊಟ್ಟು:** ಲೋಕೋಪಯೋಗಿ ಇಲಾಖೆಯವರು ತೊಕ್ಕೊಟ್ಟುವಿನಿಂದ ನಾಟೆಕಲ ವರೆಗಿನ ಬೀದಿಬದಿ ವ್ಯಾಪಾರಿಗಳ ವಿರುದ್ಧ ಬುಲ್ಡೋಜರ್ ಕಾರ್ಯಾಚರಣೆ ನಡೆಸಿರುವುದನ್ನು ಖಂಡಿಸಿ ದ.ಕ ಜಿಲ್ಲಾ ಬೀದಿಬದಿ ವ್ಯಾಪಾರಸ್ಥರ ಸಂಘದ ಉಳ್ಳಾಲ ತಾಲೂಕು ಸಮಿತಿ ನೇತೃತ್ವದಲ್ಲಿ ತೊಕ್ಕೊಟ್ಟು ಜಂಕ್ಷನ್‌ನಲ್ಲಿ ಪ್ರತಿಭಟನೆ ನಡೆದಿದೆ. ಪ್ರತಿಭಟನೆಯಲ್ಲಿ ದ.ಕ ಜಿಲ್ಲಾ ಬೀದಿಬದಿ ವ್ಯಾಪಾರಸ್ಥರ ಸಂಘದ ಗೌರವಾಧ್ಯಕ್ಷರಾದ ಬಿ.ಕೆ ಇಮ್ತಿಯಾಝ್ ಮಾತನಾಡಿ, ದೇಶದಲ್ಲಿ ಬೀದಿಬದಿ ವ್ಯಾಪಾರಿಗಳಿಗಾಗಿ ಮಾಡಿರುವ ಕಾನೂನು, ನಿಯಮಮಾವಳಿಗಳು ಊಟಕ್ಕಿಲ್ಲದ ಉಪ್ಪಿನಕಾಯಿಯಂತಾಗಿದೆ. ಬಡ ಬೀದಿಬದಿ ವ್ಯಾಪಾರಿಗಳ ಮೇಲಿನ ಬುಲ್ಡೋಜರ್ ದಾಳಿಯು ಸರಕಾರ–ಕ್ಕೆ ಶೋಭೆ ತರುವುದಿಲ್ಲ. ಅತ್ಯಂತ ಭ್ರಷ್ಟವಾಗಿರುವ ಲೋಕೋಪಯೋಗಿ ಮತ್ತು ಹೆದ್ದಾರಿ ಇಲಾಖೆಗಳ ದಬ್ಬಾಳಿಕೆ ಎದುರಿಸಲು ಬೀದಿಬದಿ ವ್ಯಾಪಾರಿಗಳು ಸಿದ್ಧರಾಗಿದ್ದಾರೆಂದು ಆಕ್ರೋಶ ವ್ಯಕ್ತಪಡಿಸಿದ್ದಾರೆ.

ಸಿಐಟಿಯು ಜಿಲ್ಲಾ ಪ್ರಧಾನ ಕಾರ್ಯದರ್ಶಿ ಸುನಿಲ್ ಕುಮಾರ್ ಬಜಾಲ್ ಮಾತನಾಡಿ ಬೀದಿಬದಿ ವ್ಯಾಪಾರಿಗಳು ಆರ್ಥಿಕವಾಗಿ ದುರ್ಬಲರಾಗಿದ್ದು ಕೌಶಲ್ಯ ಮತ್ತು ಶಿಕ್ಷಣದಿಂದ ವಂಚಿತರಾದವರಾಗಿದ್ದಾರೆ. ಅಂತಹ ದುರ್ಬಲರ ಮೇಲೆ ಬುಲ್ಡೋಜರ್ ಪ್ರಯೋಗಿಸಿ ಅವರ ಬದುಕನ್ನು ನಾಶ ಮಾಡಲು ಹೊರಟಿರುವುದು ಖೇದಕರ.ಬಡವರ ವಿರುದ್ಧ ನಡೆಸಿರುವ ಇಂತಹ ಕಾರ್ಯಾಚರಣೆಗಳು ಸರಕಾರದ ಸಾಧನೆಯೇ ಎಂದು ಪ್ರಶ್ನಿಸಿದರು.

ಪ್ರತಿಭಟನೆಯಲ್ಲಿ ಹಿರಿಯ ರೈತ ನಾಯಕ ಕೃಷ್ಣಪ್ಪ ಸಾಲಿಯಾನ್,ಡಿವೈಎಫ್ಐ ತಾಲೂಕು ಕಾರ್ಯದರ್ಶಿ ರಿಜ್ವಾನ್ ಹರೇಕಳ,ಸಂಘದ ಅಧ್ಯಕ್ಷ ಮುಝಾಫರ್ ಅಹ್ಮದ್, ಸಂಘದ ಪ್ರ.ಕಾರ್ಯದರ್ಶಿ ಸಂತೋಷ್ ಆರ್.ಎಸ್, ಪ್ರಮುಖರಾದ ಶೇಖರ್ ಕುಂದರ್, ಸಿಐಟಿಯು ಜಿಲ್ಲಾ ಮುಖಂಡ ಸುಂದರ ಕುಂಪಲ, ಪ್ರಮೋದಿನಿ ಕಲ್ಲಾಪು, ಅಬ್ದುಲ್ ಖಾದರ್ ವಾಮಂಜೂರು, ಸಿಕಂದರ್ ಬೇಗ್, ವಿನಾಯಕ್ ಶೆಣೈ, ಹರೀಶ್ ಕೆರೆಬೈಲ್ ಮತ್ತಿತರರು ಉಪಸ್ಥಿತರಿದ್ದರು.

# ಅಲ್ ಬದ್ರಿಯತುಲ್ ತಿಭಿಯಾನ್ ಪ್ರೀ ಶಾಲೆಯಲ್ಲಿ ನಡೆಯಿತು ‘ಕಿಡ್ ಕೈಟ್ ಎಕ್ಸೋ’




**ಇರಾ:** ಇಲ್ಲಿನ ಬಾಳೆಪುಣಿ ಜುಮಾ ಮಸೀದಿಯ ಅಧೀನದಲ್ಲಿ ಕಾರ್ಯಚರಿಸುತ್ತಿರುವ ಅಲ್ ಬದ್ರಿಯತುಲ್ ತಿಭಿಯಾನ್ ಪ್ರೀ ಶಾಲೆಯಲ್ಲಿ ‘ಕಿಡ್ ಕೈಟ್ ಎಕ್ಸೋ’ ಕಾರ್ಯಕ್ರಮವು ಯಶಸ್ವಿಯಾಗಿ ನಡೆಯಿತು.

ಕಾರ್ಯಕ್ರಮದಲ್ಲಿ ಮಕ್ಕಳ ಪೋಷಕರು ಸೇರಿದಂತೆ ಊರ ಹಿರಿಯರು ಭಾಗಿಯಾಗಿ ಶುಭ ಹಾರೈಸಿದರು.


ಈ ಸಂದರ್ಭದಲ್ಲಿ ಶಾಲಾ ಉಸ್ತುವಾರಿ ಮುಸ್ತಫ ಸಅದಿ, ಹಿರಿಯರಾದ ಉಮ್ಮರ್ ಮುಸ್ಲಿಯಾರ್, ಅಬೂಬಕ್ಕರ್ ಸಂಕ, ಅಬೂಬಕ್ಕರ್ ಸಖಾಫಿ , ಸಿದ್ದೀಕ್ ಹಿಮಮಿ ಮತ್ತು ಹಬೀಬ್ ದಮ್ಮಾಮ್ ಸೇರಿದಂತೆ ಮತ್ತಿತರರು ಉಪಸ್ಥಿತರಿದ್ದರು.

# ಮಕ್ಕಳ ಶಾಲೆ ಸೇರ್ಪಡೆಗೆ ಪ್ರಮುಖ ಅಂಶಗಳು

**ಪ್ರವೀಣ್ ಶೆಟ್ಟಿ ಮೇಗಿನಮನೆ ಲೈಫ್ ಟಿಪ್ಸ್**

ಮಕ್ಕಳ ಭವಿಷ್ಯವನ್ನು ರೂಪಿಸುವಲ್ಲಿ ಶಾಲಾ ಶಿಕ್ಷಣ ಅತ್ಯಂತ ಮಹತ್ವದ ಪಾತ್ರ ವಹಿಸುತ್ತದೆ. ಆದ್ದರಿಂದ ಮಕ್ಕಳನ್ನು ಶಾಲೆಗೆ ಸೇರಿಸುವಾಗ ಪೋಷಕರು ಹೆಚ್ಚಿನ ಜಾಗ್ರತೆಯಿಂದ ನಿರ್ಧಾರ ಕೈಗೊಳ್ಳಬೇಕು. ಸರಿಯಾದ ಶಾಲೆ ಆಯ್ಕೆ ಮಾಡುವುದರಿಂದ ಮಕ್ಕಳ ವ್ಯಕ್ತಿತ್ವ, ವಿದ್ಯಾಭ್ಯಾಸ, ನೈತಿಕ ಮೌಲ್ಯಗಳು ಹಾಗೂ ಸಾಮಾಜಿಕ ಅರಿವು ಗಟ್ಟಿಯಾಗುತ್ತದೆ. ಶಾಲಾ ಸೇರ್ಪಡೆ ಒಂದು ಸಾಮಾನ್ಯ ಪ್ರಕ್ರಿಯೆಯಲ್ಲ; ಅದು ಮಕ್ಕಳ ಜೀವನದ ದಿಕ್ಕನ್ನು ನಿರ್ಧರಿಸುವ ಮಹತ್ವದ ಹಂತವಾಗಿದೆ.

ಮೊದಲನೆಯದಾಗಿ, ಶಾಲೆಯ ಶೈಕ್ಷಣಿಕ ಗುಣಮಟ್ಟವನ್ನು ಪರಿಶೀಲಿಸಬೇಕು. ಪಠ್ಯಕ್ರಮ ಸಮರ್ಪಕವಾಗಿದೆಯೇ? ವಿದ್ಯಾರ್ಥಿಗಳ ಫಲಿತಾಂಶ ಹೇಗಿದೆ? ಶಿಕ್ಷಕರ ಅರ್ಹತೆ, ಅನುಭವ ಮತ್ತು ಬೋಧನಾ ಶೈಲಿ ಹೇಗಿದೆ? ಇವು ಪ್ರಮುಖ ವಿಚಾರಗಳು. ಒಳ್ಳೆಯ ಶಿಕ್ಷಕರು ಮಕ್ಕಳಿಗೆ ಕೇವಲ ಪಾಠ ಹೇಳುವವರಲ್ಲ; ಅವರು ಮಾರ್ಗದರ್ಶಕರು, ಪ್ರೇರಣಾದಾಯಕರು ಮತ್ತು ವ್ಯಕ್ತಿತ್ವ ರೂಪಿಸುವ ಶಿಲ್ಪಿಗಳು. ವಿದ್ಯಾರ್ಥಿಗಳೊಂದಿಗೆ ಸ್ನೇಹಪೂರ್ಣವಾಗಿ, ಸಹನೆಯುತವಾಗಿ ವರ್ತಿಸುವ ಶಿಕ್ಷಕರಿರುವ ಶಾಲೆಯನ್ನು ಆರಿಸುವುದು ಸೂಕ್ತ.




ಎರಡನೆಯದಾಗಿ, ಶಾಲೆಯ ಪರಿಸರ ಹಾಗೂ ಮೂಲಸೌಕರ್ಯಗಳನ್ನು ಗಮನಿಸಬೇಕು. ತರಗತಿ ಕೊಠಡಿಗಳು ಸ್ವಚ್ಛವಾಗಿವೆಯೇ? ಕುಡಿಯುವ ಶುದ್ಧ ನೀರು, ಸ್ವಚ್ಛ ಶೌಚಾಲಯ, ಆಟದ ಮೈದಾನ, ಗ್ರಂಥಾಲಯ, ವಿಜ್ಞಾನ ಪ್ರಯೋಗಾಲಯ, ಕಂಪ್ಯೂಟರ್ ಸೌಲಭ್ಯ ಇತ್ಯಾದಿ ವ್ಯವಸ್ಥೆಗಳಿವೆಯೇ? ಇವು ಮಕ್ಕಳ ದೈಹಿಕ ಮತ್ತು ಮಾನಸಿಕ ಬೆಳವಣಿಗೆಗೆ ಅಗತ್ಯ. ಜೊತೆಗೆ ಸುರಕ್ಷತಾ ಕ್ರಮಗಳು ಸಿಸಿಟಿವಿ, ತರಬೇತಿ ಪಡೆದ ಸಿಬ್ಬಂದಿ, ಸುರಕ್ಷಿತ ಪ್ರವೇಶ ವ್ಯವಸ್ಥೆ ಇವೆಲ್ಲವೂ ಪರಿಶೀಲಿಸಬೇಕು.

ಮೂರನೆಯದಾಗಿ, ಶಾಲೆಯ ದೂರ ಮತ್ತು ಸಂಚಾರ ವ್ಯವಸ್ಥೆಯನ್ನು ಪರಿಗಣಿಸಬೇಕು. ಮನೆಗೆ ಹತ್ತಿರವಿರುವ ಶಾಲೆ ಮಕ್ಕಳಿಗೆ ಅನುಕೂಲಕರ. ದೂರವಾದರೆ ಸುರಕ್ಷಿತ ಮತ್ತು ವಿಶ್ವಾಸಾರ್ಹ ವಾಹನ ವ್ಯವಸ್ಥೆ ಇದೆಯೇ ಎಂಬುದನ್ನು ತಿಳಿದುಕೊಳ್ಳಬೇಕು. ಮಕ್ಕಳಿಗೆ ಹೆಚ್ಚು ಪ್ರಯಾಣದ ಒತ್ತಡವಾಗದಂತೆ ನೋಡಿಕೊಳ್ಳುವುದು ಮುಖ್ಯ.

ನಾಲ್ಕನೆಯದಾಗಿ, ಶಾಲೆಯ ಶಿಸ್ತು ಮತ್ತು ಮೌಲ್ಯಾಧಾರಿತ ಶಿಕ್ಷಣವನ್ನು ಗಮನಿಸಬೇಕು. ಕೇವಲ ಅಂಕಗಳಿಗೆ ಮಾತ್ರ ಒತ್ತು ನೀಡದೆ, ಮಕ್ಕಳಲ್ಲಿ ನೈತಿಕತೆ, ಪ್ರಾಮಾಣಿಕತೆ, ಸಾಮಾಜಿಕ ಜವಾಬ್ದಾರಿ, ಸಹಾನುಭೂತಿ ಮುಂತಾದ ಗುಣಗಳನ್ನು ಬೆಳೆಸುವ ಶಾಲೆ ಉತ್ತಮ. ಕ್ರೀಡೆ, ಸಾಂಸ್ಕೃತಿಕ ಚಟುವಟಿಕೆಗಳು, ಭಾಷಣ ಸ್ಪರ್ಧೆಗಳು, ವಿಜ್ಞಾನ ಮೇಳಗಳು ಮುಂತಾದ ಪಠ್ಯೇತರ ಚಟುವಟಿಕೆಗಳಿಗೆ ಅವಕಾಶ ನೀಡುವ ಶಾಲೆ ಮಕ್ಕಳ ಪ್ರತಿಭೆಯನ್ನು ಹೊರತೆಗೆದು ತರುತ್ತದೆ.

ಐದನೆಯದಾಗಿ, ಶುಲ್ಕ ಹಾಗೂ ಇತರ ವೆಚ್ಚಗಳನ್ನು ಪರಿಗಣಿಸಬೇಕು. ಶಾಲೆಯ ಶುಲ್ಕ ಪೋಷಕರ ಆರ್ಥಿಕ ಸಾಮರ್ಥ್ಯಕ್ಕೆ ಹೊಂದಿಕೆಯಾಗಬೇಕು. ಪುಸ್ತಕಗಳು, ಯೂನಿಫಾರ್ಮ್, ವಾಹನ ಶುಲ್ಕ, ವಿಶೇಷ ತರಗತಿಗಳು ಮುಂತಾದ ಖರ್ಚುಗಳ ವಿವರವನ್ನು ಮುಂಚಿತವಾಗಿ ತಿಳಿದುಕೊಳ್ಳುವುದು ಒಳಿತು. ಅತಿಯಾದ ಒತ್ತಡ ಉಂಟುಮಾಡುವ ಶಾಲೆಯನ್ನು ಆಯ್ಕೆ ಮಾಡುವುದಕ್ಕಿಂತ ಸಮತೋಲನದ ವ್ಯವಸ್ಥೆಯಿರುವ ಶಾಲೆ ಉತ್ತಮ.

ಆರನೆಯದಾಗಿ, ಪೋಷಕರೊಂದಿಗೆ ಶಾಲೆಯ ಸಂವಹನ ವ್ಯವಸ್ಥೆ ಹೇಗಿದೆ ಎಂಬುದನ್ನು ಗಮನಿಸಬೇಕು. ನಿಯಮಿತ ಪೋಷಕ–ಶಿಕ್ಷಕ ಸಭೆಗಳು ನಡೆಯುತ್ತಿವೆಯೇ? ಮಕ್ಕಳ ಪ್ರಗತಿ, ವರ್ತನೆ ಮತ್ತು ಸಾಮರ್ಥ್ಯದ ಬಗ್ಗೆ ಸ್ಪಷ್ಟ ಮಾಹಿತಿ ನೀಡಲಾಗುತ್ತಿದೆಯೇ? ಪೋಷಕರನ್ನು ಶಿಕ್ಷಣ ಪ್ರಕ್ರಿಯೆಯಲ್ಲಿ ಪಾಲುಗಾರರನ್ನಾಗಿ ಮಾಡಿಕೊಳ್ಳುವ ಶಾಲೆ ಮಕ್ಕಳ ಅಭಿವೃದ್ಧಿಗೆ ಹೆಚ್ಚಿನ ಸಹಾಯ ಮಾಡುತ್ತದೆ.

**ಪೋಷಕರಿಗೆ ನೈತಿಕ ಸಂದೇಶ**

ಮಕ್ಕಳನ್ನು ಉತ್ತಮ ಶಾಲೆಗೆ ಸೇರಿಸುವುದಷ್ಟೇ ಪೋಷಕರ ಕರ್ತವ್ಯವಲ್ಲ; ಅವರೊಂದಿಗೆ ಸಮಯ ಕಳೆಯುವುದು, ಪಾಠದಲ್ಲಿ ಸಹಾಯ ಮಾಡುವುದು, ಅವರ ಆಸಕ್ತಿಗಳನ್ನು ಪ್ರೋತ್ಸಾಹಿಸುವುದು ಕೂಡ ಸಮಾನವಾಗಿ ಮುಖ್ಯ. ಮಕ್ಕಳ ಮೇಲೆ ಅತಿಯಾದ ನಿರೀಕ್ಷೆಗಳನ್ನು ಹಾಕದೆ, ಅವರ ಸಾಮರ್ಥ್ಯ ಮತ್ತು ಆಸಕ್ತಿಯನ್ನು ಗುರುತಿಸಿ ಬೆಳೆಸಬೇಕು. ಇತರ ಮಕ್ಕಳೊಂದಿಗೆ ಹೋಲಿಕೆ ಮಾಡುವುದನ್ನು ತಪ್ಪಿಸಬೇಕು. ಪ್ರತಿಯೊಬ್ಬ ಮಗು ವಿಶಿಷ್ಟವಾಗಿದೆ ಎಂಬುದನ್ನು ಮನಗಾಣಬೇಕು.

ಪೋಷಕರು ಮಕ್ಕಳಿಗೆ ಮೊದಲ ಗುರುಗಳು. ಮನೆ ವಾತಾವರಣವೇ ಅವರ ವ್ಯಕ್ತಿತ್ವದ ನೆಲೆ. ಪ್ರೀತಿ, ಶಿಸ್ತು ಮತ್ತು ಮಾರ್ಗದರ್ಶನ ಈ ಮೂರೂ ಸಮತೋಲನದಲ್ಲಿದ್ದರೆ ಮಗು ಸಮಗ್ರವಾಗಿ ಬೆಳೆಯುತ್ತದೆ. ಶಾಲೆ ಶಿಕ್ಷಣ ನೀಡಬಹುದು; ಆದರೆ ಸಂಸ್ಕಾರ ಮತ್ತು ಮೌಲ್ಯಗಳನ್ನು ಮುಖ್ಯವಾಗಿ ಪೋಷಕರೇ ನೀಡಬೇಕು.

ಒಟ್ಟಿನಲ್ಲಿ, ಶಾಲಾ ಸೇರ್ಪಡೆಗೆ ಜಾಣ್ಮೆಯ ನಿರ್ಧಾರ ಹಾಗೂ ಪೋಷಕರ ಸಕ್ರಿಯ ಪಾತ್ರ ಅವಶ್ಯಕ. ಸರಿಯಾದ ಶಾಲೆ ಮತ್ತು ಸರಿಯಾದ ಮಾರ್ಗದರ್ಶನ ಒಂದಾಗಿ ಬಂದಾಗ ಮಕ್ಕಳ ಭವಿಷ್ಯ ಉಜ್ವಲವಾಗುತ್ತದೆ.












Ullalavani, Published by Ravi Bangera, Printed at DIGANTA MUDRANA LTD 5-184/185 NEAR INDUSTRIAL AREA YEYYADI MANGALARE, DAKSHINA KANNADA, KARNATAKA - 575008. News Editor: Mohan Kuthar.
Editorial Office at : Appachi Complex, Kuthar, Munnur Post, Someshwar Village, Ullal Tq - 575 017, Call : 9972528110. RNI:KNKAN/26/A0422. Email: ullalavani@gmail.com